ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 27 ಬುಧವಾರ 2025

₹4

ಸಂಪುಟ: 46 | ಸಂಚಿಕೆ: 131 | ಪುಟಗಳು: 12+VIII

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಮಿತ್ರ

ಸಂಚಾರ ನಿಯಮ ಉಲ್ಲಂಘನೆ ದಂಡದಲ್ಲಿ ಶೇ.50 ರಿಯಾಯ್ತಿ

ಮೈಸೂರು ಜಿಲ್ಲೆಯಲ್ಲಿ 8.81 ಲಕ್ಷ ದಂಡ ಪಾವತಿ

ಸೆ.12 ಕಡೇ ದಿನ

ಮೈಸೂರು, ಆ.26(ಬಿಎಲ್‌ಯು)– ಸಂಚಾರ ನಿಯಮ ಉಲ್ಲಂಘಿಸಿದ ವಾಹನ ಚಾಲಕರಿಗೆ ಶೇಕಡ 50 ರಷ್ಟು ರಿಯಾಯಿತಿಯಲ್ಲಿ ದಂಡ ಪಾವತಿಸಲು ಸರ್ಕಾರ ಅವಕಾಶ ಕಲ್ಪಿಸಿದ್ದು, ಮೈಸೂರು ಜಿಲ್ಲೆಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡಿದಂತಹ ಚಾಲಕರು ಕಳೆದ 3 ದಿನಗಳ ಅವಧಿಯಲ್ಲಿ 8,81,750 ರೂಪಾಯಿ ದಂಡ ಪಾವತಿ ಮಾಡಿದ್ದಾರೆ.

ಈ ಕುರಿತಂತೆ ಮಾಹಿತಿ ನೀಡಿರುವ ಮೈಸೂರು ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಲ್ಲಿಕ್, ಸರ್ಕಾರದ ಆದೇಶದಂತೆ ಶೇ.50ರಷ್ಟು ರಿಯಾಯಿತಿಯಲ್ಲಿ ದಂಡ ಪಾವತಿ ಮಾಡುವ ಬಗ್ಗೆ ಟ್ವಿಟರ್, ಫೇಸ್ ಬುಕ್, ವೆಬ್‌ಸೈಟ್, ಕೆಎಸ್‌ಪಿ ಆ್ಯಪ್ ಹಾಗೂ ಇತರೆ ಸಾಮಾಜಿಕ ಜಾಲತಾಣಗಳಲ್ಲಿ ಮಾಹಿತಿ ನೀಡಲಾಗಿದೆ ಎಂದು ಹೇಳಿದ್ದಾರೆ.

ಅಲ್ಲದೆ ಪ್ರತಿಯೊಂದು ಪೊಲೀಸ್ ಠಾಣಾ ವ್ಯಾಪ್ತಿಯ ಗ್ರಾಮ ಹಾಗೂ ಪಟ್ಟಣಗಳಲ್ಲಿ ನಡೆಯುವ ಸಭೆ ಸಮಾರಂಭಗಳಲ್ಲಿ ದಂಡ ಪಾವತಿ ಬಗ್ಗೆ ಪ್ರಚಾರ ಮಾಡಲಾಗಿದೆ. ಬೀಟ್ ಪೊಲೀಸರ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗಿದೆ ಎಂದು ಹೇಳಿದ್ದಾರೆ.

ಈ ಅವಕಾಶವನ್ನು ಬಳಸಿಕೊಂಡು ವಾಹನ ಚಾಲಕರು ದಂಡ ಪಾವತಿ ಮಾಡುತ್ತಿದ್ದಾರೆ. ಆಗಸ್ಟ್ 23ರಂದು 882 ಚಲನ್ ಮುಖೇನ 2,23,000 ರೂ., ಆಗಸ್ಟ್ 24ರಂದು 1,229 ಚಲನ್ ಗಳಲ್ಲಿ 3,09,750 ರೂಪಾಯಿ ಹಾಗೂ ಆಗಸ್ಟ್ 25ರಂದು 1,370 ಚಲನ್‌ಗಳ ಮೂಲಕ 3,49,000 ರೂಪಾಯಿ ದಂಡ ಪಾವತಿ ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

ಈ ಮೂಲಕ ಮೂರು ದಿನದ ಅವಧಿಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡಿರುವ ವಾಹನ ಚಾಲಕರು ಒಟ್ಟು 3,481 ಚಲನ್ ಗಳ ಮುಖೇನ 8,81,750 ರೂಪಾಯಿ ಪಾವತಿ ಮಾಡಿದ್ದಾರೆ ಎಂದು ಅಂಕಿ ಅಂಶ ಸಹಿತ ವಿವರಿಸಿದ್ದಾರೆ.

ಸಂಚಾರ ನಿಯಮ ಉಲ್ಲಂಘಿಸಿರುವ ಚಾಲಕರಿಗೆ ಶೇ.50ರಷ್ಟು ರಿಯಾಯಿತಿಯಲ್ಲಿ ದಂಡ ಪಾವತಿ ಮಾಡಲು ಸೆಪ್ಟೆಂಬರ್ 12ರವರೆಗೆ ಅವಕಾಶ ಕಲ್ಪಿಸಲಾಗಿದೆ. ಮೈಸೂರು ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ನಗದು ಪಾವತಿ ಮೂಲಕ ಹಾಗೂ Ksp App Web siteನಲ್ಲಿ ಆನ್‌ಲೈನ್‌ನಲ್ಲಿ ದಂಡ ಪಾವತಿ ಮಾಡಬಹುದು ಎಂದು ತಿಳಿಸಿದ್ದಾರೆ.

ಸಂಸದ ಯದುವೀರ್‌ಗೆ ಆಹ್ವಾನ



ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ಸ್ಥಾಪಿತವಾದ ಗಾಂಧಿಚೌಕದ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ 2024–25ನೇ ಸಾಲಿನ 119ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನೂ ಸೆ.14ರಂದು ಹಮ್ಮಿಕೊಳ್ಳಲಾಗಿದ್ದು, ಇದರ ಉದ್ಘಾಟನೆ ನೆರವೇರಿಸಲು ಕೋರಿ ಸಂಸದ ಯದುವೀರ್ ಒಡೆಯರ್ ಅವರಿಗೆ ಆಹ್ವಾನಿಸಲಾಯಿತು. ಅಧ್ಯಕ್ಷ ಜಿ.ಯೋಗೇಶ್, ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎನ್.ಯೋಗಾನಂದ್, ಆರ್.ಸೋಮಣ್ಣ, ಜಿ.ನಿರಂಜನ್ ಕಾರ್ಯದರ್ಶಿ ಕೆ.ಹರ್ಷಿತ್‌ಗೌಡ ಉಪಸ್ಥಿತರಿದ್ದರು.

ಇಂದಿನಿಂದ ಭಾರತದ ಸರಕುಗಳ ಮೇಲೆ ಶೇ. 50 ಸುಂಕ: ಅಮೆರಿಕದಿಂದ ಕರಡು ಆದೇಶ ಬಿಡುಗಡೆ

ವಾಷಿಂಗ್ಟನ್, ಆ.26– ಆಗಸ್ಟ್ 27ರಿಂದ ಜಾರಿಗೆ ಬರುವಂತೆ ಭಾರತೀಯ ಉತ್ಪನ್ನಗಳ ಮೇಲೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದ ಹೆಚ್ಚುವರಿ ಶೇ 25 ರಷ್ಟು ಸುಂಕವನ್ನು ಜಾರಿಗೆ ತರುವ ಯೋಜನೆಗಳನ್ನು ವಿವರಿಸುವ ಕರಡು ಆದೇಶವನ್ನು ಅಮೆರಿಕ ಹೊರಡಿಸಿದೆ. ಆಗಸ್ಟ್ 27ರ ಮಧ್ಯರಾತ್ರಿ 12.01ರಿಂದ ಈ ಹೊಸ ಸುಂಕ ಜಾರಿಗೆ ಬರಲಿದೆ ಎಂದು ಹೋಮ್‌ಲ್ಯಾಂಡ್ ಸೆಕ್ಯುರಿಟೀಸ್ ಆದೇಶದಲ್ಲಿ ತಿಳಿಸಿದೆ.

ಭಾರತವು ರಷ್ಯಾದ ಕಚ್ಚಾತೈಲವನ್ನು ಖರೀದಿಸುತ್ತಿರುವುದರಿಂದ ದಂಡದ ಮಾದರಿಯಲ್ಲಿ ಭಾರತೀಯ ಸರಕುಗಳ ಮೇಲಿನ ಸುಂಕವನ್ನು ಶೇ.50ಕ್ಕೆ ದ್ವಿಗುಣಗೊಳಿಸುವುದಾಗಿ ಆಗಸ್ಟ್ 7ರಂದು ಟ್ರಂಪ್ ಘೋಷಿಸಿದ್ದರು. ಆದರೆ, ಒಪ್ಪಂದದ ಕುರಿತಂತೆ ಮಾತುಕತೆ ನಡೆಸಲು 21 ದಿನಗಳ ಕಾಲಾವಕಾಶ ನೀಡಿದ್ದರು.

ಜುಲೈ ಅಂತ್ಯದಲ್ಲಿ ಘೋಷಿಸಲಾದ ಶೇ 25ರಷ್ಟು ಸುಂಕ ಮತ್ತು ಆಗಸ್ಟ್ 7 ರಂದು ಘೋಷಿಸಿದ ಶೇ 25ರಷ್ಟು ಸುಂಕ ಸೇರಿ ಭಾರತದ ಸರಕುಗಳ ಮೇಲೆ ಶೇ 50ರಷ್ಟು ಸುಂಕ ಹೇರಿಕೆಗೆ ಅಮೆರಿಕ ಮುಂದಾಗಿದೆ. ಆಗಸ್ಟ್ 27ರಂದು ಮಧ್ಯರಾತ್ರಿ 12:01ಕ್ಕಿಂತ ಮೊದಲು ಹಡಗಿಗೆ ಲೋಡ್ ಮಾಡಿ ಅಮೆರಿಕಕ್ಕೆ ಸಾಗಿಸಿದ್ದರೆ, ಸೆಪ್ಟೆಂಬರ್ 17ಕ್ಕಿಂತ ಮೊದಲು ದೇಶದಲ್ಲಿ ಬಳಸಲು ಅನುಮತಿ ಪಡೆದಿದ್ದರೆ ಅಂತಹ ಉತ್ಪನ್ನಗಳಿಗೆ ಶೇ. 50ರ ಸುಂಕ ವಿನಾಯಿತಿ ಸಿಗಲಿದೆ.

ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷವನ್ನು ಕೊನೆಗೊಳಿಸಲು ಅಧ್ಯಕ್ಷ ಟ್ರಂಪ್ ಭಾರತದ ಮೇಲೆ ನಿರ್ಬಂಧಗಳನ್ನು ವಿಧಿಸಿದ್ದಾರೆ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕ್ಯಾರೋಲಿನ್ ಲೀವಿಟ್ ಈ ತಿಂಗಳ ಆರಂಭದಲ್ಲಿ ಹೇಳಿದ್ದರು.

ರಷ್ಯಾದ ತೈಲವನ್ನು ಮರುಮಾರಾಟ ಮಾಡುವ ಮೂಲಕ ಭಾರತ ಲಾಭ ಗಳಿಸುತ್ತಿದೆ ಎಂದು ಅಮೆರಿಕದ ಗೃಹ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಆರೋಪಿಸಿದ್ದಾರೆ.

ದಿ ಆಕ್ಮಿ ಸ್ಕೂಲ್‌ನಲ್ಲಿ ಗೌರಿ–ಗಣೇಶ ಹಬ್ಬದ ಸಂಭ್ರಮ



ಮೈಸೂರಿನ ನಿವೇದಿತಾನಗರದಲ್ಲಿರುವ ರೋಟರಿ ಮೈಸೂರು ಸೌತ್ ಈಸ್ಟ್ ಚಾರಿಟಬಲ್ ಟ್ರಸ್ಟ್‌ನ ದಿ ಆಕ್ಮಿ ಸ್ಕೂಲ್‌ನಲ್ಲಿ ಗೌರಿ–ಗಣೇಶ ಹಬ್ಬವನ್ನು ಸಂಭ್ರಮ ಹಾಗೂ ಸಡಗರದಿಂದ ಆಚರಿಸಲಾಯಿತು. ಪ್ರಿಕೆಜಿ, ಎಲ್‌ಕೆಜಿ, ಯುಕೆಜಿ ಮಕ್ಕಳು ಗಣೇಶನ ಹಾಡುಗಳಿಗೆ ನೃತ್ಯ ಮಾಡಿ ಎಲ್ಲರ ಗಮನ ಸೆಳೆದರು. ಇದೇ ವೇಳೆ ಶಾಲೆಯ ಆಡಳಿತ ಮಂಡಳಿಯಿಂದ ಮಕ್ಕಳಿಗೆ ಪ್ರಸಾದ ನೀಡಲಾಯಿತು.

ಪೌರಕಾರ್ಮಿಕರಿಗೆ ಬಾಗಿನ



ಗೌರಿ ಗಣೇಶ ಹಬ್ಬದ ಅಂಗವಾಗಿ ವಾರ್ಡ್ ನಂ.45ರ ಪಾಲಿಕೆ ಮಾಜಿ ಸದಸ್ಯರಾದ ನಿರ್ಮಲ ಹರೀಶ್ ಹಾಗೂ ಅವರ ಪತಿ ಹರೀಶ್, ಪೌರಕಾರ್ಮಿಕರಿಗೆ ಬಾಗಿನ ಅರ್ಪಿಸಿದರು. ಈ ವೇಳೆ ಕರುಣೆ ಸೇವಾ ಟ್ರಸ್ಟ್ ಅಧ್ಯಕ್ಷೆ ರುಕ್ಮಿಣಿ ಇನ್ನಿತರರು ಹಾಜರಿದ್ದರು.

ನಿಧನ

ಬಿ.ಎಸ್.ಗಿರೀಶ್



ನಂಜನಗೂಡು, ಆ. 26– ನಂಜನಗೂಡು ನಗರದ ಕೆಂಪೇಗೌಡ ಬಡಾವಣೆಯ ಬಿ.ಎಸ್.ಗಿರೀಶ್ (54) ಮಂಗಳವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರಿ, ಪುತ್ರ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಇವರು ಬಿಜೆಪಿಯ ಮಾಜಿ ನಗರ ಅಧ್ಯಕ್ಷರು ಹಾಗೂ ಮಾಜಿ ಪುರಸಭಾ ಸದಸ್ಯರಾಗಿದ್ದರು. ಅಂತಕ್ರಿಯೆ ಸಂಜೆ 5 ಗಂಟೆಗೆ ಸ್ವಗ್ರಾಮ ವಳಗೆರೆ ಗ್ರಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆ.29ಕ್ಕೆ ಡಾ.ರಾಜೇಂದ್ರ ಶ್ರೀಗಳ ಶತೋತ್ತರ ದಶಮಾನೋತ್ಸವ

ಕೇಂದ್ರ ಸಚಿವರಾದ ಶಿವರಾಜ್‌ಸಿಂಗ್ ಚೌಹಾಣ್, ಹೆಚ್.ಡಿ.ಕುಮಾರಸ್ವಾಮಿ ಉಪಸ್ಥಿತಿ

ಮೈಸೂರು,ಆ.26(ಜಿಎ)–ಶ್ರೀ ಸುತ್ತೂರು ಜಗದ್ಗುರು ವೀರಸಿಂಹಾಸನ ಮಹಾಸಂಸ್ಥಾನ ಮಠದ 23ನೇ ಪೀಠಾಧಿಪತಿ ಜಗದ್ಗುರು ಡಾ.ಶ್ರೀಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಶತೋತ್ತರ ದಶಮಾನೋತ್ಸವವನ್ನು (110ನೇ ಜಯಂತಿ) ಆ.29ರಂದು ಆಚರಿಸಲಾಗುತ್ತಿದೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ತಿಳಿಸಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ರಾಜೇಂದ್ರ ಸಭಾಂಗಣದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠದಲ್ಲಿ ಜಯಂತಿ ಸಮಾರಂಭ ಆಯೋಜಿಸಲಾಗಿದ್ದು, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ದಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಸಾನಿಧ್ಯ ವಹಿಸುವರು. ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಸಮಾರಂಭ ಉದ್ಘಾಟಿಸಲಿದ್ದು, ಕೇಂದ್ರ ಬೃಹತ್ ಕೈಗಾರಿಕಾ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

'ಸರ್ವದರ್ಶನ ಸಂಗ್ರಹ'(ನಾಲ್ಕನೇ ಆವೃತ್ತಿ)ವನ್ನು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, 'ಕಾಯಕ ತಪಸ್ವಿ'(ನಾಲ್ಕನೇ ಆವೃತ್ತಿ)ಯನ್ನು ರೇಷ್ಮೆ ಸಚಿವ ಕೆ.ವೆಂಕಟೇಶ್ ಲೋಕಾರ್ಪಣೆ ಮಾಡಲಿದ್ದಾರೆ. 'ಪ್ರಸಾದ' ವಿಶೇಷ ಸಂಚಿಕೆಯನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, 'ಜೆಎಸ್‌ಎಸ್ ವಾರ್ತಾಪತ್ರ' ವಿಶೇಷ ಸಂಚಿಕೆಯನ್ನು ಸಂಸದ ಸುನಿಲ್ ಬೋಸ್ ಬಿಡುಗಡೆ ಮಾಡಿ ಲೋಕಾರ್ಪಣೆಗೊಳಿಸಲಿದ್ದಾರೆ.



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ರಾಜೇಂದ್ರ ಸಭಾಂಗಣದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ಮಾತನಾಡಿದರು.

ನಿವೃತ್ತರಿಗೆ ಅಭಿನಂದನೆ

ಮಧ್ಯಾಹ್ನ 3 ಗಂಟೆಗೆ ಜೆಎಸ್‌ಎಸ್ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರಿಗೆ ಪ್ರತಿ ವರ್ಷದಂತೆ ಈ ವರ್ಷವೂ ಅಭಿನಂದನೆ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಈ ಬಾರಿ ಸುಮಾರು 125 ಮಂದಿ ನಿವೃತ್ತರಾಗಿದ್ದಾರೆ. 62 ಮಂದಿ ಕೆಲಸದಿಂದ ಬಿಡುಗಡೆ ಪಡೆದಿದ್ದಾರೆ. 15 ಮಂದಿ ಸೇವೆಯಲ್ಲಿರುವಾಗಲೇ ಮೃತಪಟ್ಟಿದ್ದು ಅವರ ಕುಟುಂಬದವರಿಗೆ ಸಾಂತ್ವನ ಹೇಳಿ, ನಿವೃತ್ತರಾದವರನ್ನು ಅಭಿನಂದಿಸಲಾಗುತ್ತದೆ. ಜೊತೆಗೆ ಜೆಎಸ್‌ಎಸ್ ವಿದ್ಯಾಸಂಸ್ಥೆಗಳಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತದೆ ಎಂದು ಡಾ.ಸಿ.ಜಿ.ಬೆಟಸೂರಮಠ ವಿವರಿಸಿದರು.

ಅತಿಥಿಗಳಾಗಿ ಶಾಸಕರಾದ ಪಿ.ಎಂ. ನರೇಂದ್ರಸ್ವಾಮಿ, ಸಿ.ಪುಟ್ಟರಂಗಶೆಟ್ಟಿ, ಅನಿಲ್ ಚಿಕ್ಕಮಾದು, ಜಿ.ಟಿ.ದೇವೇ ಗೌಡ, ತನ್ವೀರ್ ಸೇಠ್, ಎ.ಆರ್. ಕೃಷ್ಣ ಮೂರ್ತಿ, ಹೆಚ್.ಎಂ. ಗಣೇಶಪ್ರಸಾದ್, ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ಡಿ.ರವಿಶಂಕರ್, ದರ್ಶನ್ ಧ್ರುವ ನಾರಾಯಣ್, ಜಿ.ಡಿ.ಹರೀಶ್‌ಗೌಡ, ಅಡಗೂರು ಹೆಚ್.ವಿಶ್ವನಾಥ್, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಡಾ.ಯತೀಂದ್ರ ಸಿದ್ದರಾಮಯ್ಯ, ಮಧು ಜಿ.ಮಾದೇಗೌಡ, ಸಿ.ಎನ್.ಮಂಜೇಗೌಡ, ಕೆ.ವಿವೇಕಾನಂದ, ಎಂ.ಆರ್. ಮಂಜುನಾಥ್, ಮಾಜಿ ಸಚಿವರಾದ ಸಾ.ರಾ. ಮಹೇಶ್, ಸಿ.ಎಸ್.ಪುಟ್ಟರಾಜು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಕಾರ್ಯದರ್ಶಿ ಎಸ್.ಪಿ.ಮಂಜುನಾಥ್ ಮಾತನಾಡಿ, ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಶಾಲಾ ಕಾಲೇಜುಗಳ ಉತ್ತಮ ವಾರ್ಷಿಕ ಸಂಚಿಕೆಗಳಿಗೆ ಹಾಗೂ ಪ್ರಸಾದ ಮಾಸಿಕ ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಗುತ್ತದೆ. ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿಭಾನ್ವಿತರಿಗೆ ವಿದ್ಯಾರ್ಥಿವೇತನ ನೀಡಲಾಗುವುದು ಎಂದು ತಿಳಿಸಿದರು.

ಸುತ್ತೂರು ಮಠದಿಂದ ಮೃಗಾಲಯಕ್ಕೆ ಕೊಡುಗೆ



ಶ್ರೀಗಳ ಜಯಂತಿ ದಿನ ಮೃಗಾಲಯದ ಪ್ರಾಣಿ, ಪಕ್ಷಿ ಸಂಕುಲಕ್ಕೆ ಆಹಾರ ವಿತರಣೆಗೆ ಪ್ರತಿ ವರ್ಷದಂತೆ ಈ ವರ್ಷವೂ ಒಂದು ಲಕ್ಷ ರೂ. ಚೆಕ್ ನೀಡಲಾಗಿದೆ. ಜತೆಗೆ ರಕ್ತದಾನ, ನೇತ್ರದಾನ ಹಾಗೂ ದೇಹದಾನಗಳ ಬಗ್ಗೆ ಅರಿವು ಮೂಡಿಸುವ ಕೆಲಸವನ್ನೂ ಮಾಡಲಾಗುತ್ತದೆ. ಜೆಎಸ್‌ಎಸ್ ಗ್ರಂಥಮಾಲೆಯ ಪ್ರಕಟಣೆಗಳಿಗೆ ಆ.25ರಿಂದ ಸೆ.30ರವರೆಗೆ ಶೇ.50ರಷ್ಟು ರಿಯಾಯಿತಿ ನೀಡಲಾಗುತ್ತದೆ.

ಪ್ರತಿ ವರ್ಷದಂತೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಎಲ್ಲಾ ಅಂಗ ಸಂಸ್ಥೆಗಳು, ವಿವಿಧ ಸಂಘಸಂಸ್ಥೆಗಳು ಹಾಗೂ ಸಾರ್ವಜನಿಕರಿಂದ ವಿವಿಧೆಡೆಗಳಲ್ಲಿ ಜಯಂತಿ ಮಹೋತ್ಸವ ಆಚರಿಸಲಾಗುತ್ತದೆ. ಸಂಸ್ಥೆಗಳಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗುತ್ತದೆ. ರೋಗಿಗಳಿಗೆ ಹಣ್ಣುಹಂಪಲು ವಿತರಣೆ, ಶಾಲಾ ಕಾಲೇಜುಗಳಲ್ಲಿ ಸಸಿ ನೆಡುವುದು, ವಿಚಾರಸಂಕಿರಣ, ಕ್ರೀಡಾಕೂಟ ಆಯೋಜನೆ, ಪುಸ್ತಕಗಳು, ನೋಟ್‌ಪುಸ್ತಕಗಳು, ಶಾಲಾ ಬ್ಯಾಗ್‌ಗಳು, ಸಮವಸ್ತ್ರಗಳನ್ನು ಅಗತ್ಯವಿರುವ ವಿದ್ಯಾರ್ಥಿಗಳಿಗೆ ವಿತರಿಸಲಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನೇತ್ರ, ರಕ್ತ, ಅಂಗಾಂಗಗಳು ಮತ್ತು ದೇಹದಾನಗಳ ಬಗ್ಗೆ ಮಾಹಿತಿ ಹಾಗೂ ನೋಂದಣಿ, ವಿಶೇಷಚೇತನರಿಗೆ ಕೃತಕ ಅಂಗಗಳು ಹಾಗೂ ಗಾಲಿ ಕುರ್ಚಿಗಳ ವಿತರಣೆ, ಶ್ರವಣದೋಷವುಳ್ಳವರಿಗೆ ಉಚಿತ ಉಪಕರಣ ನೀಡಿಕೆ, ಸಸಿಗಳ ನೆಡುವಿಕೆ ಕಾರ್ಯಕ್ರಮ ಆಯೋಜನೆ ಇದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಶಿವಕುಮಾರಸ್ವಾಮಿ, ಪ್ರಕಟಣಾ ವಿಭಾಗದ ನಿರ್ದೇಶಕ ಮೊರಬದ ಮಲ್ಲಿಕಾರ್ಜುನ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.08.2025 ಬುಧವಾರ, ಮಳೆ ನಕ್ಷತ್ರ: ಮಖ 17.08.2025 ರಿಂದ 30.08.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಚಿತ್ತ, ರಾಹುಕಾಲ: ಮಧ್ಯಾಹ್ನ 12 ರಿಂದ 1.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ವರ್ಷಾ ಬಸ್ತಿ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಹೈಪೋಥೈರಾಯ್ಡಿಸಮ್‌ಗೆ ಚಿಕಿತ್ಸಾ ಶಿಬಿರ, ಮೈಗ್ರೇನ್‌ಗೆ ಪರಿಹಾರ ಹಾಗೂ ಆಕ್ಯುಪಂಕ್ಚರ್ ಚಿಕಿತ್ಸೆ, ಮಧುಮೇಹದ ಗಾಯಗಳಿಗೆ ಚಿಕಿತ್ಸೆ, ಅರ್ಥರೈಟಿಸ್ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಮತ್ತು ಭುಜದ ನೋವು, ಸಯಾಟೀಕ್/ಗೃದ್ರಸಿ ರೋಗಕ್ಕೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಡಿಜಿಟಲ್ ಡಿಟಾಕ್ಸ್, ಸ್ಕ್ರೀನ್ ಅತ್ಯಾಶಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10ರಿಂದ.

■ **ದೀಪ್ತಿ ಸಾಂಸ್ಕೃತಿಕ ವೇದಿಕೆ :** ಲೇಖಕ, ವಿಮರ್ಶಕ ಕಾಳೀಹುಂಡಿ ಶಿವಕುಮಾರ್ ಅವರು ವಿವಿಧ ಭಾಷೆಗಳ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಗಣಪತಿ ಚಿತ್ರ–ಲೇಖನಗಳ ಪ್ರದರ್ಶನ, ಸ್ಥಳ: ಹಿರಿಯ ನಾಗರೀಕರ ಹಗಲು ಯೋಗ ಕ್ಷೇಮ ಕೇಂದ್ರ, ನಿಮಿಷಾಂಬನಗರ ಬಡಾವಣೆ, ಬೆಳಗ್ಗೆ 11.30ಕ್ಕೆ

■ **ಎಸ್‌ಪಿವಿಜಿಎಂಸಿ ಟ್ರಸ್ಟ್:** 64ನೇ ಪಾರಂಪರಿಕಾ ಸಂಗೀತೋತ್ಸವ, ಸಂಜೆ 6.45ಕ್ಕೆ ಮೇಲುಕೋಟೆ ನಾಗೇಶ್ ಅವರಿಂದ ನಾದಸ್ವರ ಸಂಗೀತ ಕಾರ್ಯಕ್ರಮ, ವಯೋಲಿನ್‌ನಲ್ಲಿ ಕೇಶವ್ ಮೋಹನ್, ಮೃದಂಗದಲ್ಲಿ ಬಿ.ಎಸ್.ಪ್ರಶಾಂತ್, ಘಟನಲ್ಲಿ ಶರತ್ ಕೌಶಿಕ್, ಸ್ಥಳ: 8ನೇ ಕ್ರಾಸ್, ವಿ.ವಿ. ಮೊಹಲ್ಲಾ.

■ **ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್ :** ಶ್ರೀ ಗೌರಿ–ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾಂಗ 70ನೇ ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಪೂಜಾ ಮಹೋತ್ಸವ, ಬೆಳಗ್ಗೆ 10ಕ್ಕೆ ಮಹಾರುದ್ರಾಭಿಷೇಕ, ಗಣಹೋಮ, ವಿಶೇಷ ಹೂವಿನ ಅಲಂಕಾರ, ಪ್ರಾತಃಕಾಲದಲ್ಲಿ ದೇವತಾ ಪ್ರಾರ್ಥನೆ, ಮಹಾಸಂಕಲ್ಪ, ಗಂಗಾಪೂಜೆ ಶ್ರೀ ನೂರೊಂದು ಗಣಪತಿಗಳಿಗೆ ತೈಲಾಭಿಷೇಕ, ಕ್ಷೀರಾಭಿಷೇಕ, ಪಂಚಾಮೃತ, ಮಹಾರುದ್ರಾಭಿಷೇಕ, ರಜತಕವಚಾಲಂಕಾರ, ವಿಶೇಷ ಹೂವಿನ ಅಲಂಕಾರ, ಸಂಜೆ 4ಕ್ಕೆ ಮಹಾಮಂಗಳಾರತಿ, ಸಹಸ್ರಬಿಲ್ವ ದೂರ್ವ, ಕುಂಕುಮ ಅರ್ಚನೆಗಳು, ರಾಜೋಪಚಾರ, ತೀರ್ಥ ಪ್ರಸಾದ ವಿನಿಯೋಗ, ಪ್ರಾಕಾರೋತ್ಸವ, ಸಾನ್ನಿಧ್ಯ : ಡಾ. ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಉಪಸ್ಥಿತರು : ಶಾಸಕ ಟಿ.ಎಸ್. ಶ್ರೀವತ್ಸ, ಹೆಚ್.ಎನ್. ವೆಂಕಟೇಶ್, ಮಾಧವ ಶೆಣೈ ಮತ್ತು ಜಗನ್ನಾಥ್ ಶೆಣೈ, ಬಿ. ರೇವಣ್ಣ, ಶ್ರೀಮತಿ ಸೌಮ್ಯ ಉಮೇಶ್, ಶ್ರೀಮತಿ ಶಕುಂತಲಾಬಾಯಿ ಮತ್ತು ಬಾಬುಲಾಲ್ ರಮೇಶ್, ಎಸ್. ಶಿವಮೂರ್ತಿ, ಆಲನಹಳ್ಳಿ ಮಹದೇವಸ್ವಾಮಿ, ಸ್ಥಳ: ಗಣಪತಿ ದೇವಸ್ಥಾನ, ತ್ಯಾಗರಾಜ ವೃತ್ತ, ಕೆ.ಆರ್. ಮೊಹಲ್ಲಾ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಭಾವ ಸೇತು ಭಾಷೆ ಬದಲಾದರು ಭಾವ ಬದಲಾಗದಿರಲಿ ಬಾನುಲಿ ಸರಣಿ, ಪ್ರಸ್ತುತಿ–ಸಿ. ಎಸ್. ಪೂರ್ಣಿಮಾ, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಜಿ.ಪುಷ್ಪಲತಾ, ಎಸ್. ಸಂಗೀತಾ ಹಾಗೂ ಜಯಂತಿ ವಿ.ಭಟ್, ವ್ಯಾಖ್ಯಾನ–ಡಾ.ಹೆಚ್.ಎನ್.ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ನಿತಿನ್ ರಾಜಾರಾಂ ಶಾಸ್ತ್ರೀ, 8.30 ಚಿತ್ರಗೀತೆಗಳು, 9.00 ವೃತ್ತಿ ಮಾರ್ಗದರ್ಶನ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 10.30–ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಪತ್ರೋತ್ತರ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಸುಲೋಚನ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾ ರಂಗ–ಗೌರಿ ಹಬ್ಬ ಕುರಿತ ಕಾರ್ಯಕ್ರಮ ವೈವಿಧ್ಯ, ಭಾಗವಹಿಸುತ್ತಾರೆ–ಮೈಸೂರಿನ ತ್ರಿಮೂರ್ತಿ ನಗರದ ಲಲಿತಾ ಮಹಿಳಾ ಮಂಡಳಿ ಸದಸ್ಯೆಯರು, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಎಸ್.ಎನ್.ಭಟ್ ಸ್ಯೆಪಂಗಲ್ಲು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಸಾವಯವ ಅರಿಶಿಣ ಬೇಸಾಯದಲ್ಲಿ ದ್ರವರೂಪದ ಗೊಬ್ಬರಗಳ ಬಗ್ಗೆ ಕುರಿತು ಸಂವಾದ, ಭಾಗವಹಿಸುತ್ತಾರೆ– ಚಾಮರಾಜನಗರ ತಾಲೂಕು, ಹರದನ ಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ಶ್ರುತಿ ಮತ್ತು ಚಾಮರಾಜನಗರ ತಾಲೂಕು ಹರವೆ ಹೋಬಳಿ ಕೆಬ್ಬೆಪುರದ ಪಿ.ಸಂಪತ್‌ಕುಮಾರ್, ಪ್ರಸ್ತುತಿ– ಎನ್.ಕೇಶವಮೂರ್ತಿ, 7.35 ಕನ್ನಡದಲ್ಲಿ ವಾರ್ತೆಗಳು, 7.45 ವಿಧಾನಮಂಡಲದಲ್ಲಿ ಇಂದು, 8.00 ವಿಶೇಷ ಕಾರ್ಯಕ್ರಮ ಸರಣಿ, ಆಕಾಶವಾಣಿ 90–ನೆನಪುಗಳ ಹೊತ್ತು, ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ಮೈಸೂರು ಆಕಾಶವಾಣಿಯಿಂದ ಸನ್ಮಾನಿತರಾದ ಪ್ರೊ.ಸಿ.ನಾಗಣ್ಣ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಟಿ.ವಿ.ವಿದ್ಯಾಶಂಕರ್, 9.30–ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು

ಮೈಸೂರು ಹಾಗೂ ಸುತ್ತಮುತ್ತ ನಾಳೆ...

ನಾಳಿನ ಪಂಚಾಂಗ

28.08.2025 ಗುರುವಾರ, ಮಳೆ ನಕ್ಷತ್ರ: ಮಖ 17.08.2025ರಿಂದ 30.08.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ಚಿತ್ತ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ವರ್ಷಾ ಬಸ್ತಿ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಹೈಪೋಥೈರಾಯ್ಡಿಸಮ್‌ಗೆ ಚಿಕಿತ್ಸಾ ಶಿಬಿರ, ಮೈಗ್ರೇನ್‌ಗೆ ಪರಿಹಾರ, ಆಕ್ಯುಪಂಕ್ಚರ್ ಚಿಕಿತ್ಸೆ, ಮಧುಮೇಹದ ಗಾಯಗಳಿಗೆ ಚಿಕಿತ್ಸೆ ಅರ್ಥರೈಟಿಸ್ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಮತ್ತು ಭುಜದ ನೋವು, ಸಯಾಟೀಕ್/ಗೃದ್ರಸಿ ರೋಗಕ್ಕೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ** ಡಿಜಿಟಲ್ ಡಿಟಾಕ್ಸ್, ಸ್ಕ್ರೀನ್ ಅತ್ಯಾಶಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10ರಿಂದ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆ, ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ :** 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ, ಬೆಳಿಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗ, ಸಂಜೆ 7.30ಕ್ಕೆ ಪ್ರಾಕಾರೋತ್ಸವ, ಸ್ಥಳ: ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ.

■ **ದೀಪ್ತಿ ಸಾಂಸ್ಕೃತಿಕ ವೇದಿಕೆ :** ಲೇಖಕ, ವಿಮರ್ಶಕ ಕಾಳೀಹುಂಡಿ ಶಿವಕುಮಾರ್ ಅವರು ವಿವಿಧ ಭಾಷೆಗಳ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಗಣಪತಿ ಚಿತ್ರ–ಲೇಖನಗಳ ಪ್ರದರ್ಶನ, ಸ್ಥಳ: ಹಿರಿಯ ನಾಗರೀಕರ ಹಗಲು ಯೋಗ ಕ್ಷೇಮ ಕೇಂದ್ರ, ನಿಮಿಷಾಂಬನಗರ ಬಡಾವಣೆ, ಬೆಳಗ್ಗೆ 11.30ಕ್ಕೆ.

■ **ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ,** ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘ: ವಿಶ್ವ ಪತ್ರಿಕಾ ವಿತರಕರ ದಿನಾಚರಣೆ, 5ನೇ ರಾಜ್ಯ ಪತ್ರಿಕಾ ವಿತರಕರ ಸಮ್ಮೇಳನ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಘನ ಉಪಸ್ಥಿತರು: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕಾರ್ಮಿಕ ಸಚಿವ ಸಂತೋಷ್‌ಲಾಡ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಶಾಸಕ ಅನಿಲ್ ಚಿಕ್ಕಮಾದು, ಸಮ್ಮೇಳನಾಧ್ಯಕ್ಷ ಎಂ.ಎನ್.ನಾಗರಾಜ್, ಅಧ್ಯಕ್ಷತೆ: ರಾಜ್ಯ ಪತ್ರಿಕಾ ವಿತರಕರ ಸಂಘದ ರಾಜ್ಯಾಧ್ಯಕ್ಷ ಕೆ.ಶಂಭುಲಿಂಗ, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಜಿಲ್ಲಾಧ್ಯಕ್ಷ ಜೆ.ಎಸ್.ಹೋಮದೇವ, ಉಪಸ್ಥಿತರು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಪತ್ರಕರ್ತರಾದ ಎಸ್.ಟಿ.ರವಿಕುಮಾರ್, ಸಿ.ಕೆ.ಮಹೇಂದ್ರ, ಬಿ.ಸಿ.ಲೋಕೇಶ್, ಧರ್ಮಾಪುರ ನಾರಾಯಣ, ಬಿ.ರಾಘವೇಂದ್ರ, ಎಂ. ಸುಬ್ರಹ್ಮಣ್ಯ, ಶಾಸಕರಾದ ತನ್ವೀರ್ ಸೇಠ್, ಡಿ.ರವಿಶಂಕರ್, ಸಿ.ಎನ್.ಮಂಜೇಗೌಡ, ಜಿ.ಟಿ.ದೇವೇಗೌಡ, ದರ್ಶನ್ ಧ್ರುವನಾರಾಯಣ, ಎಚ್.ವಿಶ್ವನಾಥ್, ಟಿ.ಎಸ್. ಶ್ರೀವತ್ಸ, ಡಾ.ಎಸ್.ಯತೀಂದ್ರ, ಮಧು ಜಿ.ಮಾದೇಗೌಡ, ಜಿ.ಡಿ.ಹರೀಶ್‌ಗೌಡ, ಡಾ.ಡಿ.ತಿಮ್ಮಯ್ಯ, ಕೆ.ವಿವೇಕಾನಂದ, ಬಿ.ವಿ.ಮಲ್ಲಿಕಾರ್ಜುನಯ್ಯ, ಡಾ.ಎಸ್.ನಾಗಣ್ಣ, ಪ್ರೊ.ಶರಣಪ್ಪ ವಿ. ಹಲಸೆ, ಎಸ್.ಎ. ರಾಮದಾಸ್, ಪ್ರತಾಪ್ ಸಿಂಹ, ಆಯೇಷಾ ಖಾನಂ, ಹೆಚ್.ವಿ.ರಾಜೀವ್, ಶಿವಕುಮಾರ್, ಸಿ.ನಾರಾಯಣಗೌಡ, ನಾರಾಯಣ ವಿ.ಹೆಗಡೆ, ಎಂ.ಕೆ.ಸೋಮಶೇಖರ್, ಆರ್.ರಘು (ನೈಮುಣ್ಯ), ಸ್ಥಳ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಘಟಿಕೋತ್ಸವ ಭವನ, ಹುಣಸೂರು ರಸ್ತೆ, ಬೆಳಗ್ಗೆ 11.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್ :** 64ನೇ ಪಾರಂಪರಿಕಾ ಸಂಗೀತೋತ್ಸವ ಕಾರ್ಯಕ್ರಮ, ಸಂಜೆ 6ಕ್ಕೆ ಉದ್ಘಾಟನಾ ಸಮಾರಂಭ, ಸಂಗೀತೋತ್ಸವ ಉದ್ಘಾಟನೆ : ಕ್ಯಾಪ್ಟನ್ ಜಿ.ಆರ್.ಗೋಪಿನಾಥ್, ಅಧ್ಯಕ್ಷತೆ: ಎಸ್‌ಪಿವಿಜಿಎಂಸಿ ಟ್ರಸ್ಟ್ ಅಧ್ಯಕ್ಷ ಎಂ. ಜಗನ್ನಾಥ ಶೆಣೈ, ಸಂಜೆ 6.45ಕ್ಕೆ ಟಿ.ಎಂ.ಕೃಷ್ಣ ಅವರಿಂದ ಗಾಯನ, ಸ್ಥಳ: 8ನೇ ಕ್ರಾಸ್, ವಿ.ವಿ. ಮೊಹಲ್ಲಾ.

■ **ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್:** ಶ್ರೀ ಗೌರಿ–ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾಂಗ 70ನೇ ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಪೂಜಾ ಮಹೋತ್ಸವ, ಸಂಜೆ 7ಕ್ಕೆ ಶ್ರೀಮತಿ ಸುಮಾ ವಸಂತ ಮತ್ತು ಸಂಗಡಿಗರಿಂದ ಭಕ್ತಿಗೀತೆಗಳು, ಸ್ಥಳ: ಗಣಪತಿ ದೇವಸ್ಥಾನ, ಕೆ.ಆರ್.ಮೊಹಲ್ಲಾ.


ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ–ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ : ಪ್ರೊ. ಸಿ. ನಾಗಣ್ಣ, ನಿರ್ಮಾಣ–ಜಿ. ಶಾಂತಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಮತ್ತೂರು ಕುಮಾರ ಸ್ವಾಮಿ ಮತ್ತು ನಿತಿನ್ ರಾಜಾರಾಂ ಶಾಸ್ತ್ರೀ, ವ್ಯಾಖ್ಯಾನ: ಡಾ. ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ವಿ.ದೊರೆಸ್ವಾಮಿ ಅಯ್ಯಂಗಾರ್–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು., ಪ್ರಸ್ತುತಿ: ಶಾಂತಕುಮಾರ್ .ಜಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಮಂಜುಳಾ ಗುರುರಾಜ್, 2.40 ಕನ್ನಡ ಚಿತ್ರಗೀತೆಗಳು, 3.00 ಹಿಂದಿ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಕನ್ನಡ ಭಾರತಿ, 6.50 ಕೃಷಿರಂಗ– ತರಕಾರಿ ಬೇಸಾಯ ಕುರಿತು ಸಂವಾದ, ಭಾಗವಹಿಸುತಾರೆ– ಮೈಸೂರು ತಾಲೂಕು ಹಂಚ್ಯಾ ಗ್ರಾಮದ ಕೃಷಿಕ ದಂಪತಿ ಹೆಚ್. ಡಿ. ಮಂಜು ಮತ್ತು ಶಶಿಕಲಾ, ಪ್ರಸ್ತುತಿ–ಎನ್. ಕೇಶವ ಮೂರ್ತಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಯುವವಾಣಿ– ನಮ್ಮ ಭಾರತ ಹೆಮ್ಮೆಯ ಭಾರತ, ಈ ಕುರಿತು ಮಾತುಕತೆ, ಭಾಗವಹಿಸುತ್ತಾರೆ– ಶ್ರೀರಾಮ್.ಎಸ್.ಗೌಡ, ಪ್ರಿಯಾಂಕ, ನವೀನ್‌ಕುಮಾರ್, ಸಂತೋಷ್ ಶಿರಸಂಗಿ, ನಡೆಸಿಕೊಡುತ್ತಾರೆ–ಮಂಜುನಾಥ್ ಕೆ.ಎಸ್., 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಲಾಲ್ ಗುಡಿ ಜಿ. ಜೆ. ಆರ್. ಕೃಷ್ಣನ್ ಹಾಗೂ ಲಾಲ್ ಗುಡಿ ವಿಜಯಲಕ್ಷ್ಮಿ –ದ್ವಂದ್ವ ವೈಯೋಲಿನ್ ವಾದನ, 10.00 ನಾಟಕ–ಒಗ್ಗರಣೆ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಆಗಸ್ಟ್ 27 ಬುಧವಾರ 2025
ಸಂಪುಟ: 46 | ಸಂಚಿಕೆ: 131 | ಪುಟಗಳು: 12+VIII
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಇಡೀ ಮೈಸೂರಲ್ಲೇ ಬೃಹತ್ ಗಣಪತಿ...


ಮೈಸೂರಿನ ರಾಮಸ್ವಾಮಿ ವೃತ್ತ ಸಮೀಪ ಜಯಲಕ್ಷ್ಮೀ ವಿಲಾಸ ರಸ್ತೆ ಬಳಿ ಅಥರ್ವ ಗೆಳೆಯರ ಬಳಗದಿಂದ ಪ್ರತಿಷ್ಠಾಪಿಸಲು ಆಂಧ್ರಪ್ರದೇಶದ ಮದನಪಲ್ಲಿಯಿಂದ ತರಿಸಿರುವ ಬೃಹತ್ ಗಾತ್ರದ ಗಣೇಶ ಮೂರ್ತಿಯನ್ನು ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿ ಜೆಸಿಬಿ ಮೂಲಕ ಮೆರವಣಿಗೆಯಲ್ಲಿ ಮಂಗಳವಾರ ಸಂಜೆ ಕೊಂಡೊಯ್ಯಲಾಯಿತು. ಆಯೋಜಕರು ಹೇಳುವಂತೆ ಈ ಭಾರಿ ಗಾತ್ರದ ಗಣಪನ ಮೂರ್ತಿಯು 20 ಅಡಿ ಎತ್ತರ ಹಾಗೂ 15 ಅಡಿ ಅಗಲವಿದೆ. ಜೇಡಿಮಣ್ಣು ಮತ್ತು ನಾರಿನಿಂದ ರೂಪಿಸಿರುವ ಇದು ಸುಮಾರು 2 ಟನ್ ತೂಕ ಹೊಂದಿದೆ. 2 ಲಕ್ಷದ 20 ಸಾವಿರ ಮೌಲ್ಯದ ಈ ಗಣೇಶ ಮೂರ್ತಿಯನ್ನು ಮೈಸೂರಿಗೆ ತರಲು 50 ಸಾವಿರ ಸಾರಿಗೆ ವೆಚ್ಚ ತಗುಲಿದೆ ಎನ್ನುತ್ತಾರೆ ಗೆಳೆಯರ ಬಳಗದವರು. ಅವರೇ ಹೇಳುವಂತೆ ಇಡೀ ಮೈಸೂರಿಗೇ ಇದೇ ಭಾರಿ ಗಣಪತಿ ಮೂರ್ತಿ.

ನಮಾಮಿ ಗಂಗೆ ಮಾದರಿ ಕಾವೇರಿ ಶುದ್ಧೀಕರಣ

ಪ್ರಧಾನಿ ಮೋದಿ 3000 ಕೋಟಿ ರೂ. ಬಿಡುಗಡೆ



- ಪರಿಸರವಾದಿಗಳ ವರದಿ ಆಧರಿಸಿ ಮಹತ್ವದ ಯೋಜನೆ
- ಕೇಂದ್ರದ ಮಾರ್ಗಸೂಚಿಯಂತೆ ಸ್ವಚ್ಛತಾ ಕಾಮಗಾರಿ
- ನಗರ ಕೈಗಾರಿಕಾ ತ್ಯಾಜ್ಯ ನೀರು ನದಿ ಸೇರದಂತೆ ವಿಶೇಷ ಕಾಮಗಾರಿ





ಬೆಂಗಳೂರು, ಆ. 26(ಕೆಎಂಶಿ)– ನಮಾಮಿ ಗಂಗೆ ಮಾದರಿಯಲ್ಲೇ ಕಾವೇರಿ ನದಿ ಶುದ್ಧೀಕರಣಕ್ಕೆ ಪ್ರಧಾನಿ ನರೇಂದ್ರ ಮೋದಿ 3,000 ಕೋಟಿ ರೂ. ಬಿಡುಗಡೆ ಮಾಡಿದ್ದಾರೆ.

ಪರಿಸರವಾದಿ ಡಾ.ಎ.ಎನ್.ಯಲ್ಲಪ್ಪ ರೆಡ್ಡಿ, ರಾಮದಾಸ್ ಹಾಗೂ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ನೀಡಿದ ವರದಿ ಆಧರಿಸಿ ಗಂಗಾ ನದಿ ಶುದ್ಧೀಕರಣ ಯೋಜನೆ ಮಾದರಿಯಲ್ಲೇ ಕಾವೇರಿ ನದಿ ಮಾಲಿನ್ಯ ಕೊನೆಗೊಳಿಸಲು ಮತ್ತು ನದಿ ಪುನರುಜ್ಜೀವನಗೊಳಿಸಲು ಪ್ರಧಾನಿ ಮೋದಿ ದಿಟ್ಟ ಹೆಜ್ಜೆ ಇಟ್ಟಿದ್ದಾರೆ. ಕಾವೇರಿ ಶುದ್ಧೀಕರಣಕ್ಕೆ ಕೇಂದ್ರ ಸರ್ಕಾರ ಬೃಹತ್ ಗಾತ್ರದ ಮೊತ್ತ ನೀಡಲು ಮುಂದಾಗುತ್ತಿದ್ದಂತೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಹಾಗೂ ಶಾಸಕ ಎಂ.ಪಿ.ನರೇಂದ್ರಸ್ವಾಮಿ ಮತ್ತು ಇತರ ಸದಸ್ಯರು ತಲಕಾವೇರಿಯಿಂದ ಬಿಳಿಗುಂಡ್ಲುವರೆಗೆ ಅಧ್ಯಯನ ನಡೆಸಿ, ನದಿ ಮಾಲಿನ್ಯಕ್ಕೆ ಕಾರಣವಾಗುತ್ತಿರುವ ಕೆಲವು ಸಂಸ್ಥೆಗಳಿಗೆ ನೋಟಿಸ್ ನೀಡಿದ್ದಾರೆ.

ಯೋಜನೆಯನ್ನು ತ್ವರಿತವಾಗಿ ಕೈಗೆತ್ತಿಕೊಂಡು ಪೂರ್ಣಗೊಳಿಸುವ ಉದ್ದೇಶದಿಂದ 400ಕ್ಕೂ ಹೆಚ್ಚು ಸಿಬ್ಬಂದಿ ಹಾಗೂ ಮೂಲಸೌಕರ್ಯವನ್ನು ಮಂಡಳಿ ಒದಗಿಸುತ್ತಿದೆ.

ಕಾವೇರಿ ನದಿ ಕೇವಲ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಕಾರಣಗಳಿಗಷ್ಟೇ ಪ್ರಾಮುಖ್ಯತೆ ಪಡೆಯದೆ, ದಕ್ಷಿಣ ಭಾರತದ ನಾಲ್ಕು ರಾಜ್ಯಗಳ ಶೇಕಡ 30ರಷ್ಟು ಜನಸಂಖ್ಯೆಗೆ ಜೀವನಾಡಿಯಾಗಿದೆ.

ಇದನ್ನು ಮನಗಂಡ ಪ್ರಧಾನಿ ಮೋದಿ, ನಮಾಮಿ ಗಂಗೆ ಯೋಜನೆ ಮಾದರಿಯಲ್ಲೇ ಕಾವೇರಿ ನದಿ ನೀರು ಶುದ್ಧೀಕರಣಕ್ಕೆ ಹಣ ನೀಡಿರುವುದಲ್ಲದೆ, 2 ವರ್ಷಗಳಲ್ಲಿ ಯೋಜನೆ ಪೂರ್ಣಗೊಳಿಸುವಂತೆ ತಾಕೀತು ಮಾಡಿದ್ದಾರೆ.

ಯೋಜನೆಗೆ ಹಣ ಸಾಲದಾದರೆ ಮತ್ತಷ್ಟು ಹಣ ನೀಡಲೂ ಕೇಂದ್ರ ಸರ್ಕಾರ ಸಿದ್ಧವಿದ್ದು, ಕೇಂದ್ರ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳು ಕೇಂದ್ರದ ಮಾರ್ಗಸೂಚಿಯಂತೆಯೇ ಕಾಮಗಾರಿಗಳನ್ನು ಕೈಗೊಳ್ಳಬೇಕು.

ಉದ್ದೇಶಿತ ಕ್ರಿಯಾ ಯೋಜನೆಗೆ ಕೇಂದ್ರ ಶೇಕಡ 100ರಷ್ಟು ಹಣ ಭರಿಸಲಿದೆ. ಆರಂಭಿಕ ಹಂತದಲ್ಲಿ ನದಿಯ ಮೇಲ್ಭಾಗ ಸ್ವಚ್ಛಗೊಳಿಸುವುದರಿಂದ ಹಿಡಿದು ತೇಲುವ ಘನತ್ಯಾಜ್ಯ ಸಮಸ್ಯೆ ಪರಿಹರಿಸುವವರೆಗೂ ಯಲ್ಲಪ್ಪ ರೆಡ್ಡಿ ಸಮಿತಿ ನೀಡಿದ ವರದಿ ಆಧರಿಸಿ ಮಾರ್ಗಸೂಚಿ ಒದಗಿಸಿದೆ.

ಈ ಯೋಜನೆಯಡಿ ಗ್ರಾಮೀಣ ಭಾಗದ ಚರಂಡಿಗಳ ನೀರು ನೇರವಾಗಿ ನದಿ ಸೇರುವುದನ್ನು ತಡೆಯುವುದು, ಶೌಚಾಲಯಗಳ ನಿರ್ಮಾಣ, ಜನ ಮತ್ತು ನದಿಗಳ ನಡುವಿನ ಸಂಬಂಧ ಸುಧಾರಿಸಲು ವಿವಿಧೆಡೆ ಘಟ್ಟಗಳ ನಿರ್ಮಾಣ, ದುರಸ್ತಿ ಮತ್ತು ಆಧುನೀಕರಣ ಇದರ ಭಾಗವಾಗಿದೆ.

ಕಾವೇರಿ ನದಿ ಮಾಲಿನ್ಯ ತಡೆಗಟ್ಟುವ ಜೊತೆಗೆ ಪುನರುಜ್ಜೀವನಗೊಳಿಸುವಂತೆಯೂ ಪ್ರಧಾನಿ ಆದೇಶಿಸಿದ್ದಾರೆ. ನಮಾಮಿ ಗಂಗೆ ಮಾದರಿಯಲ್ಲಿ ಮೂರು ಹಂತಗಳಲ್ಲಿ ಯೋಜನೆಯನ್ನು ವಿಂಗಡಿಸಿ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ. ▶ 6ನೇ ಪುಟಕ್ಕೆ

ಶುಭಾಶಯಗಳು



ನಾಡಿನ ಸಮಸ್ತರಿಗೂ ಗೌರಿ–ಗಣೇಶ ಹಬ್ಬದ ಶುಭಾಶಯಗಳು

ಬಿಡುವು

ಗೌರಿ–ಗಣೇಶ ಹಬ್ಬದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 28–08–2025ರ ಗುರುವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

ಚಾಮುಂಡಿಬೆಟ್ಟ ಹಿಂದೂ ಧರ್ಮದ ಆಸ್ತಿಯಲ್ಲ: ಡಿಕೆಶಿ



ಬೆಂಗಳೂರು, ಆ.26– ಮೈಸೂರು ದಸರಾ ಉದ್ಘಾಟನೆಗೆ ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರಿಗೆ ಆಹ್ವಾನ ನೀಡಿರುವ ವಿಚಾರಕ್ಕೆ ಪ್ರತಿಕ್ರಿಯೆ ನೀಡಿರುವ ಕೆಪಿಸಿಸಿ ಅಧ್ಯಕ್ಷ, ಡಿಸಿಎಂ ಡಿಕೆ ಶಿವಕುಮಾರ್, 'ಚಾಮುಂಡಿ ಬೆಟ್ಟ ಹಿಂದೂ ಧರ್ಮದ ಆಸ್ತಿಯಲ್ಲ' ಎಂದು ವಿವಾದಿತ ಹೇಳಿಕೆ ನೀಡಿದ್ದಾರೆ.

ಅವರ ನಂಬಿಕೆ ಅದು. ನಾವು ಮಸೀದಿ, ಜೈನ್ ಟೆಂಪಲ್, ಗುರುದ್ವಾರಕ್ಕೆ ಹೋಗುತ್ತೇವೆ. ನಮ್ಮನ್ನು ಹೋಗಬೇಡಿ ಅಂತ ಯಾರಾದರೂ ಹೇಳಿದ್ದಾರಾ? ಮುಸ್ಲಿಮರು ಹಿಂದೂಗಳಾಗಿಲ್ವ? ಹಿಂದೂಗಳು ಮುಸ್ಲಿಂ ಆಗಿಲ್ವಾ? ಅಯೋಧ್ಯೆ ರಾಮನಿಗೆ ಯಾಕೆ ಹಿಂದೂಗಳು ಮಾತ್ರ ಬರಬೇಕು ಅಂತ ಮಾಡಿಲ್ಲ ಎಂದು ಪ್ರಶ್ನೆ ಮಾಡಿದ್ದಾರೆ. ಹಿಂದೂ ದೇವಸ್ಥಾನಗಳಿಗೆ ಸಾಕಷ್ಟು ಜನ ಮುಸ್ಲಿಮರು ಬರುತ್ತಾರೆ. ಎಲ್ಲ ಧರ್ಮದ ಜನ ಕೂಡ ಹಿಂದೂ ದೇವಸ್ಥಾನಗಳಿಗೆ ಹೋಗುತ್ತಾರೆ. ಇದು ಸಂವಿಧಾನದ ಮೇಲೆ ನಂಬಿಕೆ ಇರುವ ರಾಷ್ಟ್ರ. ಹಿಂದೂ ಹುಡುಗ ಮುಸ್ಲಿಂ ಮಹಿಳೆ ಇದ್ದರೆ, ▶ 6ನೇ ಪುಟಕ್ಕೆ

ನಿರಂತರ ದಾಳಿಯನ್ನು ಹಿಂದೂಗಳು ಸಹಿಸಲ್ಲ



ಮೈಸೂರು, ಆ.26– 'ಚಾಮುಂಡಿಬೆಟ್ಟ ಹಿಂದೂಗಳ ಆಸ್ತಿಯಲ್ಲ' ಎಂಬ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆಯನ್ನು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಖಂಡಿಸಿದ್ದಾರೆ.

ಈ ಬಗ್ಗೆ ಎಕ್ಸ್ ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಯದುವೀರ್, ಗೌರಿ ಹಬ್ಬದ ಪವಿತ್ರ ದಿನದಂದು, ಡಿಸಿಎಂ ಡಿ.ಕೆ.ಶಿವಕುಮಾರ್, ಚಾಮುಂಡಿಬೆಟ್ಟ ಮತ್ತು ಚಾಮುಂಡಿ ದೇವರು ಹಿಂದೂಗಳ ಆಸ್ತಿಯಲ್ಲ ಎಂದು ಹೇಳಿದ್ದಾರೆ. ಈ ಹೇಳಿಕೆ ಸಂಪೂರ್ಣವಾಗಿ ಖಂಡನೀಯ. ಚಾಮುಂಡಿಬೆಟ್ಟವು ಶಕ್ತಿ ಪೀಠವಾಗಿದ್ದು, ಶಾಸ್ತ್ರಗಳಿಂದ ಪವಿತ್ರವಾಗಿದೆ ಹಾಗೂ ಕೋಟ್ಯಾಂತರ ಹಿಂದೂಗಳಿಂದ ಪೂಜಿಸಲ್ಪಟ್ಟಿದೆ. ಈ ದೇವಾಲಯವು ಹಿಂದೂಗಳ ಆಸ್ತಿಯಾಗಿಯೇ ಯಾವಾಗಲೂ ಇರುತ್ತದೆ. ಕರ್ನಾಟಕದ ಜನ ಪ್ರತಿಯೊಂದು ಧರ್ಮವನ್ನು ಗೌರವಿಸುತ್ತಾರೆ. ಆದರೆ ಹಿಂದೂ ಹಬ್ಬಗಳು, ಸಂಪ್ರದಾಯಗಳು ಮತ್ತು ದೇವಾಲಯಗಳ ಮೇಲಿನ ನಿರಂತರ ದಾಳಿಯನ್ನು ಅವರು ಎಂದಿಗೂ ಸಹಿಸುವುದಿಲ್ಲ ಎಂದಿದ್ದಾರೆ.

ವಿಧಾನಸಭೆಯಲ್ಲಿ ಆರ್‌ಎಸ್‌ಎಸ್ ಪ್ರಾರ್ಥನಾ ಗೀತೆ ಹಾಡಿದ ವಿವಾದ

ಕಾಂಗ್ರೆಸ್ಸಿಗರ ಕ್ಷಮೆಯಾಚಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್

- ಆರ್‌ಎಸ್‌ಎಸ್ ಗೀತೆ ಹಾಡಿ ಪಕ್ಷದಲ್ಲೇ ತೀವ್ರ ವಿವಾದಕ್ಕೆ ಒಳಗಾಗಿದ್ದರು
- ನನ್ನ ಪಕ್ಷ ನಿಷ್ಠೆ ಯಾರೂ ಪ್ರಶ್ನಿಸಲಾಗದು; ಪ್ರಶ್ನಿಸುವವರು ಮೂರ್ಖರು



ಬೆಂಗಳೂರು, ಆ.26(ಕೆಎಂಶಿ)– ವಿಧಾನಸಭೆಯಲ್ಲಿ ಆರ್‌ಎಸ್‌ಎಸ್ ಪ್ರಾರ್ಥನಾ ಗೀತೆ ಹಾಡಿದ್ದಕ್ಕೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಾಂಗ್ರೆಸ್ಸಿಗರ ಕ್ಷಮೆ ಯಾಚಿಸಿದ್ದಾರೆ.

ಪಕ್ಷದ ಮುಖಂಡರಿಂದಲೇ ಆಕ್ಷೇಪ ವ್ಯಕ್ತವಾದ ಬೆನ್ನಲ್ಲೇ ಶಿವಕುಮಾರ್ ತುರ್ತು ಸುದ್ದಿಗೋಷ್ಠಿ ಕರೆದು, ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಹಾಗೂ ಇಂಡಿಯಾ ಒಕ್ಕೂಟದ ಪಕ್ಷಗಳ ನಾಯಕರಿಗೆ ನೋವಾಗಿದ್ದರೆ, ಕ್ಷಮೆ ಕೇಳುತ್ತೇನೆ.

ನಾನು ಜಾತಿಯಲ್ಲಿ ನಂಬಿಕೆ ಇಟ್ಟಿಲ್ಲ, ಎಲ್ಲ ಧರ್ಮಗಳನ್ನು ಗೌರವಿಸುತ್ತೇನೆ. ಕ್ಷಣ ಮಾತ್ರದಲ್ಲಿ ಶ್ಲೋಕಗಳನ್ನು ಪಠಿಸಬಲ್ಲೆ. ವಿಧಾನಸಭಾ ಅಧಿವೇಶನದಲ್ಲಿ ನನ್ನನ್ನು ಕೆಣಕಿದ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಕಾಲೆಳೆಯಲು ಅವರು ಬೆಳೆದು ಬಂದಿರುವ ಹಿನ್ನೆಲೆಯೂ ನನಗೆ ಗೊತ್ತಿದೆ ಎನ್ನುತ್ತಾ, ಆರ್‌ಎಸ್‌ಎಸ್ ಗೀತೆಯ ಎರಡು ಸಾಲು ಹೇಳಿದೆ. ಆರ್‌ಎಸ್‌ಎಸ್ ಹೊಗಳುವುದು ನನ್ನ ಉದ್ದೇಶವಾಗಿರಲಿಲ್ಲ. ಆದರೆ, ನಿರ್ದಿಷ್ಟ ಭಾಗವನ್ನು ಮಾತ್ರ ಕಟ್ ಅಂಡ್ ಪೇಸ್ಟ್ ಮಾಡಿ, ಬೇರೆ ವಿಚಾರಗಳ ಜೊತೆ ಬೆರೆಸಿ ರಾಷ್ಟ್ರಮಟ್ಟದ ಸುದ್ದಿ ಮಾಡಲಾಗಿದೆ.

ಪಕ್ಷದ ಕೆಲವು ಹಿರಿಯ ನಾಯಕರು ನನ್ನ ಬಗ್ಗೆ ಟೀಕಿಸಿದ್ದು, ಅವರ ಟೀಕೆಯನ್ನು ಗೌರವಿಸುತ್ತೇನೆ. ತಪ್ಪಾಗಿದ್ದರೆ ತಿದ್ದಿಕೊಳ್ಳುತ್ತೇನೆ. ಜೊತೆಗೆ ಕ್ಷಮೆಯನ್ನೂ ಯಾಚಿಸುತ್ತೇನೆ. ವರಿಷ್ಠರಿಂದ ನನಗೆ ಯಾವುದೇ ಒತ್ತಡ ಇಲ್ಲ, ಒತ್ತಡದಿಂದ ನಾನು ಕ್ಷಮೆ ಯಾಚಿಸುತ್ತಿಲ್ಲ. ಗೀತೆ ಹಾಡಿದ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಕೆಲವು ಮುಖಂಡರು ಸಾರ್ವಜನಿಕವಾಗಿ ಮಾತನಾಡಿದ್ದಾರೆ. ▶ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಟೀಚರ್: ನಾಗರ ಪಂಚಮಿ ದಿನ ಏನ್ ಮಾಡ್ದೆ?
ಗುಂಡ : ಹಾವಿಗೆ ಬದಲು ಸಂಬಂಧಿಕರ ಬಾಯಿಗೆ ಹಾಲು ಉಯ್ದೆ
ಟೀಚರ್: ಯಾಕೋ
ಗುಂಡ : ಸಂಬಂಧಿಕರ ಬಾಯಲ್ಲೇ ಜಾಸ್ತಿ ವಿಷ ಇರೋದು!

ಮೈಸೂರು ಮಿತ್ರ

ಬುಧವಾರ, 27 ಆಗಸ್ಟ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

ಸಮಸ್ಯೆಯ ಹಿಂದೆ ಪರಿಹಾರ, ದುಃಖದ ಹಿಂದೆ ಸುಖ, ಸವಾಲಿನ ಹಿಂದೆ ಒಂದು ಅವಕಾಶ ಇದ್ದೇ ಇರುತ್ತದೆ. ಕಾಯಬೇಕು ಅಷ್ಟೆ.
– ಅನಾಮಿಕ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡ್ಡಗೋಡೆಯ ಮೇಲೆ ದೀಪ ಇಟ್ಟ ಹಾಗೆ

ನಿಮ್ಮ ಪತ್ರಗಳು

■ ನ್ಯಾಯಾಘಾತ!

ಮಾನ್ಯರೆ,

'ತಹಸೀಲ್ದಾರ್ ಕೋರ್ಟ್‌ನಲ್ಲಿ ಮೂರು ತಿಂಗಳಲ್ಲಿ ಪ್ರಕರಣ ಇತ್ಯರ್ಥವಾಗಲೇ ಬೇಕು' ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ಆದೇಶಿಸಿದ್ದಾರೆ!
(ಮೈಸೂರು ಮಿತ್ರ 26.08.2025)

ಸಚಿವರ ಫರ್ಮಾನು ಆಲಿಸಿದ ತಹಸೀಲ್ದಾರ್, ಅಸಿಸ್ಟೆಂಟ್ ಕಮಿಷನರ್ ಹಾಗೂ ಜಿಲ್ಲಾಧಿಕಾರಿಗಳು ಮೂರು ತಿಂಗಳೊಳಗಾಗಿ ಬಾಕಿ ಇರುವ ಪ್ರಕರಣಗಳಿಗೊಂದು ಗತಿ ಕಾಣಿಸಬಹುದೇ ಹೊರತು ನ್ಯಾಯಯುತವಾಗಿ ತೀರ್ಮಾನ ಮಾಡಲು ಸಾಧ್ಯವಿಲ್ಲ.

ಶಿಷ್ಟಾಚಾರದ ಹೆಸರಿನಲ್ಲಿ ಮಂತ್ರಿ ಮಹೋದಯರ ಹಿಂದೆ-ಮುಂದೆ ತಿರುಗಾಡುವ ಈ ಅಧಿಕಾರಿಗಳು ನ್ಯಾಯಾಂಗಣದಲ್ಲಿ ಕುಳಿತು ಕೆಲಸ ಮಾಡಿದ್ದೇ ಕಡಿಮೆ!

'ಮೂರು ತಿಂಗಳಲ್ಲಿ ಪ್ರಕರಣ ಇತ್ಯರ್ಥ ಆಗಲೇ ಬೇಕು ಎಂದು ಸಚಿವರು ಆದೇಶಿಸುವ ಬದಲಾಗಿ ಸಮಯಕ್ಕೆ ಸರಿಯಾಗಿ ಆಗಮಿಸಿ ನ್ಯಾಯಾಂಗಣದಲ್ಲಿ ಕುಳಿತು ಕಾನೂನು,ನೀತಿ-ನಿಯಮ ಹಾಗೂ ಪ್ರಕ್ರಿಯೆಯನ್ನು ಪಾಲಿಸಿ ನ್ಯಾಯಯುತವಾಗಿ ತೀರ್ಪುಗಳನ್ನು ನೀಡಿ' ಎಂದು ತಹಸೀಲ್ದಾರ್, ಎ ಸಿ ಹಾಗೂ ಜಿಲ್ಲಾಧಿಕಾರಿಗಳಿಗೆ ಕಿವಿ ಮಾತು ಹೇಳಲಿ.

ಅತಿವೇಗ ಮತ್ತು ನಿರ್ಲಕ್ಷ್ಯದ ವಾಹನ ಸವಾರಿ ಮತ್ತು ಚಾಲನೆಯಿಂದ ಅಪಘಾತ ಹೆಚ್ಚುವಂತೆ ಆತುರದ ತೀರ್ಮಾನಗಳಿಂದ ನ್ಯಾಯಾಘಾತ ಹೆಚ್ಚುತ್ತದೆ!

ಬಡತನ ನಿರ್ಮೂಲನ ಮಾಡಿ ಎಂಬ ಕರೆಯನ್ನು ಅಪಾರ್ಥ ಮಾಡಿ ಕೊಂಡು ಬಡವರನ್ನೇ ನಿರ್ಮೂಲನೆ ಮಾಡಿದಂತೆಯೇ ಮೂರು ತಿಂಗಳಲ್ಲಿ ಪ್ರಕರಣ ಇತ್ಯರ್ಥಪಡಿಸಿ ಎಂಬ ಆಜ್ಞೆಯನ್ನು ಅಪಾರ್ಥ ಮಾಡಿ ಕೊಂಡು ಈ ಅಧಿಕಾರಿಗಳು ಆತುರಾತುರವಾಗಿ ಕಾನೂನು, ನೀತಿ-ನಿಯಮ, ಸಾಕ್ಷಿ, ಸಾಕ್ಷ್ಯ ಹಾಗೂ ಪ್ರಕ್ರಿಯೆಗಳನ್ನು ಗಾಳಿಗೆ ತೂರಿ ಪ್ರಕರಣಗಳಿಗೊಂದು ಗತಿ ಕಾಣಿಸಲು ಹೊರಟರೆ ಜನಸಾಮಾನ್ಯರ ಗತಿಯೇನು?

ಅತಿವೇಗ ತಿಥಿ ಬೇಗ, ಆತುರಗಾರನಿಗೆ ಬುದ್ಧಿಮಂದ ಎಂಬಂತೆ ಆತುರಾತುರವಾಗಿ ನೀಡುವ ನ್ಯಾಯ ನ್ಯಾಯಯುತವಲ್ಲ ಎಂಬ ಮಾತು ನಿಜವಾಗುತ್ತದೆ. ಇದರ ಬದಲಾಗಿ ತಹಸೀಲ್ದಾರ್, ಎಸಿ ಹಾಗೂ ಡಿಸಿ ಮುಂದಿರುವ ಪ್ರಕರಣಗಳನ್ನು ಇತ್ಯರ್ಥಪಡಿಸುವ ಅಧಿಕಾರವನ್ನು ನ್ಯಾಯಾಲಯಗಳಿಗೆ ನೀಡುವುದು ಒಳ್ಳೆಯದು.

-ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

■ ಧರ್ಮಸ್ಥಳ ಪ್ರಕರಣ: ಎನ್‌ಐಎಗೆ ಹಸ್ತಾಂತರ ಅತ್ಯವಶ್ಯಕ

ಮಾನ್ಯರೆ,

ಧರ್ಮಸ್ಥಳದಂತಹ ಪವಿತ್ರ ಧಾರ್ಮಿಕ ಕ್ಷೇತ್ರದಲ್ಲಿ ಸಂಭವಿಸಿದ ಸಂಶಯಾಸ್ಪದ ಹತ್ಯೆ ಪ್ರಕರಣವನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ)ಗೆ ಹಸ್ತಾಂತರಿಸುವ ನಿರ್ಧಾರ ಅತ್ಯಗತ್ಯ. ಇವು ಕೇವಲ ಅಪರಾಧ ಪ್ರಕರಣವಲ್ಲ, ಧಾರ್ಮಿಕ ಸಹಿಷ್ಣುತೆ, ಶ್ರದ್ಧಾ ಮತ್ತು ಸಮಾಜದ ಶಾಂತತೆಗೆ ಭಂಗ ತರುವ ಪ್ರಕರಣಗಳು. ಇಂತಹ ಘಟನೆಗಳ ಹಿಂದೆ ಬಲವಾದ ಅಪರಾಧ ಅಂಶಗಳಿರುವ ಸಾಧ್ಯತೆ ಇದ್ದರೆ, ಅದರ ಮೂಲವನ್ನು ಬೆಳಕಿಗೆ ತರಲು ಎನ್‌ಐಎ ಸೂಕ್ತ ಸಂಸ್ಥೆ.

ಎನ್‌ಐಎ ಅಂತರ್‌ರಾಜ್ಯ ಸಂಪರ್ಕ ಮತ್ತು ಸಂಘಟಿತ ಅಪರಾಧಗಳ ಪತ್ತೆಗಳಲ್ಲಿ ಸಮಗ್ರ ತನಿಖೆ ನಡೆಸುವ ಸಾಮರ್ಥ್ಯ ಹೊಂದಿದೆ. ಪ್ರಕರಣ ಯಾರ ವಿರುದ್ಧವಾಗಿದ್ದರೂ, ನ್ಯಾಯ ಪ್ರಕ್ರಿಯೆ ಸ್ಪಷ್ಟವಾಗಬೇಕು, ರಾಜಕೀಯ ಅಥವಾ ಧಾರ್ಮಿಕ ಮೌಲ್ಯಗಳಿಂದ ಪ್ರಭಾವಿತವಾಗಬಾರದು. ಎನ್‌ಐಎ ತನಿಖೆಯಿಂದ ಸತ್ಯ ಬಯಲಾಗಬಹುದು ಎಂಬುದು ನಿಜ ಹಾಗೂ ಅಪರಾಧಿಗಳಿಗೆ ಗರಿಷ್ಠ ಶಿಕ್ಷೆ ಕೊಡಿಸುವ ಕೆಲಸ ಮತ್ತು ಸಮಾಜದ ಶಾಂತಿ ಮತ್ತು ನಂಬಿಕೆ ಉಳಿಸುವ ಸಾಮರ್ಥ್ಯ ಎನ್‌ಐಎ ಹೊಂದಿದೆ ಎಂದರೆ ತಪ್ಪಾಗಲಾರದು.

-ಡಾ.ವಿಜಯಕುಮಾರ್ ಎಚ್. ಕೆ., ಮೈಸೂರು.

■ ಇಸಿ ಪಡೆದು ಆಸ್ತಿ ಖರೀದಿಸಿ

ಮಾನ್ಯರೆ,

ಇತ್ತೀಚೆಗೆ, ಮೈಸೂರಿನಲ್ಲಿ ವ್ಯಕ್ತಿ ಒಬ್ಬರು ಮನೆ ಒಂದನ್ನು ಗಾಯಿತ್ರಿಪುರಂ ಬಡಾವಣೆಯಲ್ಲಿ 45 ಲಕ್ಷಕ್ಕೆ ಖರೀದಿಸಿ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ರಿಜಿಸ್ಟರ್ ಮಾಡಿಸಿಕೊಂಡ ಸ್ವಲ್ಪ ದಿನಗಳ ನಂತರ ತಾವು ಖರೀದಿಸಿದ ಮನೆಯ ಮೇಲೆ ಬ್ಯಾಂಕ್‌ನಲ್ಲಿ 75 ಲಕ್ಷ ರೂ. ಸಾಲ ಇರುವುದಾಗಿ ಬ್ಯಾಂಕ್ ಅಧಿಕಾರಿಗಳು ಸಾಲ ವಸೂಲಾತಿಗೆ ಮನೆ ಮುಂದೆ ಬಂದಾಗಲೇ ಇವರಿಗೆ ತಾವು ಮೋಸ ಹೋಗಿರು ವುದು ಗೊತ್ತಾಗಿದೆ. ಮನೆ ಮಾರಾಟ ಮಾಡಿದ ವ್ಯಕ್ತಿ ಮನೆಯ ಮೇಲೆ ಬ್ಯಾಂಕ್‌ನಲ್ಲಿ ಸಾಲ ಇರುವುದನ್ನು ತಿಳಿಸದೇ ಮಧ್ಯವರ್ತಿಗಳ ಸಹಕಾರ ಪಡೆದು ಮಾರಾಟ ಮಾಡಿದ್ದ. ಈ ಬಗ್ಗೆ ಉದಯಗಿರಿ ಪೊಲೀಸ್ ಠಾಣೆಯಲ್ಲಿ ವಂಚನೆ ಪ್ರಕರಣ ದಾಖಲಾಗಿದೆ.

ನೀವು ಆಸ್ತಿಯನ್ನು ಕ್ರಯಕ್ಕೆ ಪಡೆದು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ರಿಜಿಸ್ಟರ್ ಆಗುವ ಸಂದರ್ಭದಲ್ಲಿ ಬೇರೆಲ್ಲಾ ದಾಖಲೆಗಳಿಗಿಂತಲೂ ಮುಖ್ಯವಾಗಿ ತಾವು ತೆಗೆದುಕೊಳ್ಳುತ್ತಿರುವ ಆಸ್ತಿಯ ಮೇಲೆ ಯಾವುದಾದರೂ ಬ್ಯಾಂಕ್‌ನಲ್ಲಿ ಸಾಲ ಇದೆಯಾ? ಇದನ್ನು ಯಾರಿಗಾದರೂ ಪರಭಾರೆ ಮಾಡಿದ್ದಾರಾ ಅಥವಾ ಆಸ್ತಿಯನ್ನು ಗುತ್ತಿಗೆ ಆಧಾರದಲ್ಲಿ ಕರಾರು ಒಪ್ಪಂದ ಮಾಡಿಕೊಂಡಿದ್ದಾರಾ ಎಂದು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಇಸಿ ತೆಗೆದುಕೊಂಡು ಸಾಲ ಇಲ್ಲದಿರುವುದನ್ನು ಧೃಡಪಡಿಸಿಕೊಂಡು ರಿಜಿಸ್ಟರ್ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಕೆಲವು ಮಧ್ಯವರ್ತಿಗಳ ಸಹಕಾರ ಪಡೆದು ಆಸ್ತಿ ಮಾರಾಟಗಾರರು ಈ ರೀತಿ ಮೋಸ ಮಾಡುತ್ತಾರೆ. ಈ ರೀತಿ ಮೋಸ ಹೋಗಿರುವ ಅನೇಕ ಉದಾಹರಣೆಗಳು ಮೈಸೂರಿನಲ್ಲಿವೆ. ಯಾರು ಎಷ್ಟೇ ಪರಿಚಯ ಇದ್ದರೂ ಆಸ್ತಿ ಖರೀದಿ ಮಾಡುವಾಗ ಬೇರೆ ಯಾವುದೇ ದಾಖಲೆಯಲ್ಲೂ ಸಾಲ ಪಡೆದದ್ದು ನಮೂದಾಗಿರುವುದಿಲ್ಲ. ಆದರೆ ಇಸಿಯಲ್ಲಿ ಮಾತ್ರ ನಮೂದಾಗಿರುತ್ತದೆ. ಆದ್ದರಿಂದ ಇಸಿ ಪಡೆದು ದೃಢಪಡಿಸಿಕೊಂಡು ಆಸ್ತಿ ಖರೀದಿಸಿ.

-ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಮುದ್ದುರಾಮ ಪ್ರಶಸ್ತಿಗೆ ಭಾಜನರಾದ ಅಭಿಜಾತ ವಿದ್ವಾಂಸ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ

ಪ್ರತಿಷ್ಠಿತ ಮುದ್ದುರಾಮ ಪ್ರಶಸ್ತಿಯನ್ನು ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಅವರಿಗೆ ಸೆ.2ರಂದು ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು. ತತ್ಪ್ರಯುಕ್ತ ಈ ವಿಶೇಷ ಲೇಖನ.

ತಮ್ಮ ಉಪಸ್ಥಿತಿ ಮಾತ್ರದಿಂದಲೇ ಯಾವುದೇ ವಿದ್ವತ್ಸಭೆಯ ಗೌರವವನ್ನು ಹೆಚ್ಚಿಸುವ, ತಾವು ಕೊಡುವ ವಿವರಣೆಯಿಂದ ಪಂಪ-ರನ್ನ-ಕುಮಾರವ್ಯಾಸಾದಿ ಪ್ರಾಚೀನ ಕವಿವರೇಣ್ಯರ ಕಾವ್ಯಗಳ ಸ್ವಾರಸ್ಯವನ್ನು ಸಾಮಾನ್ಯ ಮನುಷ್ಯರೂ ಸವಿದು ಆನಂದ ಪಡುವಂತೆ ಮಾಡುವ, ಛಂದಶ್ಶಾಸ್ತ್ರದ ಜಟಿಲ ವಿಚಾರಗಳನ್ನೂ ಸುಲಿದ ಬಾಳೆಯ ಹಣ್ಣಿನಂದದಿ ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಸುವ ಒಬ್ಬರೇ ಕನ್ನಡ ಪ್ರಾಧ್ಯಾಪಕರೆಂದರೆ ಅದು ಪೂಜ್ಯ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿಗಳು. ನಾನು ತರಗತಿಯಲ್ಲಿ ಕುಳಿತು ಅವರಿಂದ ಪಾಠಗಳನ್ನು ಕಲಿತವನಲ್ಲವಾದರೂ ಹಲವು ದಶಕಗಳಿಂದ ಅವರ ಶಿಷ್ಯನೆಂದು ಸ್ವಯಂ ಭಾವಿಸಿಕೊಂಡು ಕಲಿತದ್ದು ಬೆಟ್ಟದಷ್ಟು.

ಸಂತಸ್ಸದಾನುಗಂತವ್ಯಾ ಯದಿ ನೋಪದಿಶಂತ್ಯಪಿ ।
ಯದೃಚ್ಛಾಚರಿತಂ ತೇಷ ಮುಪದೇಶಾಮೃತಾಯತೇ ॥

ಎಂಬ ಮಾತು ಸಂಸ್ಕೃತದಲ್ಲಿದೆ. ವಿದ್ವಾಂಸರನ್ನು ಸದಾ ಅನುಸರಿಸಿ ಅವರ ಆಚರಣೆಯನ್ನು ಗಮನಿಸುತ್ತಿರಬೇಕು. ಅವರು ಮಾತಿನಿಂದ ಉಪದೇಶವನ್ನು ಮಾಡದಿದ್ದರೇನಂತೆ? ಅಪ್ರಯತ್ನವಾಗಿ, ಅನುದ್ದೇಶವಾಗಿ ಅವರು ನಡೆದುಕೊಳ್ಳುವ ರೀತಿಯೇ ಉಪದೇಶಾಮೃತವಾಗುತ್ತದೆ ಎಂದು ಈ ಶ್ಲೋಕದ ತಾತ್ಪರ್ಯ. ವಿಶ್ವವಿದ್ಯಾನಿಲಯದಲ್ಲಿ ನೂರಾರು ಜನರಿಗೆ ಅವರ ಸಾಕ್ಷಾತ್ ಪಾಠ. ಅದಲ್ಲದೆ ಪರೋಕ್ಷವಾಗಿ ಭಾಷಣಗಳಿಂದ, ಲೇಖನಗಳಿಂದ, ಗ್ರಂಥಗಳಿಂದ ಸಾವಿರಾರು ಜನರಿಗೆ ಶಾಸ್ತ್ರಿಗಳು ಜ್ಞಾನದಾನವನ್ನು ಮಾಡಿದ್ದಾರೆ, ಮಾಡುತ್ತಿದ್ದಾರೆ. ಅವರ ಮಿದುಳು ಅಕ್ಷಯಪಾತ್ರೆ. ಎಷ್ಟು ಜನರ ಜ್ಞಾನದ ಹಸಿವನ್ನಾದರೂ ಅದು ತಣಿಸಬಲ್ಲದು. ಅವರಲ್ಲಿರುವ ಗ್ರಂಥ ಸಂಗ್ರಹ, ಈ ವಿಷಯ ಇಂಥ ಪುಸ್ತಕದಲ್ಲೇ ಇದೆ ಎಂದು ಖಚಿತವಾಗಿ ಹೇಳಬಲ್ಲ. ಅವರ ಅದ್ಭುತ ನೆನಪಿನ ಶಕ್ತಿ ನಮ್ಮನ್ನು ಮೂಕವಿಸ್ಮಿತರನ್ನಾಗಿ ಮಾಡುತ್ತದೆ. ನಾನೊಮ್ಮೆ ಚಾಮರಾಜನಗರದ ಶ್ರೀಕಂಠಶಾಸ್ತ್ರಿಗಳ ಬಗೆಗೆ ಲೇಖನವನ್ನು ಬರೆಯಬೇಕಾಗಿತ್ತು. ಅವರು ಸಂಸ್ಕೃತದ ಉದ್ಧಾಮ ಪಂಡಿತರಾಗಿದ್ದರು. ಶ್ರೇಷ್ಠವೈಯಾಕರಣರಾಗಿದ್ದು, ಧಾತುರೂಪ ಪ್ರಕಾಶಿಕಾ ಎಂಬ ಗ್ರಂಥವನ್ನು ರಚಿಸಿದ್ದರು ಎಂದು ಮಾತ್ರ ನನಗೆ ತಿಳಿದಿತ್ತು. ಯಾರು ಯಾರನ್ನೋ ಕೇಳಿದರೂ ಹೆಚ್ಚು ಮಾಹಿತಿ ದೊರಕಿರಲಿಲ್ಲ. ಆಗ ಶಾಸ್ತ್ರಿಗಳ ಮನೆಗೆ ಹೋಗಿ ಕೇಳಿದೆ. 'ಅವರ ಬಗೆಗೆ ಒಂದು ಪುಸ್ತಕವೇ ಇದೆ. ಕೊಡುತ್ತೇನೆ' ಎಂದು ಗ್ರಂಥ ಭಂಡಾರದಲ್ಲಿ ಕೆಲವೇ ನಿಮಿಷ ಹುಡುಕಿ 'ಚಾಮರಾಜನಗರ ಶ್ರೀಕಂಠಶಾಸ್ತ್ರಿಗಳ ಚರಿತ್ರೆ' ಎಂಬ ಪುಸ್ತಕವನ್ನೇ ನನ್ನ ಕೈಯಲ್ಲಿ ಇಟ್ಟರು. ಆ ಮಹನೀಯರನ್ನು ಕುರಿತು ಸಂಸ್ಕೃತದಲ್ಲಿ ಲೇಖನವನ್ನು ಅಚ್ಚುಕಟ್ಟಾಗಿ ಬರೆಯಲು ನನಗೆ ಸಾಧ್ಯವಾಯಿತು.

ಜ್ಞಾನನಿಷ್ಠೆ ಏನನ್ನು ಬರೆದರೂ ಅದು ಆಧಾರಸಹಿತವಾಗಿರಬೇಕು, ನಿಖರವಾಗಿರಬೇಕು, ಆ ವಿಷಯದ ಬಗೆಗೆ ಇರುವ ಎಲ್ಲ ಮೂಲಗ್ರಂಥಗಳನ್ನೂ ನೋಡಿ ಶಾಸ್ತ್ರ ಸಮ್ಮತವಾದುದನ್ನೇ ಬರೆಯಬೇಕು ಎನ್ನುವ ಜ್ಞಾನನಿಷ್ಠೆ ಶಾಸ್ತ್ರಿಗಳದು. ಅವರು ಗಜಶಾಸ್ತ್ರ ಕೋಶವನ್ನು ರಚಿಸುವಾಗ ಕನ್ನಡ ಗ್ರಂಥಗಳನ್ನು ಮಾತ್ರವಲ್ಲ, ಸಂಸ್ಕೃತ ಗ್ರಂಥಗಳನ್ನೂ ಆಮೂಲಾಗ್ರವಾಗಿ ಪರಿಶೀಲಿಸಿದ್ದಾರೆ. ಸಂಸ್ಕೃತ ದಲ್ಲಿ ಸೋಮದೇವ ಸೂರಿಯು ರಚಿಸಿರುವ ಯಶಸ್ತಿಲಕಚಂಪೂ ಎಂಬ ಬೃಹತ್‌ಗ್ರಂಥವಿದೆ. ಸಂಸ್ಕೃತ ವಿದ್ವಾಂಸರೂ ಅದನ್ನು ಓದಿರುವುದಿಲ್ಲ. ಸೋಮದೇವ ಸೂರಿ ನಮ್ಮ ಆದಿಕವಿ ಪಂಪನ ಕಾಲದಲ್ಲಿ ಕರ್ನಾಟಕದಲ್ಲೇ ಇದ್ದವನು. ಯಶಸ್ತಿಲಕದಲ್ಲಿ ಆನೆಯ ಪಾಂಡಿತ್ಯಪೂರ್ಣ ವರ್ಣನೆಗಳಿವೆ. ಪೂಜ್ಯ ವೆಂಕಟಾಚಲಶಾಸ್ತ್ರಿಗಳು ಅದನ್ನೆಲ್ಲ ಆಳವಾಗಿ ಅಭ್ಯಸಿಸಿದ್ದಾರೆ. ಅಷ್ಟೇ ಅಲ್ಲ, ಯಶಸ್ತಿಲಕದ ವ್ಯಾಖ್ಯಾನವನ್ನು ಶ್ರುತಸಾಗರಸೂರಿ ಎಂಬ ಪಂಡಿತ ಪ್ರಕಾಂಡನು ಮಾಡಿದ್ದಾನೆ. ಶಾಸ್ತ್ರಿಗಳು ಅದನ್ನೂ ಪರಿಶೀಲಿಸಿ ಅಲ್ಲಿರುವ ವಿವರಣೆಗಳನ್ನೂ ಗಜಶಾಸ್ತ್ರ ಕೋಶದಲ್ಲಿ ಬಳಸಿಕೊಂಡಿದ್ದಾರೆ. ಇಂತಹ ಜ್ಞಾನನಿಷ್ಠೆಯನ್ನು ಬೇರೆ ಯಾರಲ್ಲಿ ಕಾಣಲು ಸಾಧ್ಯ?

ಕಲ್ಪನಾರತ್ನಮ್ ದಿವಂಗತ ಡಾ. ಎಂ.ಎಂ. ಕಲ್ಬುರ್ಗಿಯವರು ಗಂಗರಾಜ ಶಿವಮಾರನ ಕಲ್ಪನಾರತ್ನಮ್ ಎಂಬ ಸಂಸ್ಕೃತ ಗ್ರಂಥದ ಹಸ್ತ ಪ್ರತಿ ಯೊಂದನ್ನು ನನಗಿತ್ತು ಅದನ್ನು ಪ್ರೊ. ವೆಂಕಟಾಚಲಶಾಸ್ತ್ರಿಗಳೊಂದಿಗೆ ಸಂಪಾದಿಸಿ ಪ್ರಕಟಣೆಗೆ ಸಿದ್ಧಪಡಿಸಲು ಆದೇಶಿಸಿದ್ದರು. ನಾನು ಅದನ್ನು ಗ್ರಂಥ ಲಿಪಿಯಿಂದ ಕನ್ನಡಕ್ಕೆ ಲಿಪ್ಯಂತರವನ್ನೂ, ಭಾಷಾಂತರವನ್ನೂ ಮಾಡಿದೆ. ಪೂಜ್ಯ ಶಾಸ್ತ್ರಿಗಳು ಅದರಲ್ಲಿದ್ದ ತಪ್ಪುಗಳನ್ನು ತಿದ್ದಿ ಮುದ್ರಣ ಯೋಗ್ಯವನ್ನಾಗಿ ಮಾಡಿ ಅದ್ಭುತವಾದ ಮುನ್ನುಡಿಯನ್ನು ಬರೆದರು. ನನಗೆ ಗಂಗರಾಜ ಶಿವಮಾರನ ಬಗೆಗೆ ಏನೂ ಗೊತ್ತಿರಲಿಲ್ಲ. ಇತಿಹಾಸದಲ್ಲಿ ಅವನ ಸ್ಥಾನ ಮಾನಗಳೇನೆಂಬುದು ಅವರ ಮುನ್ನುಡಿಯನ್ನು ಓದಿದ ಮೇಲೆ ಮಾತ್ರ ನನಗೆ ತಿಳಿದುದು. ಶಿವಮಾರನು ಆಳಿದ ಕಾಲ ಕ್ರಿ.ಶ. 788ರಿಂದ 812. ಆ ಕಾಲದ ಎಷ್ಟೋ ಶಾಸನಗಳು ಆ ದೊರೆಯ ಬದುಕಿನ ಏಳು ಬೀಳುಗಳನ್ನು ಹೇಳುತ್ತವೆ. ಅವುಗಳ ಸಾರವನ್ನೆಲ್ಲ ಕೊಟ್ಟು ಶಾಸ್ತ್ರಿಗಳು ಶಿವಮಾರನ ಇತಿಹಾಸವನ್ನು ತಿಳಿಸಿದ್ದಾರೆ. ಶಿವಮೊಗ್ಗ ಜಿಲ್ಲೆಯ ಹುಂಚದ ಶಾಸನ ವೊಂದರಲ್ಲಿ ಶಿವಮಾರನಿಗೆ ಸೈಗೊಟ್ಟ ಎಂಬ ಇನ್ನೊಂದು ಹೆಸರಿದ್ದುದರ ವಿಷಯವನ್ನೂ ಅವರು ತಿಳಿಸಿದ್ದಾರೆ. ಅಲ್ಲಿರುವ ಉಲ್ಲೇಖ ಇಂತಿದೆ-

ಶಿವಮಾರದೇವಂ ಸೈಗೊಟ್ಟನೆಂಬೆರಡನೆಯ ಪೆಸರಂ ತಾಳ್ದಿ ಶಿವಮಾರ ಮತಮೆಂದು ಗಜಶಾಸ್ತ್ರಮಂ ಮಾಡಿ ಮತ್ತಂ

ಏವೇಳ್ವುದೋ ಶಿವಮಾರಮ-
ಹೀವಳಯಾಧಿಪನ ಸುಭಗಕವಿತಾಗುಣಮಂ
ಭೂವಳಯದೊಳ್ ಗಜಾಷ್ಟಕ
ಮೋವನಿಗೆ ಯುಮೊನಕೆವಾಡುಮಾದುದೆ ಪೇಳ್ಗುಂ॥ ಇತ್ಯಾದಿ

ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿಗಳಲ್ಲದೆ ಬೇರೆ ಯಾರೂ ಇಷ್ಟು ಪಾಂಡಿತ್ಯ ಪೂರ್ಣ ಪೀಠಿಕೆಯನ್ನು ಬರೆಯಲಾರರು ಎಂದು ನನ್ನ ಭಾವನೆ.

ಮಹಾಕಾವ್ಯ ಲಕ್ಷಣ ಸಂಸ್ಕೃತದಲ್ಲಿ ಅನೇಕ ಅಲಂಕಾರಿಕರು ಮಹಾಕಾವ್ಯದ ಲಕ್ಷಣವನ್ನು ಹೇಳಿದ್ದಾರೆ. ಕನ್ನಡ ಗ್ರಂಥಕಾರರನೇಕರು ಅವರನ್ನು ಅನುಸರಿಸಿದ್ದಾರೆ. ಅವರೆಲ್ಲರ ಅಭಿಪ್ರಾಯಗಳನ್ನು ಕ್ರೋಢೀಕರಿಸಲು ಪೂಜ್ಯ ಶಾಸ್ತ್ರಿಗಳು **ಮಹಾಕಾವ್ಯ ಲಕ್ಷಣ** ಗ್ರಂಥವನ್ನು ರಚಿಸಿದ್ದಾರೆ. ಪ್ರೊ. ವಿವೇಕ ರೈ ಅವರು ಅದರ ಇಂಗ್ಲಿಷ್ ಅನುವಾದ ಅಪೇಕ್ಷಿಸಿದಾಗ ಶಾಸ್ತ್ರಿಗಳು ಆ ಅನುವಾದ ಕಾರ್ಯವನ್ನು ನನಗೆ ವಹಿಸಿದರು. ಇಂಗ್ಲಿಷ್ ಅನುವಾದವು ಮೈಸೂರಿನ ಭಾರತೀಯ ಭಾಷಾ ಸಂಸ್ಥಾನ (Central Institute of Indian Languages)ದಿಂದ 2015ರಲ್ಲಿ ಪ್ರಕಟಿತವಾಗಿದೆ.

ಈ ಗ್ರಂಥದಲ್ಲಿ ಎಷ್ಟು ಗ್ರಂಥಗಳಿಂದ ವಿಷಯಗಳನ್ನು ಸಂಗ್ರಹಿಸಲಾಗಿದೆ ಎಂಬುದನ್ನು ನೋಡಿದಾಗ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿಗಳ ಅಧ್ಯಯನದ ವಿಶಾಲತೆ ನಮ್ಮ ಅರಿವಿಗೆ ಬರುತ್ತದೆ. ವಿಷ್ಣು ಧರ್ಮೋತ್ತರ ಪುರಾಣ, ಭಾಮಹನ ಕಾವ್ಯಾಲಂಕಾರ, ದಂಡಿಯ ಕಾವ್ಯಾದರ್ಶ, ಜಿನಸೇನನ ಪೂರ್ವ ಪುರಾಣ, ವಾಮನನ ಕಾವ್ಯಾಲಂಕಾರ ಸೂತ್ರವೃತ್ತಿ, ರುದ್ರಟನ ಕಾವ್ಯಾಲಂಕಾರ, ಅಭಿನವ ಗುಪ್ತನ ಧ್ವನ್ಯಾಲೋಕ ಲೋಚನ, ಅಗ್ನಿಪುರಾಣ, ಭೋಜನ ಸರಸ್ವತೀ ಕಂಠಾಭರಣ, ಹೇಮಚಂದ್ರನ ಕಾವ್ಯಾನುಶಾಸನ, ವಾಗ್ಭಟನ ಕಾವ್ಯಾನುಶಾಸನ, ಅಮರಚಂದ್ರ ಸೂರಿಯ ಕಾವ್ಯ ಕಲ್ಪಲತಾ, ವಿಶ್ವನಾಥನ ಸಾಹಿತ್ಯದರ್ಪಣ, ವಿದ್ಯಾನಾಥನ ಪ್ರತಾಪ ರುದ್ರಯಶೋ ಭೂಷಣ, ಕೇಶವಮಿಶ್ರನ ಅಲಂಕಾರ ಶೇಖರ, ಶ್ರೀ ಕೃಷ್ಣ ಕವಿಯ ಮಂದಾರ ಮರಂದಚಂಪೂ, ಕೆಳದಿ ಬಸವರಾಜನ ಶಿವತತ್ತ್ವರತ್ನಾಕರ, ನರಸಿಂಹ ಕವಿಯ ನಂಜರಾಜ ಯಶೋಭೂಷಣ, ಕಾಂತಿಚಂದ್ರನ ಕಾವ್ಯದೀಪಿಕಾ-ಇವಿಷ್ಟು ಸಂಸ್ಕೃತ ಗ್ರಂಥಗಳು.

ಕನ್ನಡ ಗ್ರಂಥಗಳು-ಕವಿರಾಜ ಮಾರ್ಗ, ಕಾವ್ಯಾವಲೋಕನ, ಉದಯಾದಿತ್ಯಾಲಂಕಾರ, ತತ್ತ್ವರತ್ನ ಪ್ರದೀಪಿಕೆ, ಸೂಕ್ತಿ ಸುಧಾರ್ಣವ, ಮಾಧವಾಲಂಕಾರ, ಅಭಿನವಾಭಿದಾನ, ವಿವೇಕ ಚಿಂತಾಮಣಿ, ಕರ್ನಾಟಕ ಛಂದೋಲಂಕಾರ ಸಾಹಿತ್ಯ ಲಕ್ಷಣ ಸಂಗ್ರಹ ಇತ್ಯಾದಿ. ಅವರು ಎಷ್ಟು ಜತನದಿಂದ ಒಂದೊಂದು ಗ್ರಂಥವನ್ನೂ ರಚಿಸಿದ್ದಾರೆ ಎಂದು ಬೇರೆ ಹೇಳುವುದು ಬೇಕಿಲ್ಲ. ಮೂಲಗ್ರಂಥಕಾರರು ಹೇಳಿದ ಲಕ್ಷಣವನ್ನು ಅನುವಾದಿಸಿ ಅದು ಹಿಂದಿನ ಗ್ರಂಥಕಾರರ ಚಿಂತನೆಗಿಂತ ಭಿನ್ನವಾಗಿದೆಯೇ? ಯಾವ ಹೊಸ ವಿಚಾರಗಳನ್ನು ಪ್ರಕೃತ ಗ್ರಂಥಕಾರನು ಸೇರಿಸಿದ್ದಾನೆ ಎಂಬ ಚಿಂತನೆಯನ್ನೂ ಮಾಡಿದ್ದಾರೆ.

ಇನ್ನು ಗ್ರಂಥ ಸಂಪಾದನೆಯ ವಿಷಯವನ್ನು ನೋಡೋಣ. ವಿಶ್ವವಿದ್ಯಾನಿಲಯದ ಸೇವೆಯಲ್ಲಿದ್ದಾಗ ಮಾತ್ರವಲ್ಲ, ಆಮೇಲೆ ಕೂಡ ಅವರು ಗ್ರಂಥ ಸಂಪಾದನೆಯ ಕಾಯಕವನ್ನು ಮಾಡಿದ್ದಾರೆ. 2006 ರಲ್ಲಿ ಅವರಿಂದ ಸಂಪಾದಿತವಾದ ಪಂಪ ಸಂಪುಟವನ್ನು ನೋಡಿದರೆ ಸಾಕು, ಅವರ ಸಂಶೋಧನಾಸಕ್ತಿಯ ಆಳವಾದ ಬೇರುಗಳು ಗೋಚರಿಸುತ್ತವೆ. ಪಂಪನ ಪೂರ್ವಜರು ವೆಂಗಿ ಮಂಡಲದವರು ಎಂದು ಮಾತ್ರ ಅವರು ಹೇಳಿಲ್ಲ. ಪೊನ್ನ ಕವಿ ಅದನ್ನು 'ವೆಂಗೀವಿಷಯಂ ತ್ರೈಭುವನಂಗಳೊಳ್ ಅಗ್ಗಳದ ವಿಷಯಂ' ಎಂದು, ರನ್ನನು 'ಮಿಗಿಲೆನಿಕುಂ ವಿಷಯದೊಳಗೆ ವೆಂಗೀವಿಷಯಂ' ಎಂದು, ನಾಗವರ್ಮನು 'ಜಗದೊಳಗಿದೊಂದು ಮಿಗಿಲೆನೆ ನೆಗಳ್ದಪುದು ವೆಂಗಿವಿಷಯಂ' ಎಂದು ಅದನ್ನು ಬಣ್ಣಿಸಿದ್ದಾರೆ ಎಂದು ತಿಳಿಸುತ್ತಾರೆ. ಕನ್ನಡ ಸಾಹಿತ್ಯದ ಎಲ್ಲ ಮಗ್ಗುಲಗಳನ್ನೂ ಹೀಗೆ ತಲಸ್ಪರ್ಶಿಯಾಗಿ ತಿಳಿದವರು ಇನ್ನು ಯಾರಿದ್ದಾರೆ? ವ್ಯಾಸಭಾರತದ ಕಥೆಯನ್ನು ಪಂಪನು ಅಲ್ಲಲ್ಲಿ ಹೇಗೆ ಪರಿವರ್ತಿಸಿಕೊಂಡಿದ್ದಾನೆಂಬ ವಿವರಣೆ ಅತ್ಯಂತ ಉಪಯುಕ್ತವಾಗಿದೆ. ಎರಡು ಗ್ರಂಥಗಳ ಸಮ್ಯಗ್‌ಜ್ಞಾನವಿದ್ದವರು ಮಾತ್ರ ಇದನ್ನೆಲ್ಲ ತಿಳಿಸಲು ಸಮರ್ಥರು.

ಬೇರೆಯವರು ಹತ್ತು ಜನ್ಮಗಳಲ್ಲಿ ಮಾಡಬಹುದಾದಷ್ಟು ಕನ್ನಡ ಸೇವೆಯನ್ನು ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿಗಳು ಒಂದೇ ಜನ್ಮದಲ್ಲಿ ಮಾಡಿದ್ದಾರೆ. ಅವರ ಕೆಲಸ ಸಂಬಳಕ್ಕಾಗಿ ಅಥವಾ ಪ್ರಶಸ್ತಿಗಳಿಗಾಗಿ ಮಾಡಿದ ಕೆಲಸವಲ್ಲ. ಕನ್ನಡ ಸರಸ್ವತಿಯ ಅನುಗ್ರಹದಿಂದ ಸಾಹಿತ್ಯ ಪ್ರೀತಿಯಿಂದ ಮಾಡಿದ ಕೆಲಸ. ಇಲ್ಲಿ ನಾನು ಬರೆದಿರುವುದು ನನ್ನ ಪರಿಮಿತ ಅರಿವಿನಿಂದ. ಅವರ ನೇರ ವಿದ್ಯಾರ್ಥಿಗಳು, ಸಹೋದ್ಯೋಗಿಗಳು ಬರೆಯುವುದು ಇದರ ನೂರರಷ್ಟು, ಸಾವಿರದಷ್ಟು ಇದೆ. ಅಂತಹ ಹಿರಿಯ ಸಹೃದಯ ವಿದ್ವಾಂಸರಿರುವ ಕಾಲದಲ್ಲೇ ನಾವೂ ಇದ್ದೇವೆ ಎಂಬುದೇ ನನ್ನಂತಹ ಸಾಮಾನ್ಯರಿಗೆ ಹೆಮ್ಮೆಯ ವಿಷಯ. ಅವರು ಶಿಷ್ಯ-ಪ್ರಶಿಷ್ಯ ಪರಂಪರೆಯನ್ನೂ ಹರಸುತ್ತಿರಲಿ, ಪ್ರಶಸ್ತಿ ಪಂಕ್ತಿಯು ಅವರನ್ನು ಅಲಂಕರಿಸುತ್ತಿರಲಿ ಎಂದು ಹಾರೈಸೋಣ.

ಹಾಸನಾಂಬೆ ಉತ್ಸವದ ವೇಳೆ ವಿವಿಐಪಿ ಪಾಸ್ ರದ್ದು: ಸಚಿವ ಕೃಷ್ಣಭೈರೇಗೌಡ



ಹಾಸನ ಜಿಪಂ ಸಂಭಾಂಗಣದಲ್ಲಿ ಸಚಿವ ಕೃಷ್ಣಭೈರೇಗೌಡ, ಹಾಸನಾಂಬ ಜಾತ್ರಾ ಮಹೋತ್ಸವ ಸಂಬಂಧ ಸಭೆ ನಡೆಸಿದರು.

ಹಾಸನ: ಅಕ್ಟೋಬರ್ 9ರಿಂದ 23ರವರೆಗೆ ನಡೆಯುವ ಈ ಬಾರಿಯ ಹಾಸನಾಂಬ ದೇವಿಯ ಮಹೋತ್ಸವದಲ್ಲಿ ದರ್ಶನಕ್ಕೆ ಆಗಮಿಸಿ ಸರದಿ ಸಾಲಿನಲ್ಲಿ ದರ್ಶನ ಪಡೆಯುವ ಭಕ್ತರಿಗೆ ಸಮಸ್ಯೆಗಳು ಆಗಬಾರದು. ಈ ವರ್ಷದಿಂದ ವಿವಿಐಪಿ ಪಾಸ್ ರದ್ದು ಮಾಡಿ, ಗೋಲ್ಡ್ ಪಾಸ್‌ಗಳನ್ನು ವಿತರಿಸಲು ಕ್ರಮ ವಹಿಸಲಾಗುವುದು ಎಂದು ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಹೊಯ್ಸಳ ಸಂಭಾಂಗಣದಲ್ಲಿ ನಡೆದ ಶ್ರೀ ಹಾಸನಾಂಬ ದೇವಿ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ವರ್ಷ ಜಾತ್ರಾ ಮಹೋತ್ಸವ ಅಚ್ಚುಕಟ್ಟಾಗಿ ನಡೆದಿದೆ. ಆದರೆ ವಿವಿಐಪಿ ಪಾಸ್‌ಗಳ ವಿತರಣೆ, ಶಿಷ್ಟಾಚಾರದ ಹಾವಳಿಯಿಂದ ಸ್ವಲ್ಪ ವ್ಯತ್ಯಾಸವಾಗಿದೆ ಎಂದು ತಿಳಿದು ಬಂದಿದೆ.

ಈ ಬಾರಿ ಇಂತಹ ತಪ್ಪುಗಳು ಆಗಬಾರದು ಅದಕ್ಕೆ ಜನಪ್ರತಿನಿಧಿಗಳು ಅಧಿಕಾರಿಗಳು ಸಹಕಾರ ನೀಡಬೇಕು. ವಿವಿಐಪಿ ಬದಲು ಈ ಬಾರಿ ಗೋಲ್ಡ್ ಪಾಸ್‌ಗಳನ್ನು ವಿತರಣೆ ಮಾಡಲಾಗುವುದು. ಗೋಲ್ಡ್ ಪಾಸ್ ಪಡೆದ ಒಬ್ಬರಿಗೆ ಮಾತ್ರ ದರ್ಶನಕ್ಕೆ ಅವಕಾಶ ಕೊಡ ಲಾಗುವುದು. ಗೋಲ್ಡ್ ಕಾರ್ಡ್ ಪಡೆದರೆ ಮುಂಜಾನೆ 5ರಿಂದ 11 ಗಂಟೆವರೆಗೆ ದರ್ಶನ ಪಡೆಯಬಹುದು.

ಹಾಸನಾಂಬ ಜಾತ್ರೆಯಲ್ಲಿ ಜಾನಪದ ಕಲೆಗೆ ಹೆಚ್ಚು ಒತ್ತು ನೀಡಬೇಕು. ಇನ್ನು ವಿದ್ಯಾರ್ಥಿಗಳಿಗೆ ಇಂತಹ ಕಾರ್ಯಕ್ರಮದಲ್ಲಿ ವೇದಿಕೆ ಕಲ್ಪಿಸಿಕೊಡಬೇಕು ಎಂದರು.

ಸಭೆಯಲ್ಲಿ ಸಂಸದ ಶ್ರೇಯಸ್ ಪಟೇಲ್, ಶಾಸಕರಾದ ಶಿವಲಿಂಗೇಗೌಡ, ಹೆಚ್.ಪಿ.ಸ್ವರೂಪ್, ಸಿಮೆಂಟ್ ಮಂಜು, ಜಿಲ್ಲಾಧಿಕಾರಿ ಲತಾಕುಮಾರಿ, ಎಸ್ಪಿ ಮೊಹಮ್ಮದ್ ಸುಜೀತ, ಜಿಪಂ ಸಿಇಓ ಪೂರ್ಣಿಮಾ, ಉಪ ವಿಭಾಗಾಧಿಕಾರಿ ಹಾಗೂ ದೇವಾಲಯದ ಆಡಳಿತಾಧಿಕಾರಿ ಮಾರುತಿ, ಮೇಯರ್ ಹೇಮಲತಾ ಕಮಲ್‌ಕುಮಾರ್ ಇನ್ನಿತರರಿದ್ದರು.

▶ ಭಾನುಮುಷ್ತಾಕ್ ಅವರು ಅಂತರಾಷ್ಟ್ರೀಯ ಮಟ್ಟದಲ್ಲಿ ಕನ್ನಡ ಸಾಹಿತ್ಯಕ್ಕೆ ಕೀರ್ತಿ ತಂದಿದ್ದಾರೆ. ಅವರು ಕನ್ನಡಿಗರ ಅಸ್ಮಿತೆ, ಗೌರವದ ಸಂಕೇತ. ಜಾತಿ ಧರ್ಮದ ಕಣ್ಣಿನಿಂದ ನೋಡಿ ಕನ್ನಡಕ್ಕೆ ಸಿಕ್ಕಿರುವ ಗೌರವ ಕಳೆಯಬೇಡಿ. ಅವರಿಂದ ದಸರಾ ಉದ್ಘಾಟಿಸುವುದು ಸೂಕ್ತವಲ್ಲ ಎನ್ನುವ ಬಿಜೆಪಿ ನಾಯಕರ ವಾದ ಖಂಡನೀಯ.
-ಕೃಷ್ಣಭೇರೇಗೌಡ, ಸಚಿವ

ಗಣೇಶ ಮೂರ್ತಿ ಪ್ರತಿಷ್ಠಾಪನೆ, ಮೆರವಣಿಗೆ, ವಿಸರ್ಜನೆಗೆ ಪೊಲೀಸರ ಷರತ್ತು

ಬಲವಂತವಾಗಿ ಚಂದಾ ವಸೂಲಿ ಮಾಡಿದರೆ ಕಾನೂನು ಕ್ರಮದ ಎಚ್ಚರಿಕೆ

- ಗಣೇಶ ಪ್ರತಿಷ್ಠಾಪನೆಗೆ ಅನುಮತಿ ಕಡ್ಡಾಯ
- ರಾತ್ರಿ 10 ಗಂಟೆವರೆಗೆ ಮನೋರಂಜನಾ ಕಾರ್ಯಕ್ರಮ
- ಡಿ.ಜೆ.ಸೇರಿ ಹೆಚ್ಚು ಶಬ್ಧದ ಧ್ವನಿವರ್ಧಕ ಬಳಸದಂತೆ ಸೂಚನೆ
- ಬೆಂಕಿ ನಂದಿಸುವ ಉಪಕರಣ ಇಡಲು ಕಟ್ಟಪ್ಪಣೆ







ಮೈಸೂರು, ಆ.26(ಬಿಎಲ್‌ಯು)- ಗಣೇಶ ಹಬ್ಬದ ಸಂದರ್ಭದಲ್ಲಿ ಮೈಸೂರಿನಲ್ಲಿ ಗಣೇಶಮೂರ್ತಿ ಪ್ರತಿಷ್ಠಾಪನೆ, ಮೆರವಣಿಗೆ ಮತ್ತು ವಿಸರ್ಜನೆ ಕುರಿತಂತೆ ನಗರ ಪೊಲೀಸ್ ಆಯುಕ್ತರ ಕಚೇರಿ ಕಟ್ಟುನಿಟ್ಟಿನ ಸೂಚನೆ ಪಾಲಿಸುವಂತೆ ತಾಕೀತು ಮಾಡಿದೆ. ಅಲ್ಲದೆ ಬಲವಂತವಾಗಿ ಯಾವುದೇ ರೀತಿಯ ಚಂದಾ ವಸೂಲಿ ಮಾಡಬಾರದು ಎಂದು ಸೂಚಿಸಿದೆ.

ಗಣಪತಿ ಪ್ರತಿಷ್ಠಾಪನೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸುವಾಗ ವಾಹನ ಸಂಚಾರಕ್ಕೆ ಅಡಚಣೆ ಆಗದಂತೆ ಸ್ಥಳ ಆಯ್ಕೆ ಮಾಡಬೇಕು, ಗಣಪತಿ ಪ್ರತಿಷ್ಠಾಪನೆ, ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಮೆರವಣಿಗೆ ಸಂಬಂಧ ನಗರ ಪಾಲಿಕೆಯ ವಲಯ ಕಚೇರಿ ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ತೆರೆಯಲಾಗಿರುವ ಏಕಗವಾಕ್ಷಿ ಕೇಂದ್ರದಲ್ಲಿ ಕಡ್ಡಾಯವಾಗಿ ಅನುಮತಿ ಪಡೆಯಬೇಕು.

ಗಣಪತಿ ಪ್ರತಿಷ್ಠಾಪನೆ ಸ್ಥಳದಲ್ಲಿ ಮನೋರಂಜನಾ ಕಾರ್ಯಕ್ರಮ ಹಾಗೂ ವಿಸರ್ಜನಾ ಮೆರವಣಿಗೆಗೆ ಪೂರ್ವಾನುಮತಿ ಇದ್ದರೂ ಎರಡು ದಿನಗಳ ಮುಂಚಿತವಾಗಿ ಸಂಬಂಧಪಟ್ಟ ಪೊಲೀಸ್ ಠಾಣೆಗೆ ಕಡ್ಡಾಯವಾಗಿ ಮಾಹಿತಿ ನೀಡಬೇಕು.

ಮನೋರಂಜನಾ ಕಾರ್ಯಕ್ರಮ, ಮೆರವಣಿಗೆ ಮತ್ತು ವಿಸರ್ಜನೆ ಕಾರ್ಯಕ್ರಮಗಳನ್ನು ರಾತ್ರಿ 10 ಗಂಟೆಗೆ ಕಡ್ಡಾಯವಾಗಿ ಮುಗಿಸಬೇಕು. ಡಿ.ಜೆ. ಮತ್ತು ಇನ್ನಿತರ ಹೆಚ್ಚು ಶಬ್ಧದ ಸ್ಪೀಕರ್‌ಗಳನ್ನು ಬಳಸಬಾರದು. ಧ್ವನಿವರ್ಧಕಗಳನ್ನು ಕಡಿಮೆ ಧ್ವನಿಯಲ್ಲಿ ಬಳಸಬೇಕು. ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 6 ಗಂಟೆವರೆಗೆ ಯಾವುದೇ ಧ್ವನಿವರ್ಧಕಗಳನ್ನು ಬಳಸುವಂತಿಲ್ಲ. ಗಣೇಶ ಮೂರ್ತಿ ಪ್ರತಿಷ್ಠಾಪನೆ ಸ್ಥಳದಲ್ಲಿ ಬೆಂಕಿ ಆಕಸ್ಮಿಕ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕು, ಬೆಂಕಿ ನಂದಿಸುವ ಉಪಕರಣ, ನೀರು, ಮರಳುಗಳನ್ನು ಇಟ್ಟುಕೊಂಡಿರಬೇಕು, ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಿ ಕಿಡಿಗೇಡಿಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು.

ರಾತ್ರಿ ವೇಳೆ ಕಾರ್ಯಕ್ರಮದ ಆಯೋಜಕರು ಅಥವಾ ಸ್ವಯಂ ಸೇವಕರು ಗಣೇಶ ಮೂರ್ತಿ ಪ್ರತಿಷ್ಠಾಪನಾ ಸ್ಥಳದಲ್ಲಿ ಹಾಜರಿರಬೇಕು, ಗಣಪತಿ ವಿಸರ್ಜನೆ ಮತ್ತು ಮೆರವಣಿಗೆ ವೇಳೆ ವಾಹನಗಳ ಸಂಚಾರಕ್ಕೆ ಅಡ್ಡಿಯಾಗದಂತೆ ಪೊಲೀಸರು ನೀಡುವ ಸೂಚನೆಗಳನ್ನು ಪಾಲಿಸಬೇಕು.

ಮೈಸೂರು ನಗರಪಾಲಿಕೆ ನಿಗದಿಪಡಿಸಿರುವ ಸ್ಥಳಗಳಲ್ಲಿ ಗಣೇಶ ಮೂರ್ತಿಗಳನ್ನು ವಿಸರ್ಜಿಸಬೇಕು, ವಿಸರ್ಜನಾ ಸ್ಥಳದಲ್ಲಿ ಮುಂಜಾಗ್ರತಾ ಕ್ರಮವಾಗಿ ಈಜುಗಾರರನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಬೇಕು.

ಕಾರ್ಯಕ್ರಮದ ವ್ಯವಸ್ಥಾಪಕರು, ಸ್ವಯಂಸೇವಕರನ್ನು ನಿಯೋಜಿಸಿ ಅವರಿಗೆ ಗುರುತಿನ ಚೀಟಿ ನೀಡಬೇಕು. ಗಣಪತಿ ಪ್ರತಿಷ್ಠಾಪನೆ, ಮನೋರಂಜನಾ ಕಾರ್ಯಕ್ರಮ, ಮೆರವಣಿಗೆ, ವಿಸರ್ಜನೆ ವೇಳೆ ಇವರು ಸೂಕ್ತ ಉಸ್ತುವಾರಿ ವಹಿಸುವಂತೆ ನೋಡಿಕೊಳ್ಳಬೇಕು. ಬಲವಂತವಾಗಿ ಯಾವುದೇ ರೀತಿಯ ಚಂದಾ ವಸೂಲಿ ಮಾಡಿದರೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು ಎಂದು ನಗರ ಪೊಲೀಸ್ ಆಯುಕ್ತರ ಕಚೇರಿ ಎಚ್ಚರಿಕೆ ನೀಡಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ 46
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸ್ಥಾಪನೆ : 1916 — RBI License No. UBD KA 844P, Dt.28.01.1987

ದಿ ಮುಸ್ಲಿಂ ಕೋ-ಆಪರೇಟಿವ್ ಬ್ಯಾಂಕ್ ನಿ.,

ಶಾಖೆಗಳು: 1) ಉದಯಗಿರಿ 2) ರಾಜೀವ್‌ನಗರ 3) ಹುಣಸೂರು
ಮುಖ್ಯ ಶಾಖೆ: ನ್ಯೂ ಸಯ್ಯಾಜಿ ರಾವ್ ರಸ್ತೆ, ಮೈಸೂರು-570021

ನಿಯಮ ಸೆಕ್ಷನ್ 13(4) ರ ಅಡಿಯಲ್ಲಿ ನಿಯಮ 8(1) - ಪರಿಶಿಷ್ಟ IV
ಕಬ್ಜೆ (ಸ್ವಾಧೀನ) ವಹಿಸುವ ಬಗೆಗಿನ ತಿಳುವಳಿಕೆ ನೋಟೀಸ್

ಕೆಳಸಹಿದಾರರು ದಿ ಮುಸ್ಲಿಂ ಕೋ-ಆಪರೇಟಿವ್ ಬ್ಯಾಂಕ್ ನಿ., ಮೈಸೂರು ಇದರ ಅಧಿಕಾರ ಹೊಂದಿದ ಅಧಿಕಾರಿಯಾಗಿದ್ದು, ಹಣಕಾಸು ಸ್ವತ್ತುಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್ ನಿರ್ಮಾಣ ಭದ್ರತೆ ಮತ್ತು ಭದ್ರತಾ ಹಿತಾಸಕ್ತಿ [ನಿಯಮ. 2002 (2002ರ 54)] ರ ಅನ್ವಯ ಸೆಕ್ಷನ್ 13(12)ರ [ನಿಯಮ 3] ಅನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮ 2002ರ ಅನ್ವಯ ಈ ಕೆಳಗಿನ ಸಾಲಗಾರರಿಗೆ ಸೆಕ್ಷನ್ 13(2) ರ ಅಡಿ ತಗಾದೆ ಸೂಚನೆಯನ್ನು ನೀಡಿದ್ದು, ನೋಟೀಸ್‌ನಲ್ಲಿ ತಿಳಿಸಿರುವ ಮೊತ್ತವನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗೆ ಸೂಚಿಸಿರುವ ಮೊಬಲಗನ್ನು ಬಡ್ಡಿಯೊಂದಿಗೆ ಮರು ಪಾವತಿಸುವಂತೆ ಸೂಚಿಸಲಾಗಿತ್ತು.
ಸಾಲಗಾರರುಗಳು ಸಾಲದ ಹಣವನ್ನು ಮರು ಪಾವತಿ ಮಾಡಲು ವಿಫಲರಾಗಿದ್ದು, ಸಾಲಗಾರರುಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಕೆಳ ಸಹಿದಾರರು ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13(4) ಕಾಯಿದೆ ನಿಯಮ 8 ಮತ್ತು 9 ಅನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ದಿನಾಂಕದಂದು ವಿವರಿಸಲಾಗಿರುವ ಸ್ವತ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ.
ನಿರ್ದಿಷ್ಟವಾಗಿ ಸಾಲಗಾರರುಗಳಿಗೆ, ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಯಾರೊಬ್ಬರೂ ಸಹ ಸದರಿ ಸ್ವತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೆ ಆದರೆ ದಿ ಮುಸ್ಲಿಂ ಕೋ-ಆಪರೇಟಿವ್ ಬ್ಯಾಂಕ್ ನಿ., ಮೈಸೂರು ಈ ಬ್ಯಾಂಕಿಗೆ ಬಾಕಿ ಇರುವ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ ಚುಕ್ತ ಮಾಡುವುದಕ್ಕೆ ಅದು ಒಳಪಟ್ಟಿರುತ್ತದೆ.
ಕಾಯಿದೆ ಸೆಕ್ಷನ್ 13(8) ರ ನಿಬಂಧನೆಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ಸಮಯಕ್ಕೆ ತಮ್ಮ ಸ್ವತ್ತುಗಳನ್ನು ಪಡೆದುಕೊಳ್ಳಲು ಸಾಲಗಾರರ ಗಮನಕ್ಕೂ ತರಲಾಗಿದೆ.

ಕ್ರಮ ಸಂಖ್ಯೆ	ಸಾಲಗಾರರು ಮತ್ತು ಜಾಮೀನುದಾರರ ಹೆಸರು	ಸ್ಥಿರಾಸ್ತಿ ವಿವರ	ಡಿಮ್ಯಾಂಡ್ ನೋಟೀಸ್ ದಿನಾಂಕ	ಸ್ವಾಧೀನಪಡಿಸಿಕೊಂಡಿರುವ ದಿನಾಂಕ	ಬಾಕಿ ಇರುವ ಮೊತ್ತ (ರೂ.ಗಳಲ್ಲಿ)
1.	1) ಶ್ರೀ ಮೊಹಮ್ಮದ್ ಅಮೀನ್ ಬಿನ್ ಲೇಟ್ ಅಮೀರ್ ಖಾನ್ 2) ಶ್ರೀ ಉಮರ್ ಫಾರೂಕ್ ಬಿನ್ ಮೊಹಮ್ಮದ್ ಅಮೀನ್ ಮನೆ ನಂ.3061, ಕ್ವಾಸ್ಟಂಟ್ ರಸ್ತೆ, ಲಷ್ಕರ್ ಮೊಹಲ್ಲಾ, ಮೈಸೂರು.	ಮೈಸೂರು ಸಿಟಿ, ಲಷ್ಕರ್ ಮೊಹಲ್ಲಾ, ಸಾವದೇ ರಸ್ತೆ ಈಶಾನ್ಯ ಭಾಗ, ಕಾರ್ಪೊರೇಶನ್ ಮನೆ ನಂ.3061, ಹೊಸ ನಂ. ಎಲ್-61, ವಿಸ್ತೀರ್ಣ: ಪೂರ್ವ-ಪಶ್ಚಿಮ 19.00 ಅಡಿಗಳು ಮತ್ತು ಉತ್ತರ-ದಕ್ಷಿಣ 21.00 ಅಡಿಗಳು ಮತ್ತು ಹಿಂಭಾಗದ ಕಡೆಗೆ ಮತ್ತು ಪೂರ್ವ-ಪಶ್ಚಿಮ 18.00 ಅಡಿಗಳು ಮತ್ತು ಉತ್ತರ-ದಕ್ಷಿಣ 27.00 ಅಡಿಗಳು ಚಕ್ಕುಬಂದಿ:- ಪೂರ್ವಕ್ಕೆ: ವಾಲಿ ಅಹಮದ್ ರವರ ಮನೆ, ಪಶ್ಚಿಮಕ್ಕೆ: ಅಬ್ದುಲ್ ಮತೀನ್ ರವರ ಸ್ವತ್ತು, ಉತ್ತರಕ್ಕೆ: ಸಾವದೇ ರಸ್ತೆ, ದಕ್ಷಿಣಕ್ಕೆ: ಶೇಕ್ ಮೊಹಿಯುದ್ದೀನ್ ರವರ ಸ್ವತ್ತು.	19.06.2025 ಎನ್‌ಪಿಎ ದಿನಾಂಕ 05.04.2025	21.08.2025	ಖಾತೆ ಸಂಖ್ಯೆ ಹೆಚ್‌ಪಿ-9352 ರೂ.14,45,428/- + ದಿನಾಂಕ 19.06.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ
2.	1) ಶ್ರೀ ಶೇಕ್ ಮೊಹಿಯುದ್ದೀನ್ ಬಿನ್ ಅಬ್ದುಲ್ ರಸೋಲ್ 2) ಶ್ರೀ ಫರ್ಹಾನ್ ಬಿನ್ ಶೇಕ್ ಮೊಹಿಯುದ್ದೀನ್ ಮನೆ ನಂ.13, 4ನೇ ಕ್ರಾಸ್, ಎ.ಜಿ. ಬ್ಲಾಕ್, ಎನ್.ಆರ್. ಮೊಹಲ್ಲಾ, ಮೈಸೂರು.	ಮೈಸೂರು ಸಿಟಿ, ಎನ್.ಆರ್. ಮೊಹಲ್ಲಾ, ಎ.ಜಿ. ಬ್ಲಾಕ್, 4ನೇ ಕ್ರಾಸ್, ಕಾರ್ಪೊರೇಶನ್ ಮನೆ ನಂ.13, ವಿಸ್ತೀರ್ಣ: ಪೂರ್ವ-ಪಶ್ಚಿಮ 38.00 ಅಡಿಗಳು ಮತ್ತು ಉತ್ತರ-ದಕ್ಷಿಣ 25.00 ಅಡಿಗಳು. ಚಕ್ಕುಬಂದಿ:- ಪೂರ್ವಕ್ಕೆ: ಖಾಲಿ ಜಮೀನು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: 12ನೇ ನಂಬರಿನ ಮನೆ, ದಕ್ಷಿಣಕ್ಕೆ: ರಸ್ತೆ.	27.05.2025 ಎನ್‌ಪಿಎ ದಿನಾಂಕ 20.01.2025	21.08.2025	ಖಾತೆ ಸಂಖ್ಯೆ ಹೆಚ್‌ಪಿ-8954 ರೂ.1,01,498/- + ದಿನಾಂಕ 23.05.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ
3.	1) ಶ್ರೀ ಸೈಯದ್ ಇರ್ಫಾನ್ ಬಿನ್ ಸೈಯದ್ ಅಕ್ಬರ್ ಮನೆ ನಂ.2375, 'ಸಿ' ಬ್ಲಾಕ್, ಘೌಸಿಯ ನಗರ, ಮೈಸೂರು. 2) ಶ್ರೀಮತಿ ಆಶ್ರಾ ಕೋಂ ಸೈಯದ್ ಇರ್ಫಾನ್ ಮನೆ ನಂ.76, 'ಸಿ' ಬ್ಲಾಕ್, ಘೌಸಿಯ ನಗರ, ಮೈಸೂರು.	ಮೈಸೂರು ಸಿಟಿ, ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾಗೆ ಹೊಂದಿಕೊಂಡಿದೆ, ಸವಾಯಿ ರಸ್ತೆ, ಕೆ.ಟಿ. ಬೀದಿ, ಮನೆ ನಂ.3136/2, ಹೊಸ ನಂ. ಎಂ-338, 3136/1, ಹೊಸ ನಂ. ಎಂ-338/1 ಮತ್ತು 338/2, ವಿಸ್ತೀರ್ಣ: ಪೂರ್ವ-ಪಶ್ಚಿಮ: 82.8+82/2 ಅಡಿಗಳು ಮತ್ತು ಉತ್ತರ-ದಕ್ಷಿಣ: 27.5+26.2/2 ಅಡಿಗಳು. ಚಕ್ಕುಬಂದಿ:- ಪೂರ್ವಕ್ಕೆ: ಮುಸೇನ್ ಖಾನ್ ರವರ ಸ್ವತ್ತು, ಪಶ್ಚಿಮಕ್ಕೆ: ಕೆ.ಟಿ. ಬೀದಿ, ಉತ್ತರಕ್ಕೆ: ನವಾಬ್ ಸೈಯದ್ ಮೊಹಿಯುದ್ದೀನ್ ರವರ ಸ್ವತ್ತು, ದಕ್ಷಿಣಕ್ಕೆ: ರಸ್ತೆ.	27.05.2025 ಎನ್‌ಪಿಎ ದಿನಾಂಕ 03.12.2024	21.08.2025	ಖಾತೆ ಸಂಖ್ಯೆ ಹೆಚ್‌ಎಲ್-359 ರೂ.26,97,155/- + ದಿನಾಂಕ 23.05.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ
4.	ಶ್ರೀಮತಿ ತಸ್ಲೀಮ್ ಉನ್ನಿಸಾ ಕೋಂ ರಫೀಕ್ ಅಹ್ಮದ್ ಮನೆ ನಂ.2081, ಎಂ-5, 1ನೇ ಮೇನ್, ಹುರಬ್ ಅಲಿ ಬೀದಿ, ಮಂಡಿ ಮೊಹಲ್ಲಾ, ಮೈಸೂರು.	1ನೇ ಆಸ್ತಿಯ ವಿವರ: ಮೈಸೂರು ಸಿಟಿ, ಮಂಡಿ ಮೊಹಲ್ಲಾ, 1ನೇ ಮುಖ್ಯ, ಹುರಬ್ ಅಲಿ ಬೀದಿ, ಕಾರ್ಪೊರೇಶನ್ ಮನೆ ನಂ.2081, ಎಂ-5 ವಿಸ್ತೀರ್ಣ: ಪೂರ್ವ-ಪಶ್ಚಿಮ: 18.9 ಅಡಿಗಳು ಮತ್ತು ಉತ್ತರ-ದಕ್ಷಿಣ: 18.00 ಅಡಿಗಳು, ಈ ಸ್ವತ್ತಿನ ಉತ್ತರ ಭಾಗದ ಕಡೆಗೆ ಇನ್ನೊಂದು ಭಾಗ ನಿರ್ಮಿಸಿದೆ. ವಿಸ್ತೀರ್ಣ: ಪೂರ್ವ-ಪಶ್ಚಿಮ: 37.00 ಅಡಿಗಳು ಮತ್ತು ಉತ್ತರ-ದಕ್ಷಿಣ: 06.09 ಅಡಿಗಳು. ಚಕ್ಕುಬಂದಿ:- ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಅಮೀರ್ ಸಾಬ್ ರವರಿಗೆ ಸೇರಿದ ಸ್ವತ್ತು, ಉತ್ತರಕ್ಕೆ: ಮೊಹಮ್ಮದ್ ಖಾಸಿಂ ರವರಿಗೆ ಸೇರಿದ ಸ್ವತ್ತು, ದಕ್ಷಿಣಕ್ಕೆ: ಮೊಹಮ್ಮದ್ ಯೂಸುಫ್ ರವರಿಗೆ ಸೇರಿದ ಸ್ವತ್ತು. 2ನೇ ಆಸ್ತಿಯ ವಿವರ: ಮೈಸೂರು ಸಿಟಿ, ಮಂಡಿ ಮೊಹಲ್ಲಾ, ಹುರಬ್ ಅಲಿ ಬೀದಿ, 4ನೇ ಮುಖ್ಯ, ಕಾರ್ಪೊರೇಶನ್ ಮನೆ ನಂ.2024/1, ಎಂ-26/1, ವಿಸ್ತೀರ್ಣ: ಪೂರ್ವ-ಪಶ್ಚಿಮ: 25.00 ಅಡಿಗಳು ಮತ್ತು ಉತ್ತರ-ದಕ್ಷಿಣ: 9.00 ಅಡಿಗಳು. ಚಕ್ಕುಬಂದಿ:- ಪೂರ್ವಕ್ಕೆ: ಸಾವಿತ್ರಿ ಬಾಯಿ ರವರ ಉಳಿಕೆ ಸ್ವತ್ತು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಸಾವಿತ್ರಿ ಬಾಯಿ ರವರ ಉಳಿಕೆ ಸ್ವತ್ತು, ದಕ್ಷಿಣಕ್ಕೆ: ಶ್ರೀ ಆನಂದ್ ಶೆಟ್ಟಿ ರವರ ಸ್ವತ್ತು.	27.05.2025 ಎನ್‌ಪಿಎ ದಿನಾಂಕ 30.11.2016	21.08.2025	ಖಾತೆ ಸಂಖ್ಯೆ ಹೆಚ್‌ಎಲ್-260 ರೂ.17,95,396/- + ದಿನಾಂಕ 26.05.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ

ದಿನಾಂಕ: 26.08.2025
ಸ್ಥಳ: ಮೈಸೂರು

ಸಹಿ/- ಅಧಿಕೃತ ಅಧಿಕಾರಿ
ದಿ ಮುಸ್ಲಿಂ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮೈಸೂರು.

ಮೈಸೂರು ಮಿತ್ರ ಬುಧವಾರ 27 ಆಗಸ್ಟ್ 2025

ಸಹಾಯಕ ನಿಬಂಧಕರ ಏಕಪಕ್ಷೀಯ ವರ್ತನೆ ಆರೋಪ: ಪ್ರತಿಭಟನೆ

ಪಾಂಡವಪುರ,ಆ.26– ಸಹಕಾರ ಸಂಘಗಳ ಸಹಾಯಕ ನಿಬಂಧಕರು ಏಕಪಕ್ಷೀಯವಾಗಿ ಕೆಲಸ ಮಾಡುತ್ತಿದ್ದು, ತಾಲೂಕಿನ ಹಲವು ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘಗಳ ನಿರ್ದೇಶಕರನ್ನು ಏಕಾಏಕಿ ಅನರ್ಹಗೊಳಿಸಿದ್ದಾರೆ ಎಂದು ಆರೋಪಿಸಿ ಶಾಸಕ ಎಚ್.ಟಿ.ಮಂಜು ನೇತೃತ್ವದಲ್ಲಿ ಸಹಕಾರಿಗಳು, ಕಾರ್ಯಕರ್ತರು ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಶಾಸಕರು ಮತ್ತು ಕಾರ್ಯಕರ್ತರು ಕಚೇರಿ ಎದುರೇ ಟೀ ಕುಡಿದು, ಅಡುಗೆ ತಯಾರಿಸಿಕೊಂಡು, ಕರ್ತವ್ಯ ಲೋಪವೆಸಗಿರುವ ನಾಗಭೂಷಣ್ ವಿರುದ್ದ ಶಿಸ್ತು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ತಾಲೂಕಿನ ಮುರುಕನಹಳ್ಳಿ ಸಂಘದ ನಿರ್ದೇಶಕರಾದ ಲಲಿತಮ್ಮ ಮತ್ತು ನಂಜುಂಡರವರು ಐದು ವರ್ಷಗಳ ಅವಧಿಗೆ ಪುನರ್ ಆಯ್ಕೆಯಾಗಿದ್ದರೂ ಸಹಕಾರ ಮಂಡಳಿಯ ಮಂಜೂರಾತಿಯಿಲ್ಲದೆ ಕಟ್ಟಡ ನಿರ್ಮಾಣ ಮಾಡಲಾಗಿದ್ದು, ಲೆಕ್ಕ ಪರಿಶೋಧನಾ ವರದಿಯಲ್ಲಿ ಆಚರಣೆ ಮಾಡಿದ್ದಾರೆ ಎಂಬ ಕಾರಣ ನೀಡಿ ನಿರ್ದೇಶಕ ಸ್ಥಾನ ದಿಂದ ಮೂರು ವರ್ಷಗಳ ವರೆಗೆ ಅವರಿಬ್ಬರನ್ನು ಅನರ್ಹ ಗೊಳಿಸಿದ್ದಾರೆ. ಹೊಸ ಹೊಳಲು ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾಗಿದ್ದ ಎಚ್.ಎಮ್.ಕೃಷ್ಣ ರವರನ್ನು ಜಾತಿ ಆಧಾರದ ಮೇಲೆ ವಜಾಗೊಳಿಸಿದ್ದಾರೆ. ಇದೇ ರೀತಿ ಸೋಮನಹಳ್ಳಿ, ಹೊಸಹೊಳಲು, ಅಗ್ರಹಾರ ಬಾಚಹಳ್ಳಿ ಸೇರಿದಂತೆ ವಿವಿಧ ಸಂಘಗಳಲ್ಲಿನ ನಿರ್ದೇಶಕರನ್ನು ವಜಾಗೊಳಿಸಿದ್ದಾರೆ. ಜೊತೆಗೆ ಮನ್‌ಮುಲ್ ಚುನಾವಣಾ ಸಂದರ್ಭದಲ್ಲಿಯೂ ಡೆಲಿಗೇಟ್‌ಗಳನ್ನು ಅನರ್ಹಗೊಳಿಸಿದ್ದಾರೆ ಎಂದು ಆರೋಪಿಸಿದರು.

ಉಪ ನಿಬಂಧಕರು ಪ್ರತಿಭಟನಾ ಸ್ಥಳಕ್ಕೆ ಬರುವ ವರೆಗೂ ಪ್ರತಿಭಟನೆ ನಿಲ್ಲಿಸುವುದಿಲ್ಲ ಎಂದು ಪ್ರತಿಭಟನಾಕಾರರು ಬಿಗಿಪಟ್ಟು ಹಿಡಿದರು ಕೊನೆಗೆ ಸ್ಥಳಕ್ಕೆ ಆಗಮಿಸಿದ ಉಪನಿಬಂಧಕ ಬೀರೇಂದ್ರ ಶಾಸಕರಿಂದ ಮನವಿ ಪತ್ರ ಸ್ವೀಕರಿಸಿದರು. ಸಹಾಯಕ ನಿಬಂಧಕ ನಾಗ ಭೂಷಣ್ ವಿರುದ್ಧ ಶಿಸ್ತು ಕ್ರಮಕ್ಕೆ ಮೇಲಾಧಿಕಾರಿಗಳಿಗೆ ಪತ್ರ ಬರೆಯಲಾಗುವುದು ಎಂದು ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ಅಂತ್ಯಗೊಳಿಸಿದರು.

ಟಿಎಪಿಎಂಎಸ್ ನಿರ್ದೇಶಕ ಟಿ.ಬಲದೇವ್, ಜೆಡಿಎಸ್ ತಾಲೂಕು ಯುವ ಅಧ್ಯಕ್ಷ ಮೋಹನ್ ಮಲ್ಲೇನಹಳ್ಳಿ, ಮಹಾದೇವೆಗೌಡ, ಅಲೋಕ್ ಚಂದ್ರ, ಸಿಂಧಘಟ್ಟ ಗಿರೀಶ್, ಮೊದಲಾದವರು ಭಾಗವಹಿಸಿದ್ದರು.



ಪಾಂಡವಪುರ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕ ಎಚ್.ಆರ್. ನಾಗಭೂಷಣ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಶಾಸಕ ಎಚ್.ಟಿ.ಮಂಜು ಅವರು ಉಪನಿಬಂಧಕ ಬೀರೇಂದ್ರ ಮನವಿ ಸಲ್ಲಿಸಿದರು.

ಒಳ ಮೀಸಲಾತಿಯಲ್ಲಿ ಅತಿ ಹಿಂದುಳಿದ ಸಮುದಾಯಕ್ಕೆ ಅನ್ಯಾಯ: ಎನ್.ಮಹೇಶ್

ಮಂಡ್ಯ, ಆ.26– ಒಳ ಮೀಸಲಾತಿ ಸಂಬಂಧ ಅಲೆಮಾರಿ ಸೇರಿದಂತೆ ಅತಿ ಹಿಂದುಳಿದ ಸಮುದಾಯಗಳಿಗೆ ಅನ್ಯಾಯವಾಗಿದೆ. ಕೂಡಲೇ ಮೀಸಲಾತಿಗೆ ತಿದ್ದುಪಡಿ ತಂದು ಸರಿಪಡಿಸಲು ಸರ್ಕಾರ ಮುಂದಾಗಬೇಕು ಎಂದು ಬಿಜೆಪಿ ಉಪಾಧ್ಯಕ್ಷ ಮಾಜಿ ಸಚಿವ ಎನ್.ಮಹೇಶ್ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಸಭೆಯ ಅಧಿವೇಶನ ಮುಗಿಯುವ ಕೊನೆ ವೇಳೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪರಿಶಿಷ್ಟ ಜಾತಿ ಸಮುದಾಯದ ಒಳಮೀಸಲಾತಿಗೆ ತಾರ್ಕಿಕ ಮತ್ತು ತಾತ್ವಿಕ ಅಂತ್ಯ ನೀಡಿರುವುದಾಗಿ ಹೇಳಿಕೆ ನೀಡಿದ್ದಾರೆ. ಅದಕ್ಕೆ ಪೂರಕವಾಗಿ ಆ.25ರಂದು ಆದೇಶ ಹೊರಡಿಸಿದ್ದು, ಆದೇಶದಲ್ಲಿ ಯಾವುದೇ ತಾರ್ಕಿಕ ಮತ್ತು ತಾತ್ವಿಕ ಅಂಶಗಳು ಕಾಣುತ್ತಿಲ್ಲ ಎಂದು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಅಲೆಮಾರಿ ಹಾಗೂ ಅರೆ ಅಲೆಮಾರಿ, ಅಸಹಾಯ ಮತ್ತು ದುರ್ಬಲ ಸಮುದಾಯಗಳನ್ನು ವಿಂಗಡಿಸಿರುವ ನಾಗಮೋಹನ್ ದಾಸ್ ವರದಿಯಲ್ಲಿ ಶೇ.1ರಷ್ಟು ಮೀಸಲಾತಿ ನೀಡಿದ್ದರೂ. ಇತರೆ ಪ್ರಬಲ ವರ್ಗಗಳನ್ನು ಸೇರಿಸಿದ ರಾಜ್ಯ ಸರ್ಕಾರ ಮಹಾ ಮೋಸ ಎಸಗಿದೆ. ಇದು ತಾತ್ವಕ ಮತ್ತು ತಾರ್ಕಿಕ ಎಂಬುದು ಸರಿಯೇ ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಆದೇಶಕ್ಕೆ ತಿದ್ದುಪಡಿ ತರಬೇಕು. ಇಲ್ಲವಾದಲ್ಲಿ ತಮ್ಮ ಆದೇಶ ಊರ್ಜಿತವಾಗಬಾರದೆಂದು ತಾವೇ ಬೇಕೆಂತಲೇ ಆದೇಶ ಮಾಡಿದಂತಾಗುತ್ತದೆ. ರಾಜ್ಯ ಸರ್ಕಾರ ತನ್ನ ಹಣ ಕಾಸಿನ ಮುಗ್ಗಟ್ಟಿನಿಂದ ಮೀಸಲಾತಿ ಜಾರಿಯಾಗದಂತೆ ತಡೆಯಲೆಂದೇ ಒಳಮೀಸಲಾತಿ ಆದೇಶ ಮಾಡಿದಂತೆ ಕಾಣುತ್ತಿದೆ ಎಂದು ಆರೋಪ ಮಾಡಿದರು. ಗೋಷ್ಠಿಯಲ್ಲಿ ಬಿಜೆಪಿ ಬಿಜೆಪಿ ಎಸ್ಸಿ ಮೋರ್ಚಾದ ರಾಜ್ಯ ಕಾರ್ಯದರ್ಶಿ ಪರಮಾನಂದ, ಜಿಲ್ಲಾ ವಕ್ತಾರ ಸಿ.ಟಿ.ಮಂಜು ನಾಥ್, ಮಾಧ್ಯಮ ವಕ್ತಾರ ನಾಗಾನಂದ ಇದ್ದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಮಾಜಿ ಸಚಿವ ಎನ್.ಮಹೇಶ್.

ಸಾಲ ಬಾಧೆಯಿಂದ ನಲುಗಿ ರೈತ ಆತ್ಮಹತ್ಯೆ



ನಾಗಮಂಗಲ, ಆ.26– ಸಾಲ ಬಾಧೆಯಿಂದ ರೈತ ಜವರೇಗೌಡ ಮಗ ಪುಟ್ಟಸ್ವಾಮಿ (55) ನೇಣಿಗೆ ಶರಣಾಗಿದ್ದಾರೆ.

ತಾಲೂಕಿನ ಒಣಕೆರೆ ಹೋಬಳಿ ಮಣ್ಣಹಳ್ಳಿ ಪಂಚಾಯತಿ ವ್ಯಾಪ್ತಿಯ ಬುರುಡುಗುಂಟೆ ಗ್ರಾಮದ ಮೃತ ಪುಟ್ಟಸ್ವಾಮಿ ಪತ್ನಿ, ಹೆಣ್ಣು ಗಂಡು ಮಕ್ಕಳನ್ನು ಅಗಲಿದ್ದಾರೆ. ನಾಗಮಂಗಲ ಆಸ್ಪತ್ರೆಯಲ್ಲಿ ಶವವನ್ನು ಪಂಚನಾಮೆ ಮಾಡಿ ಸಂಬಂಧಿಕರಿಗೆ ಹಸ್ತಾಂತರಿಸಿದರು. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಗಳ ಮೇಲೆ ಮಾರಣಾಂತಿಕ ಹಲ್ಲೆ

ಮದ್ದೂರು, ಆ:26– ಆಸ್ತಿ ವೈಷಮ್ಯದ ಹಿನ್ನೆಲೆಯಲ್ಲಿ ಮಲತಾಯಿ ಮಲ ಮಗಳ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ತಾಲೂಕಿನ ಡಿ.ಮಲ್ಲಿಗೆರೆ ಗ್ರಾಮದಲ್ಲಿ ನಡೆದಿದೆ.

ಮಲತಾಯಿ ಭಾಗ್ಯ ಎಂಬ ಮಹಿಳೆ ಮಲಮಗಳು ರೋಜಾಳನ್ನು ನಾಟಿ ಮಾಡಲು ಸಿದ್ದವಾಗಿದ್ದ ಜಮೀನಿನಲ್ಲಿ ಕೆಳಗೆ ಬೀಳಿಸಿ ತೀವ್ರ ಹಲ್ಲೆ ಮಾಡುತ್ತಿರುವ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ಸಖತ್ ವೈರಲ್ ಆಗಿದೆ.

ಗ್ರಾಮದ ಪುಟ್ಟಸ್ವಾಮಿ ಎಂಬವರಿಗೆ ಇಬ್ಬರು ಹೆಂಡತಿಯರು. ಮೊದಲ ಹೆಂಡತಿಗೆ ಇಬ್ಬರು ಮಕ್ಕಳಿದ್ದರು. ಮೊದಲ ಹೆಂಡತಿ ಮೃತಪಟ್ಟ ಹಿನ್ನೆಲೆಯಲ್ಲಿ ಪುಟ್ಟಸ್ವಾಮಿ ಭಾಗ್ಯಳನ್ನು 2ನೇ ವಿವಾಹವಾದರು. ವಿವಾಹವಾದ ಕೆಲವೇ ತಿಂಗಳಲ್ಲಿ ಪುಟ್ಟಸ್ವಾಮಿಯೂಮೃತ ಪಟ್ಟರೆನ್ನಲಾಗಿದೆ

ಇದರಿಂದ ಮೊದಲ ಹೆಂಡತಿಯ ಮಕ್ಕಳು ಹಾಗೂ 2ನೇ ಹೆಂಡತಿ ಭಾಗ್ಯ ಎಂಬವರ ನಡುವೆ ಜಮೀನಿನ ವಿಚಾರವಾಗಿ ಆಗಾಗ್ಗೆ ಕಲಹ ನಡೆಯುತ್ತಿತ್ತು. ಭಾನುವಾರ ಜಮೀನಿನ ಬಳಿ ಮಲತಾಯಿ ಭಾಗ್ಯ ನಾಟಿ ಮಾಡುತ್ತಿರುವಾಗ ಸ್ಥಳಕ್ಕೆ ಬಂದ ಮಗಳು ರೋಜಾ ಜಮೀನಿನ ವಿಷಯವಾಗಿ ತಗಾದೆ ತೆಗೆದಳೆನ್ನಲಾಗಿದೆ. ಇಬ್ಬರ ನಡುವೆ ಜಗಳ ನಡೆದು ಕೊನೆಗೆ ಮಲತಾಯಿ ಭಾಗ್ಯ ಮಗಳು ರೋಜಾ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ್ದಾಳೆ.

ತನ್ನ ಮಲತಾಯಿ ವಿರುದ್ಧ ರೋಜಾ ನೀಡಿದ ದೂರಿನ ಮೇರೆಗೆ ಕೊಪ್ಪ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

ಮಂಡ್ಯ, ಆ.26– ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಆ.28 ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಮಧ್ಯಾಹ್ನ 2.30ಕ್ಕೆ ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಶ್ರೀರಂಗಪಟ್ಟಣ ದಸರಾ ಮಹೋತ್ಸವದ ಪೂರ್ವ ಸಿದ್ದತಾ ಕ್ರಮಗಳ ಬಗ್ಗೆ ಚರ್ಚಿಸಲಿದ್ದಾರೆ. ಮಧ್ಯಾಹ್ನ 3.30 ಗಂಟೆಗೆ ಜಿಲ್ಲಾ ಯೋಜನಾ ಸಮಿತಿ ಸಭೆಯಲ್ಲಿ ಭಾಗವಹಿಸಿ ಸಂಜೆ 6ಕ್ಕೆ ಬೆಂಗಳೂರಿಗೆ ತೆರಳಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಣೇಶ ಚತುರ್ಥಿ: ಹಬ್ಬದ ಭರಾಟೆ ಜೋರು

ಮಂಡ್ಯ,ಆ.26– ಗಣೇಶ ಚತುರ್ಥಿ ಹಿನ್ನೆಲೆಯಲ್ಲಿ ಜಿಲ್ಲಾದ್ಯಂತ ಹಬ್ಬದ ಭರಾಟೆ ಜೋರಾಗಿದ್ದು, ಎಲ್ಲೆಡೆ ಹೂ, ಹಣ್ಣು, ಗಣಪತಿ ಸೇರಿದಂತೆ ಹಬ್ಬದ ಸಾಮಾಗ್ರಿ ಖರೀದಿಯಲ್ಲಿ ಜನ ಮಗ್ನರಾಗಿದ್ದ ದೃಶ್ಯ ಎಲ್ಲೆಡೆ ಕಂಡು ಬಂತು.

ನಿನ್ನೆಯಿಂದಲೇ ಹಬ್ಬದ ವಾತಾವರಣ ಜಿಲ್ಲೆಯಾದ್ಯಂತ ಕಳೆಗಟ್ಟಿದ್ದು, ನಗರದ ವಿ.ವಿ.ರಸ್ತೆ, ಸಿಟಿ ಮಾರುಕಟ್ಟೆಯಲ್ಲಿ ಹೂ, ಹಣ್ಣು ಬಾಳೆದಿಂಡು, ಸಿಹಿ ಹಾಗೂ ಇನ್ನಿತರೆ ವಸ್ತುಗಳ ಖರೀದಿ ಜೋರಾಗಿತ್ತು. ನಗರದ ವಿ.ವಿ.ರಸ್ತೆ, ಸಿಟಿ ಮಾರುಕಟ್ಟೆಯಲ್ಲಿ ಕಾಲಿಡಲು ಜಾಗವಿಲ್ಲದಂತಾಗಿತ್ತು. ಹೂ, ಹಣ್ಣು, ಬಟ್ಟೆ, ಇತರೆ ವಸ್ತುಗಳ ಖರೀದಿಗೆ ಜನ ಮುಂದಾದರೆ, ಇತ್ತ ಕೆಲ ಯುವ ಜೋಡಿಗಳು ತಮಗಿಷ್ಟ ಬಂದ ಗಣಪ ನನ್ನು ಹುಡುಕುತ್ತಿದ್ದ ದೃಶ್ಯ ಕಂಡು ಬಂತು.

ಖರೀದಿ ಜೋರು: ಈಗಾಗಲೇ ಜಿಲ್ಲೆಯಾದ್ಯಂತ ಪರಿಸರಸ್ನೇಹಿ ಗಣಪತಿ ಕೂರಿಸಲು ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಸುತ್ತೋಲೆ ಹೊರಡಿಸಿದೆ. ಹೀಗಾಗಿ ಹಲವು ಕಡೆ ಪರಿಸರ ಗಣಪತಿ ಖರೀದಿಗೆ ಜನ ಮುಂದಾಗಿದ್ದರೆ, ಮತ್ತೆ ಕೆಲವು ಕಡೆ ದೂರದೂರಿ ನಿಂದ ಪಿಒಪಿ ಗಣಪತಿಗೆ ಮತ್ತೆ ಯುವಕರ ತಂಡ ಮೊರೆ ಹೋಗಿದ್ದು, ಕಂಡು ಬಂತು. ಗಣೇಶನನ್ನು ತರುವಾಗಲೇ ಮ್ಯೂಸಿಕ್, ತಮಟೆ ಬಡಿಯುತ್ತಾ ಯುವ ಸಮೂಹ ಕುಣಿಯುತ್ತಿದ್ದುದು ಹಲವೆಡೆ ಸಾಮಾನ್ಯವಾಗಿತ್ತು.

ಜಿಲ್ಲಾದ್ಯಂತ ಕಟ್ಟೆಚ್ಚರ: ಕಳೆದ ವರ್ಷ ನಾಗಮಂಗಲದಲ್ಲಿ ಗಣಪತಿ ವಿಸರ್ಜನೆ ವೇಳೆ ಸಂಭವಿಸಿದ ದುರಂತ ಈ ಬಾರಿ ಎಲ್ಲಿಯೂ ನಡೆಯಬಾರದೆಂದು ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಸರಣಿ ಸಭೆಗಳನ್ನು ನಡೆಸಿದ್ದು, ಜಿಲ್ಲಾದ್ಯಂತ ಕಟ್ಟೆಚ್ಚರ ವಹಿಸಲಾಗಿದೆ. ಜೊತೆಗೆ ಇಂದು ಸಹ ಶಾಸಕ ರವಿಕುಮಾರ್ ಗಣಿಗ ನೇತೃತ್ವದಲ್ಲಿ ನಗರಸಭೆ ಆವರಣದಲ್ಲಿ ಸಭೆ ನಡೆಸಲಾಯಿತು.



ಗಣಪತಿ ವಿಗ್ರಹ ಖರಿದಿಯಲ್ಲಿ ತೊಡಗಿರುವ ದೃಶ್ಯ

ಗಣೇಶ ವಿಸರ್ಜನೆಗೆ ನೀರಿನ ಟ್ಯಾಂಕರ್‌ಗಳ ವ್ಯವಸ್ಥೆ

ಮಂಡ್ಯ, ಆ.26–ಗೌರಿ ಹಾಗೂ ಗಣೇಶನ ವಿಗ್ರಹ ಪ್ರತಿಮೆಗಳ ವಿಸರ್ಜನೆಯಿಂದ ನೈಸರ್ಗಿಕ ಜಲ ಮಾಲಿನ್ಯ ಉಂಟಾಗುವುದರಿಂದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕೆಲ ಮಾರ್ಗದರ್ಶನಗಳನ್ನು ಹೊರತಂದಿದೆ.

ಸಾರ್ವಜನಿಕರು ಬಣ್ಣರಹಿತ ಮಣ್ಣಿನ ಮೂರ್ತಿಗಳನ್ನು ನಗರಸಭೆ/ಪುರಸಭೆ ವತಿಯಿಂದ ನಿಗಧಿಪಡಿಸಿದ ಸ್ಥಳಗಳಲ್ಲಿಯೇ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಂಚಾರಿ ವಾಹನದಲ್ಲಿಯೇ ವಿಸರ್ಜಿಸಬೇಕು. ಆ ಸಂದರ್ಭದಲ್ಲಿ ಹಸಿ ಕಸ (ಹೂವು, ಹಣ್ಣು, ಬಾಳೆಕಂಬ, ಮಾವಿನ ತೋರಣ, ಇತ್ಯಾದಿ ಅಲಂಕಾರಿ ವಸ್ತುಗಳು) ಪ್ರತ್ಯೇಕಿಸಿ ಮೂರ್ತಿಗಳೊಂದಿಗೆ ನೀರಿಗೆ ವಿಸರ್ಜಿಸದೆ ನಗರಸಭೆ/ಪುರಸಭೆಯ ಕಸ ಸಂಗ್ರಹಣಾ ವಾಹನಕ್ಕೆ ನೀಡಬೇಕೆಂದು ಹೇಳಿದ್ದಾರೆ

ಸದರಿ ಹಬ್ಬದ ಆಚರಣೆಯ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಛೇರಿಯು ಗಣೇಶ ವಿಗ್ರಹಗಳ ಪರಿಸರ–ಸ್ನೇಹಿ ವಿಸರ್ಜನೆಗೆ ಸಂಚಾರಿ ವಾಹನಗಳಲ್ಲಿ ನೀರಿನ ಟ್ಯಾಂಕರ್‌ಗಳ ವ್ಯವಸ್ಥೆಯನ್ನು ಆಗಸ್ಟ್ 27 ರಂದು ಮಾಡಲಾಗಿದ್ದು, ಜಿಲ್ಲೆಯ ಸುಬಾಷ್ ನಗರ, ಅಶೋಕ ನಗರದಲ್ಲಿ ಸಂಜೆ 6.00 ರಿಂದ 7.30 ರವರೆಗೆ, ಗಾಂಧಿನಗರ, ನೆಹರು ನಗರದಲ್ಲಿ ಸಂಜೆ 7.30 ರಿಂದ 9.00 ರವರೆಗೆ ಹಾಗೂ ಕಲ್ಲಹಳ್ಳಿ (ವಿ.ವಿ.ನಗರ), ಬಂದೀಗೌಡ ಬಡಾವಣೆಯಲ್ಲಿ ರಾತ್ರಿ 9.00 ರಿಂದ 10.30 ರವರೆಗೆ ವಾಹನ ವ್ಯವಸ್ಥೆ ಮಾಡಲಾಗಿದೆ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9008839505/ 9742345840 / 9945767878 ಮತ್ತು 9110485475 ಅನ್ನು ಸಂಪರ್ಕಿಸಲು ಪ್ರಾದೇಶಿಕ ಕಛೇರಿ ಪರಿಸರ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂರನೇ ಪುಟದಿಂದ

ಕ್ಷಮೆಯಾಚಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್

ಇನ್ನು ಕೆಲವರು ರಾಜಕೀಯ ಉದ್ದೇಶದಿಂದ ವರದಿ ನೀಡಿದ್ದಾರೆ, ನೀಡುತ್ತಿದ್ದಾರೆ. ಅದರಿಂದ ನನಗೇನೂ ನಷ್ಟವಾಗಿಲ್ಲ.

ಮಾಧ್ಯಮಗಳ ಮುಂದೆ ಹೇಳಿಕೆ ನೀಡುವುದರಿಂದ ತಮ್ಮ ಆಸೆ ಈಡೇರಿಸಿಕೊಳ್ಳಬಹುದೇ ಹೊರತು, ಇದರಿಂದ ಏನೂ ಸಾಧಿಸಲಾಗದು. ನನ್ನ ಹೇಳಿಕೆ ಬಗ್ಗೆ ಚರ್ಚಿಸಲು ಪಕ್ಷದ ಕಚೇರಿಗೆ ಬರಲಿ ನಾನೂ ತಯಾರಿದ್ದೇನೆ ಎಂದರು.

ಎಸ್.ಎಂ.ಕೃಷ್ಣ ನೇತೃತ್ವದಲ್ಲಿ ಪಕ್ಷದ ಚುನಾವಣಾ ಪ್ರಚಾರಕ್ಕೆ ಪಾಂಚಜನ್ಯ ಎಂಬ ಹೆಸರಿಟ್ಟಿದ್ದೆ. ಕೇಂದ್ರ ಸಚಿವರೊಬ್ಬರು ಸೋನಿಯಾ ಗಾಂಧಿ ಬಳಿ ದೂರು ಹೇಳಿದರು. ಪಾಂಚಜನ್ಯ ಆರ್‌ಎಸ್‌ಎಸ್ ಮುಖವಾಣಿ ಎಂದೆಲ್ಲಾ ಹೇಳಿದ್ದರು.

ಸೋನಿಯಾ ಗಾಂಧಿ ನನ್ನನ್ನು ಕರೆದು ವಿಚಾರಿಸಿದರು. ಪಾಂಚಜನ್ಯ ಕೃಷ್ಣನ ಶಂಖದ ಹೆಸರು. **ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ। ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ॥** ಎಂಬ ಶ್ಲೋಕವಿದೆ. ಅಧರ್ಮ ನಾಶವಾಗಿ, ಮತ್ತೆ ಧರ್ಮ ಸ್ಥಾಪನೆಯಾಗಲಿದೆ ಎಂಬುದಾಗಿ ಎಸ್.ಎಂ. ಕೃಷ್ಣಾ ಅವರಿಂದ ಹೇಳಿಸಿ ಶಂಖ ಊದಿಸಿ ನಮ್ಮ ಯುದ್ಧ ಆರಂಭಿಸಿದ್ದೆವು.

ನನ್ನ ಪಕ್ಷ ನಿಷ್ಠೆ ಯಾರೂ ಪ್ರಶ್ನಿಸಲಾಗದು: ನನ್ನ ಪಕ್ಷನಿಷ್ಠೆಯನ್ನು ಯಾರೂ ಪ್ರಶ್ನಿಸಲಾಗದು. ನಾನು ಹುಟ್ಟು ಕಾಂಗ್ರೆಸ್ಸಿಗ. ಎಲ್ಲ ಹಂತಗಳಲ್ಲೂ ಹೋರಾಟದ ಮೂಲಕ ಈ ಮಟ್ಟಕ್ಕೆ ಬಂದಿದ್ದೇನೆ. ನಾನು ಕೊನೆ ಉಸಿರಿರುವವರೆಗೂ ಕಾಂಗ್ರೆಸ್ಸಿಗ. ಇದರಲ್ಲಿ ಯಾವುದೇ ಸಂಶಯ ಬೇಡ ಎಂದರು.

ನಾನು ಯಾವುದೇ ತಪ್ಪು ಮಾಡಿಲ್ಲ. ಯಾರ ಮನಸ್ಸನ್ನು ನೋಯಿಸುವ ಉದ್ದೇಶ ನನ್ನದಲ್ಲ. ನಾನು ಆರ್‌ಎಸ್‌ಎಸ್ ಹೊಗಳಿಲ್ಲ. ಎದುರಾಳಿಗಳ ಬಗ್ಗೆ ತಿಳಿಯುವುದು ನನ್ನ ಕರ್ತವ್ಯ.

ಅಂದಿನ ಪ್ರಧಾನಿ ಇಂದಿರಾ ಗಾಂಧಿ ನಿಧನ ಹೊಂದಿದ ಸಂದರ್ಭದಲ್ಲಿ ನನ್ನ ಟೂರಿಂಗ್ ಟಾಕೀಸ್‌ಗೆ ಇಂದಿರಾ ಚಿತ್ರಮಂದಿರ ಎಂದು ಹೆಸರಿಟ್ಟವನು ನಾನು. ನನ್ನ ಹಾಗೂ ಗಾಂಧಿ ಕುಟುಂಬದ ನಡುವಿನ ಸಂಬಂಧ ಭಕ್ತ ಹಾಗೂ ಭಗವಂತನ ನಡುವಣ ಸಂಬಂಧ.

ಗಾಂಧಿ ಕುಟುಂಬ ಹಾಗೂ ಅದರ ಕೊಡುಗೆ ಸೇರಿದಂತೆ, ಕಾಂಗ್ರೆಸ್ ಇತಿಹಾಸ, ಆರ್‌ಎಸ್‌ಎಸ್ ಇತಿಹಾಸ, ಬಿಜೆಪಿ ಇತಿಹಾಸ, ಜೆಡಿಎಸ್, ಕಮ್ಯುನಿಷ್ಟ್ ಪಕ್ಷಗಳ ಇತಿಹಾಸ, ಅಜೆಂಡಾ ತಿಳಿದಿದ್ದೇನೆ.

ಕೇರಳದಲ್ಲಿ ಮೈತ್ರಿ ಪಕ್ಷ ಮುಸ್ಲಿಂ ಲೀಗ್ ಯೂತ್ ಕಾನ್ಫರೆನ್ಸ್‌ಗೆ ಹೋಗಿದ್ದಾಗ ಅವರ ಶಿಸ್ತು, ಸಂಘಟನೆ ನೋಡಿ ನಾನು ಬೆರಗಾಗಿದ್ದೆ. ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ಮುನ್ನ ಹಾಗೂ ನಂತರ ಆರ್‌ಎಸ್‌ಎಸ್ ಹೇಗೆ ಬೇರೂರಿದೆ ಎಂಬುದನ್ನು ಅರಿತಿದ್ದೇನೆ. ರಿಸರ್ವ್ ಬ್ಯಾಂಕ್ ಕಚೇರಿ ಎದುರು ಆರ್‌ಎಸ್ ಎಸ್‌ನ ದೊಡ್ಡ ಕಟ್ಟಡವಿದೆ. ವರ್ಷಕ್ಕೆ ಕೋಟ್ಯಾಂತರ ರೂ. ಬಾಡಿಗೆ ಪಡೆಯುತ್ತಿದ್ದಾರೆ.

ಬೆಂಗಳೂರು ನಗರದಲ್ಲಿ ಎಷ್ಟು ಶಾಲೆ ಆರಂಭಿಸಿದ್ದಾರೆ. ಚನ್ನೇನಹಳ್ಳಿಯಲ್ಲಿ ಯಾವ ರೀತಿ ಭವ್ಯ ಕಟ್ಟಡ ನಿರ್ಮಿಸುತ್ತಿದ್ದಾರೆ, ರಾಜ್ಯದಲ್ಲಿ ಹೇಗೆ ಸಂಘಟನೆ ಮಾಡುತ್ತಿದ್ದಾರೆ ಎಂಬುದನ್ನು ರಾಜಕೀಯ ನಾಯಕನಾಗಿ ಅರಿತಿದ್ದೇನೆ. ಕೆಪಿಸಿಸಿ ಅಧ್ಯಕ್ಷನಾಗಿ ವಿರೋಧಿಗಳ ಸಂಘಟನೆ ಬಗ್ಗೆ ತಿಳಿಯುವುದು ನಮ್ಮ ಕರ್ತವ್ಯ.

ನನ್ನ ಇತಿಹಾಸ, ನನ್ನ ಬದ್ಧತೆ, ನನ್ನ ಸಿದ್ಧಾಂತದ ಬಗ್ಗೆ ಗೊತ್ತಿಲ್ಲದೆ ರಾಜಕೀಯ ಮಾಡಿದರೆ, ಅದು ಅವರ ಇಚ್ಛೆ, ನನ್ನ ಪಕ್ಷದ ಕೆಲವು ಸಹೋದ್ಯೋಗಿಗಳು ಕೂಡ ನನ್ನ ಬಗ್ಗೆ ಟೀಕೆ ಮಾಡುತ್ತಿದ್ದಾರೆ. ನಾನು ಇಂಡಿಯಾ ಮೈತ್ರಿಕೂಟದ ನಾಯಕರಿಗೆ ಕ್ಷಮೆ ಕೋರುತ್ತೇನೆಯೇ ವಿನಃ ರಾಜಕೀಯ ಮಾಡುವವರಿಗೆ ಹೆದರುವುದಿಲ್ಲ ಎಂದರು.

ನನ್ನನ್ನು ಬೆದರಿಸಿ ಕ್ಷಮೆ ಕೇಳಿಸಲಾಗಿದೆ ಎಂಬ ಭಾವನೆ ಬೇಡ. ಬೆದರಿಕೆಗಳಿಗೆ ಹೆದರುವ ರಕ್ತ ನನ್ನದಲ್ಲ. ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ನಡೆದ ಸಾತನೂರು ಘಟನೆ, ಬೇರೆ ಬೇರೆ ಘಟನೆ, ಆಪರೇಷನ್ ಕಮಲ ಆದಾಗ ಏನಾಯ್ತು, ಯಾರು ಯಾವ ಮೂಲದಿಂದ ನಮ್ಮ ಪಕ್ಷಕ್ಕೆ ಬಂದಿದ್ದಾರೆ. ಬೇರೆ ಪಕ್ಷಕ್ಕೆ ಹೋಗಿದ್ದಾರೆ ಎಂಬುದು ಗೊತ್ತಿರಬೇಕು.

ನನ್ನ ಪಕ್ಷ ನಿಷ್ಠೆ ಪ್ರಶ್ನಿಸುವವರು ಮೂರ್ಖರು: ನನ್ನ ಕೆಲವು ಸ್ನೇಹಿತರು ರಾಜಕೀಯ ಮಾಡಿ, ಸಾರ್ವಜನಿಕರಲ್ಲಿ ಗೊಂದಲ ಮೂಡಿಸಲು ಹೊರಟಿದ್ದಾರೆ. ನಾನು ಹುಟ್ಟು ಕಾಂಗ್ರೆಸಿಗ ಎಂಬ ಹೇಳಿಕೆಗೆ ಬದ್ಧ. ಪಕ್ಷ ಹಾಗೂ ಗಾಂಧಿ ಕುಟುಂಬಕ್ಕೆ ಇರುವ ನನ್ನ ನಿಷ್ಠೆ ಯಾರೂ ಪ್ರಶ್ನೆ ಮಾಡುವಂತಿಲ್ಲ. ಪ್ರಶ್ನೆ ಮಾಡುವವರು ಮೂರ್ಖರು.

ರಾಜ್ಯ ರಾಜಕೀಯ ಇತಿಹಾಸದಲ್ಲಿ ನಾನು ಮಾಡಿರುವ ಹೋರಾಟದ ಸಮೀಪಕ್ಕೂ ಬರಲು ಯಾರಿಂದಲೂ ಸಾಧ್ಯವಿಲ್ಲ, ಈ ಮಾತನ್ನು ನನ್ನ ಸಮಕಾಲೀನರನ್ನು ಉದ್ದೇಶಿಸಿ ಮಾತನಾಡುತ್ತಿದ್ದೇನೆ. ಹಿರಿಯ ನಾಯಕರ ಜೊತೆ ಹೋಲಿಕೆ ಮಾಡಿಕೊಳ್ಳುತ್ತಿಲ್ಲ.

ಮಲ್ಲಿಕಾರ್ಜುನ ಖರ್ಗೆ ನಮ್ಮ ಅಧ್ಯಕ್ಷರು. ಅವರೊಂದಿಗೆ ಕಳೆದ 35 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಕಾಂಗ್ರೆಸ್ ನನ್ನ ಪಾಲಿನ ದೇವಾಲಯ. ಗಾಂಧೀಜಿ ಕಾಂಗ್ರೆಸ್ ಅಧ್ಯಕ್ಷರಾಗಿ 100 ವರ್ಷವಾದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ನೂರು ಕಾಂಗ್ರೆಸ್ ದೇವಾಲಯ ಸ್ಥಾಪಿಸಬೇಕು ಎಂಬ ಗುರಿ ಹೊಂದಿದ್ದೇನೆ.

ಧರ್ಮದ ಆಸ್ತಿಯಲ್ಲ: ಡಿಕೆಶಿ

ಅವರ ಮಗು ಯಾವ ಧರ್ಮ ಬೇಕೋ ಅದನ್ನು ಆಚರಣೆ ಮಾಡುತ್ತದೆ. ಬಾನು ಮುಷ್ತಾಕ್, ಕನ್ನಡದಲ್ಲಿ ಬರೆದಾಗ ಯಾರು ಯಾಕೆ ಬರೆದೆ ಅಂತ ಕೇಳಲಿಲ್ಲ ಎಂದು ಹೇಳಿದ್ದಾರೆ. ನಾವು ಧರ್ಮದಲ್ಲಿ ರಾಜಕಾರಣ ಮಾಡಲ್ಲ. ಸಂವಿಧಾನ ಮತ್ತು ಜಾತ್ಯಾತೀತ ತತ್ವದಲ್ಲಿ ಇರುವ ರಾಷ್ಟ್ರ ಎಂದು ಹೇಳಿದ್ದಾರೆ.

ಧರ್ಮಸ್ಥಳದಲ್ಲಿ ನಡೆಯುತ್ತಿರುವ ಘಟನೆಗಳ ಬಗ್ಗೆ ಬಿಜೆಪಿಯ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಬಿಜೆಪಿಯವರು 'ಧರ್ಮದ ರಾಜಕೀಯ' ಮಾಡುವ ಬದಲು 'ಧರ್ಮದಲ್ಲಿ ರಾಜಕೀಯ' ಮಾಡು ತ್ತಿದ್ದಾರೆ ಎಂದು ಅವರು ಆರೋಪಿಸಿ ದ್ದಾರೆ. ಧರ್ಮಸ್ಥಳದಂತಹ ಪವಿತ್ರ ಕ್ಷೇತ್ರವನ್ನು ಅಶುದ್ಧಗೊಳಿಸಲು ಮುಂದಾಗಿದ್ದಾರೆ. ಈ ಕ್ಷೇತ್ರ ಯಾವುದೇ ಕಾರಣಕ್ಕೂ ರಾಜಕೀಯಕ್ಕೆ ಬಲಿಯಾಗಬಾರದು. ದಕ್ಷಿಣ ಭಾರತದ ಲಕ್ಷಾಂತರ ಭಕ್ತರ ನಂಬಿಕೆ ಇರುವ ಈ ಕ್ಷೇತ್ರವನ್ನು ದುರ್ಬಲ ಗೊಳಿಸಲು ಅವಕಾಶ ಕೊಡಬಾರದು ಎಂದು ನಾನು ಹೆಗಡೆಯವರಲ್ಲಿ ಮನವಿ ಮಾಡುತ್ತೇನೆ ಎಂದು ಡಿಕೆಶಿ ಹೇಳಿದರು. ಅಲ್ಲದೆ, ಧರ್ಮಸ್ಥಳದ ಪ್ರಕರಣವು ಬಿಜೆಪಿಯ ಎರಡು ಬಣಗಳ ನಡುವಿನ ಆಂತರಿಕ ಕಿತ್ತಾಟದಿಂದ ನಡೆಯುತ್ತಿದೆ ಎಂದು ಅವರು ಗಂಭೀರ ಆರೋಪ ಮಾಡಿದ್ದಾರೆ.

ಕಾವೇರಿ ಶುದ್ಧೀಕರಣ

ನಗರ ಮತ್ತು ಕೈಗಾರಿಕಾ ತ್ಯಾಜ್ಯಗಳು ನದಿಗೆ ಸೇರದಂತೆ ತಡೆಯಲು ತ್ಯಾಜ್ಯ ವಿಲೇವಾರಿ ಘಟಕಗಳ ನಿರ್ಮಾಣಕ್ಕೆ ಸ್ಥಳಗಳನ್ನು ಗುರುತಿಸಿ, ಈಗಾಗಲೇ ಕೆಲವೆಡೆ ಕಾಮಗಾರಿಯೂ ಆರಂಭಗೊಂಡಿದೆ.


ಕಾವೇರಿ ನದಿ ಪಾತ್ರದ ನಗರ ಮತ್ತು ಪಟ್ಟಣಗಳ ಮಾರುಕಟ್ಟೆಗಳಲ್ಲಿ ಶುದ್ಧೀಕರಣಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಕೈಗಾರಿಕಾ ಮಾಲಿನ್ಯ ತಡೆಗೆ ಕೆಲವು ಸುಧಾರಿತ ಯೋಜನೆಗಳ ಅನುಷ್ಠಾನಕ್ಕೂ ಸೂಚಿಸಿದೆ.

ನದಿಗೆ ಕಲ್ಮಶ, ತ್ಯಾಜ್ಯ ನೀರು ಸೇರದಂತೆ ಶೂನ್ಯ ದ್ರವ ತ್ಯಾಜ್ಯ ಸಾಧನೆಗೆ ಸೂಚಿಸಲಾಗಿದೆ. ಈ ಭಾಗದ ಕೈಗಾರಿಕೆಗಳು, ಆಸ್ಪತ್ರೆ, ವಾಣಿಜ್ಯ ಸಂಸ್ಥೆಗಳು ತ್ಯಾಜ್ಯ ಹರಿಸದಂತೆಯೂ ಸದಾ ನಿಗಾ ವಹಿಸಲು ತಿಳಿಸಲಾಗಿದೆ. ಇವುಗಳ ಜೊತೆಗೆ ಜೀವ ವೈವಿಧ್ಯ ಸಂರಕ್ಷಣೆ, ಅರಣ್ಯೀಕರಣ ಮತ್ತು ಜಲ ಗುಣಮಟ್ಟ ಮೇಲ್ವಿಚಾರಣೆ ವಿಧಾನಗಳನ್ನು ಅಳವಡಿಸಿಕೊಳ್ಳಲು ಸೂಚಿಸಲಾಗಿದೆ.

ವಿದ್ರೋಹಿ ಶಕ್ತಿಗಳೊಂದಿಗೆ ಹೊಂದಾಣಿಕೆ ಪಾಠ ಬೋಧಿಸುವ ಕಾಂಗ್ರೆಸ್

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತೀಕ್ಷ್ಣ ಪ್ರತಿಕ್ರಿಯೆ

ಮೈಸೂರು, ಆ.26(ಪಿಎಂ)– ವಿಧಾನಸಭೆಯಲ್ಲಿ ತಾವು ಆರ್‌ಎಸ್‌ಎಸ್ ಪ್ರಾರ್ಥನಾ ಗೀತೆ ಸಾಲುಗಳನ್ನು ಉಲ್ಲೇಖಿಸಿರುವ ಸಂಬಂಧ ಕ್ಷಮೆ ಕೋರುತ್ತೇನೆಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿರುವ ಸಂಬಂಧ ತಮ್ಮ ಎಕ್ಸ್ ಖಾತೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.



'ನಮಸ್ತೇ ಸದಾ ವತ್ಸಲೇ ಮಾತೃಭೂಮಿ...' ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾರ್ಥನಾ ಗೀತೆ. ಮಾತೃಭೂಮಿಗೆ ಧನ್ಯತೆ ಸಮರ್ಪಿಸುವ ಸಂಕೇತವನ್ನು ಇದು ರವಾನಿಸುತ್ತದೆ. ರಾಷ್ಟ್ರಭಕ್ತಿ ಪ್ರೇರೇಪಿಸುತ್ತದೆ, ಇದು ಸಂಘಟನೆಯ ಗೀತೆಯಷ್ಟೇ ಅಲ್ಲ, ದೇಶಭಕ್ತಿಯ ಬದ್ಧತೆಯನ್ನು ಜಗತ್ತಿಗೇ ಸಾರಿ ಹೇಳುವ ಗೀತೆ ಎಂದು ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ನಮ್ಮನ್ನು ಹೆರುವ ತಾಯಿಗೆ ಮಡಿಲ ಆಸರೆ ನೀಡುವವಳು 'ಭೂಮಿತಾಯಿ'. ಈ ಹಿನ್ನಲೆಯಲ್ಲಿಯೇ 'ಮಾತೃಭೂಮಿ' ಎಂದು ಜನ್ಮದಾತೆಯಷ್ಟೇ ಜನ್ಮಭೂಮಿ ಯನ್ನು ಆರಾಧಿಸುತ್ತೇವೆ. ತಾಯ್ನೆಲಕ್ಕಾಗಿ ನಮ್ಮನ್ನೇ ಸಮರ್ಪಿಸಿಕೊಳ್ಳುವಷ್ಟು ಭಾವುಕರಾಗುತ್ತೇವೆ. ಜನನಿ, ಜನ್ಮಭೂಮಿ ಮಹತ್ವ ತಿಳಿಸಿಕೊಟ್ಟು ರಾಷ್ಟ್ರ ಭಕ್ತಿ ಪಡಿಮೂಡಿ ಸುವ ಆರ್‌ಎಸ್‌ಎಸ್ ಬಗ್ಗೆ ಕಾಂಗ್ರೆಸ್ಸಿಗರಿಗೆ ಮೊದಲಿನಿಂದಲೂ ಅಸಹನೆ. ಏಕೆಂದರೆ ಗುಲಾಮಿ ಚೌಕಟ್ಟಿನಲ್ಲಿ ನೆಹರು ಕುಟುಂಬವನ್ನು ಓಲೈಸುವ ಭಟ್ಟಂಗಿತನ ಬಿಟ್ಟರೆ ಅವರಿಗೆ ಬೇರೇನೂ ತಿಳಿದಿಲ್ಲ. ಸರ್ವಾಧಿಕಾರಿತನ, ಭ್ರಷ್ಟತೆ, ಮತಬ್ಯಾಂಕ್ ರಾಜಕಾರಣಕ್ಕಾಗಿ ವಿದ್ರೋಹಿ ಶಕ್ತಿಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಪಠ್ಯಕ್ರಮವನ್ನು ಮಾತ್ರ ಕಾಂಗ್ರೆಸ್‌ನ ಪಾಠಶಾಲೆಯಲ್ಲಿ ಬೋಧಿಸಲಾಗುತ್ತದೆ ಎಂದು ಕಿಡಿಕಾರಿದ್ದಾರೆ.

ವಿಧಾನಸಭೆಯಲ್ಲಿ ಡಿ.ಕೆ.ಶಿವಕುಮಾರ್ ಅವರು ಸಂಘದ ಗೀತೆ ತಮಗೂ ತಿಳಿದಿದೆ ಎಂಬ ಪಾಂಡಿತ್ಯ ಪ್ರದರ್ಶಿಸಲು ಹೋಗಿ ಸದಾ ವತ್ಸಲೇ ಮಾತೃಭೂಮಿ... ಪಠಿಸಿದರು. ಇದನ್ನೇ ಮಹಾಪರಾಧವೆಂದು ಪರಿಗಣಿಸಿದ ಕಾಂಗ್ರೆಸ್ ಮುಂದಾಳುಗಳು, ಡಿ.ಕೆ.ಶಿವಕುಮಾರ್ ಅವರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ 'ರಾ ಕಮಾಂಡ್' ಮುಂದೆ ಕಟಕಟ್ಟೆಯಲ್ಲಿ ನಿಲ್ಲಿಸಿ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ. ಡಿಕೆಶಿ ಅವರು ಬಾಗಿ ಕ್ಷಮಾಪಣೆ ಕೇಳುವಂತೆ ಮಾಡಿದ್ದಾರೆ.

ಬಂಡೆಯಂಥ ಡಿಕೆಶಿ ಅವರಿಗೇ ಈ ಗತಿಯಾದರೆ, ಕಾಂಗ್ರೆಸ್ ಪಕ್ಷದಲ್ಲಿರುವ ಅದೆಷ್ಟೋ ದೇಶ ನಿಷ್ಠ ಕಾರ್ಯಕರ್ತರ ಸ್ಥಿತಿ ಹೇಗಿರಬಹುದು ಎಂಬುದು ಊಹೆಗೂ ನಿಲುಕದ ಪ್ರಶ್ನೆಯಾಗಿದೆ. ತುರ್ತು ಪರಿಸ್ಥಿತಿಯನ್ನು ಹೇರಿ ಪ್ರಜಾಪ್ರಭುತ್ವದ ಕತ್ತು ಹಿಸುಕಿದ್ದ ಕಾಂಗ್ರೆಸ್‌ನ ಆಂತರಿಕ ವಲಯದಲ್ಲಿ ಇವತ್ತಿಗೂ ತುರ್ತುಪರಿಸ್ಥಿತಿ ಕರಾಳ ನೃತ್ಯ ಮಾಡುತ್ತಲೇ ಇದೆ ಎಂಬುದಕ್ಕೆ ಡಿಕೆಶಿ ಅವರ ಕ್ಷಮಾಪಣೆ ಕೇಳಿದ ಪ್ರಕರಣ ಸ್ಪಷ್ಟ ನಿದರ್ಶನವಾಗಿದೆ.

ಆ.29ರಂದು ಹೆಚ್‌ಐವಿ ಏಡ್ಸ್ ಜಾಗೃತಿಗೆ ಬೈಕ್ ರ್‍ಯಾಲಿ

ಮೈಸೂರು, ಆ.26– ಸಾರ್ವಜನಿಕರಲ್ಲಿ ಹೆಚ್.ಐ.ವಿ ಏಡ್ಸ್ ಸೋಂಕು ಹರಡುವಿಕೆ, ತಡೆಗಟ್ಟುವಿಕೆ ಮತ್ತು ಚಿಕಿತ್ಸೆ, ಪರೀಕ್ಷಾ ಪ್ರಾಮುಖ್ಯತೆ, ಆರೋಗ್ಯ ಸೇವೆಗಳು, ಕಳಂಕ ತಾರತಮ್ಯ ಕುರಿತು ಅರಿವು ಮೂಡಿಸಲು ಜಿಲ್ಲಾ ಮಟ್ಟದಲ್ಲಿ ಬೈಕ್ ರ್‍ಯಾಲಿಯನ್ನು ಆ.29ರಂದು ಆಯೋಜಿಸಲಾಗಿದೆ.

ಅಂದು ಬೆಳಗ್ಗೆ ಬೆಳಗ್ಗೆ 8.30ಕ್ಕೆ ಅರಮನೆಯ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಎದುರು ರ್‍ಯಾಲಿ ಪ್ರಾರಂಭಗೊಳ್ಳಲಿದೆ. ವಿವಿಧ ರಸ್ತೆಗಳಲ್ಲಿ ಸಂಚರಿಸಿ ಎಸ್‌ಪಿ ಸರ್ಕಲ್ ಮುಖಾಂತರ ವೈದ್ಯರ ಭವನ ಆವರಣ ತಲುಪಿ ಅಂತ್ಯಗೊಳ್ಳುತ್ತದೆ ಎಂದು ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕದ ಜಿಲ್ಲಾ ಕಾರ್ಯಕ್ರಮಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧ್ಯಕ್ಷ ಸಿದ್ದರಾಮಯ್ಯ, ಉಪಾಧ್ಯಕ್ಷರಾಗಿ ಡಿ.ಕೆ.ಶಿವಕುಮಾರ್

75 ಸದಸ್ಯರನ್ನೊಳಗೊಂಡ ಪ್ರಾಧಿಕಾರ ರಚಿಸಿ ಸರ್ಕಾರ ಆದೇಶ

ಬೆಂಗಳೂರು, ಆ.26– ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧ್ಯಕ್ಷರಾಗಿ ಸಿಎಂ ಸಿದ್ದರಾಮಯ್ಯ, ಉಪಾಧ್ಯಕ್ಷರಾಗಿ ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ 75 ಸದಸ್ಯರನ್ನು ನೇಮಿಸಲಾಗಿದೆ





ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಶೋಭಾ ಕರಂದ್ಲಾಜೆ ಹಾಗೂ ರಾಜ್ಯ ಸಚಿವರಾದ ರಾಮಲಿಂಗಾ ರೆಡ್ಡಿ, ಕೆ.ಜೆ.ಜಾರ್ಜ್, ಬೈರತಿ ಸುರೇಶ್, ದಿನೇಶ್ ಗುಂಡೂ ರಾವ್, ಕೃಷ್ಣಬೈರೇಗೌಡ, ಜಮೀರ್ ಅಹ್ಮದ್ ಪದನಿಮಿತ್ತ ಸದಸ್ಯರಾಗಿ ಪ್ರಾಧಿಕಾರದಲ್ಲಿ ಸ್ಥಾನ ಪಡೆದಿದ್ದಾರೆ.

ಐದು ವಲಯದ ಮಹಾಪೌರರು, ಐದು ವಲಯದ ಆಯುಕ್ತರು, ಬೆಂಗಳೂರು ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು ಹಾಗೂ ಸಂಸದರನ್ನು ಪ್ರಾಧಿಕಾರ ಒಳಗೊಂಡಿದೆ. ಬೆಂಗಳೂರು ಮಹಾನಗರ ಪಾಲಿಕೆಯನ್ನು ಐದು ಪಾಲಿಕೆಗಳಾಗಿ ವಿಭಜಿಸಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ನಿರ್ಮಾಣಕ್ಕೆ ಕರ್ನಾಟಕ ಸರ್ಕಾರ ಈಚೆಗೆ ಆದೇಶ ಹೊರಡಿಸಿತ್ತು.

ಸೆ.26ಕ್ಕೆ ಐಕಾನಿಕ್ ಮಿಗ್–21ಗೆ ಐಎಎಫ್ ಬೀಳ್ಕೊಡುಗೆ

ಹಾರಾಟ ನಡೆಸಿ ಗೌರವ ಸಲ್ಲಿಸಿದ ವಾಯುಪಡೆ ಮುಖ್ಯಸ್ಥರು

ಜೈಪುರ, ಆ.26– ಭಾರತೀಯ ವಾಯುಪಡೆಯ ಹೆಮ್ಮೆ ಮತ್ತು ಆರು ದಶಕಗಳಿಗೂ ಹೆಚ್ಚು ಕಾಲ ಭಾರತದ ಆಕಾಶದ ವಿಶ್ವಾಸಾರ್ಹ ರಕ್ಷಕ ಎಂದು ಪ್ರಶಂಸಿಸ ಲ್ಪಟ್ಟಿದ್ದ ಐಕಾನಿಕ್ ಮಿಗ್–21 ಯುದ್ಧ ವಿಮಾನವು ಸೆ.26ರಂದು ಕಾರ್ಯಾಚರಣೆಯ ಸೇವೆಯಿಂದ ನಿವೃತ್ತಿ ಹೊಂದಲಿದೆ. ಈ ಐತಿಹಾಸಿಕ ವಿದಾಯಕ್ಕೆ ಮುಂಚಿತವಾಗಿ, ಏರ್ ಚೀಫ್ ಮಾರ್ಷಲ್ ಅಮರ್ ಪ್ರೀತ್ ಸಿಂಗ್ ಅವರು ಬಿಕಾನೇರ್‌ನ ನಾಲ್ ವಾಯುನೆಲೆಯಿಂದ ಏಕಾಂಗಿ ಹಾರಾಟ ನಡೆಸುವ ಮೂಲಕ ಜೆಟ್‌ಗೆ ವೈಯಕ್ತಿಕ ಗೌರವ ಸಲ್ಲಿಸಿದರು.

1985ರಲ್ಲಿ ತನ್ನ ವೃತ್ತಿಜೀವನದ ಕಾರ್ಯಾಚರಣೆಯ ಭಾಗವಾಗಿ ಮೊದಲು ಮಿಗ್–21 ಯುದ್ಧ ವಿಮಾನ ಹಾರಾಟ ನಡೆಸಿದ್ದ ಸಿಂಗ್ ಅವರಿಗೆ ಇದೊಂದು ಭಾವನಾತ್ಮಕ ವಿಚಾರವಾಗಿತ್ತು. 'ಮಿಗ್–21 ಯುದ್ಧ ವಿಮಾನವು 1960ರ ದಶಕದಿಂದಲೂ ಭಾರತೀಯ ವಾಯುಪಡೆಯ ಬೆನ್ನೆಲುಬಾಗಿದೆ. ವೇಗವಾದ, ಚುರುಕಾದ ಮತ್ತು ಸರಳ ವಿನ್ಯಾಸದೊಂದಿಗೆ, ಇದನ್ನು ಹಾರಿಸಿದ ಪ್ರತಿಯೊಬ್ಬ ಪೈಲಟ್‌ನ ಹೃದಯದಲ್ಲಿ ವಿಶೇಷ ಸ್ಥಾನವನ್ನು ಹೊಂದಿದೆ' ಎಂದು ಹಾರಾಟದ ನಂತರ ಅವರು ಹೇಳಿದರು.



ಐಎಎಫ್ ವಕ್ತಾರ ವಿಂಗ್ ಕಮಾಂಡರ್ ಜೈದೀಪ್ ಸಿಂಗ್ ಅವರ ಪ್ರಕಾರ, ಮಿಗ್–21 1963ರಲ್ಲಿ ಸೇವೆಗೆ ಪ್ರವೇಶಿಸಿತು. ಚಂಡೀಗಢದಲ್ಲಿರುವ ನಂ. 28 ಸ್ಕ್ವಾಡ್ರನ್ ಇದನ್ನು ಮೊದಲ ಬಾರಿಗೆ ನಿರ್ವಹಿಸಿತು. ಈ ಮೂಲಕ ಸ್ಕ್ವಾಡ್ರನ್ ಭಾರತದ ಮೊದಲ 'ದಿ ಫಸ್ಟ್ ಸೂಪರ್ ಸಾನಿಕ್ಸ್' ಎಂಬ ಬಿರುದನ್ನು ಗಳಿಸಿತು.

ಮಿಗ್–21 ಹಲವಾರು ಯುದ್ಧಗಳಲ್ಲಿ ಪಾಲ್ಗೊಂಡು ಇತಿಹಾಸ ಬರೆದಿದೆ. ಇದು 1965ರ ಯುದ್ಧದಲ್ಲಿ ಪ್ರಮುಖ ಪಾತ್ರ ವಹಿಸಿತು ಮತ್ತು 1971ರ ಇಂಡೋ–ಪಾಕ್ ಸಂಘರ್ಷದಲ್ಲಿ ಪ್ರಮುಖ ಪಾತ್ರ ವಹಿಸಿತು. ಅಲ್ಲಿ ಅದು ನಿರ್ಣಾಯಕ ದಾಳಿಗಳನ್ನು ನಡೆಸಿತು. 1971ರ ಡಿಸೆಂಬರ್ 14 ರಂದು, ಮಿಗ್–21 ಯುದ್ಧ ವಿಮಾನಗಳು ಢಾಕಾದಲ್ಲಿರುವ ಗವರ್ನರ್ ಮನೆ ಮೇಲೆ ಬಾಂಬ್ ದಾಳಿ ಮಾಡಿದವು. 48 ಗಂಟೆಗಳಲ್ಲಿ, ಪಾಕಿಸ್ತಾನ ಶರಣಾಯಿತು ಮತ್ತು 93,000 ಪಾಕಿಸ್ತಾನಿ ಸೈನಿಕರು ಭಾರತೀಯ ಸೇನೆಯ ಮುಂದೆ ಶಸ್ತ್ರಾಸ್ತ್ರಗಳನ್ನು ತ್ಯಜಿಸಿದರು. ಅದು ಯುದ್ಧದಲ್ಲಿ ಒಂದು ಮಹತ್ವದ ತಿರುವು ಮತ್ತು ಮಿಗ್–21 ರ ಪಾತ್ರ ಐತಿಹಾಸಿಕವಾಗಿತ್ತು' ಎಂದು ವಕ್ತಾರರು ಹೇಳಿದರು. 1971ರಲ್ಲಿ ಎಫ್–104 ಸ್ಟಾರ್‌ಫೈಟರ್‌ಗಳನ್ನು ಹೊಡೆದುರುಳಿಸುವುದರಿಂದ ಹಿಡಿದು ಇತ್ತೀಚಿನ ವರ್ಷಗಳಲ್ಲಿ ಎಫ್–16 ಗಳಿಗೆ ಸವಾಲೆಸೆಯುವವರೆಗೆ, ಮಿಗ್–21ನ ಪರಂಪರೆಗೆ ಸರಿಸಾಟಿಯಿಲ್ಲ. ಹಲವು ಪೀಳಿಗೆಯ ಭಾರತೀಯ ಪೈಲಟ್‌ಗಳು ಇದನ್ನು ಹಾರಿಸಿದ್ದಾರೆ. ಈ ಐಕಾನಿಕ್ ಯುದ್ಧ ವಿಮಾನವನ್ನು ನಾವು ತುಂಬಾ ಮಿಸ್ ಮಾಡಿಕೊಳ್ಳುತ್ತೇವೆ' ಎಂದು ಈ ವಿಮಾನವನ್ನು ಸ್ವತಃ ಹಾರಿಸಿರುವ ವಿಂಗ್ ಕಮಾಂಡರ್ ಜೈದೀಪ್ ಸಿಂಗ್ ನೆನಪಿಸಿಕೊಂಡರು.

ನನ್ನ ಸುದೀರ್ಘ ರಾಜಕೀಯ ಜೀವನದಲ್ಲಿ ನಾನೆಂದೂ ದಲಿತರ ವಿರೋಧಿಯಲ್ಲ; ಅಂತಹ ಕಾರ್ಯವನ್ನೂ ಮಾಡಿಲ್ಲ...

● ಹಿರಿಯ ಶಾಸಕ ಜಿ.ಟಿ.ದೇವೇಗೌಡರ ಸ್ಪಷ್ಟನೆ ● ನಾನೇನಾದರೂ ತಪ್ಪು ಮಾಡಿದ್ದೇನೆ-ಆಡಿದ್ದೇನೆ ಎನ್ನುವುದೇ ಆದರೆ ನನ್ನನ್ನ ಕ್ಷಮಿಸಿ ● ಸರ್ವ ಜನಾಂಗದವರೊಂದಿಗೆ ನನ್ನ ನಡೆ-ನುಡಿ ಏನೆಂದು ಎಲ್ಲರಿಗೂ ಗೊತ್ತು; ಆದರೂ ನನ್ನ ಬಗ್ಗೆ ಬಾಯಿಗೆ ಬಂದಂತೆ ಮಾತನಾಡಿದವರಿಗೆ ದೇವರು ಒಳ್ಳೆಯದು ಮಾಡಲಿ



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿರುವ ತಮ್ಮ ಕಚೇರಿ ಸಭಾಂಗಣದಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರೂ ಆದ ಮಾಜಿ ಸಚಿವ ಜಿ.ಟಿ. ದೇವೇಗೌಡರು ಮಂಗಳವಾರ ಸುದ್ದಿಗೋಷ್ಠಿ ನಡೆಸಿದರು.

ನನ್ನ ರಾಜಕೀಯ ಜೀವನದಲ್ಲಿ ನನ್ನ ವಿರುದ್ಧ ಯಾವುದೇ ದೂರು ದಾಖಲಾಗಿಲ್ಲ...!

"ನಾನು ಗುಂಗ್ರಾಲ್‌ಛತ್ರದಲ್ಲಿ ಹುಟ್ಟಿದ್ದು. ಪಕ್ಕದಲ್ಲಿ ರಟ್ಟಹಳ್ಳಿ, ಹನುಮಂತಪುರ ಇದೆ. ನಮ್ಮ ತಂದೆ ಪಟೇಲರು. ಹನುಮಂತಯ್ಯ ಎಂಬುವರನ್ನು ಕರೆದುಕೊಂಡು ಬಂದು ನಮ್ಮ ಜಮೀನಿನ ಪಕ್ಕದಲ್ಲಿ ರಸ್ತೆಕೊಟ್ಟು, ದಲಿತರಿಗೆ ಊರನ್ನೇ ಕಟ್ಟಿದ್ದೇವೆ. ಚೆಲುವಯ್ಯನ ಜೊತೆ ಬೆಳೆದ ನಾನು, ರಟ್ಟಹಳ್ಳಿಯಲ್ಲಿ ದಲಿತರ ಮನೆ ಜಗಲಿ ಮೇಲೆ ಮಲಗಿ ಸಾಗುವಳಿ ಪತ್ರ ಕೊಡಿಸಿದ್ದೇನೆ. ಹೆಚ್.ಡಿ.ಕುಮಾರಸ್ವಾಮಿ ಸಿಎಂ ಆಗಿದ್ದಾಗ ದಲಿತರ ಮನೆಯಲ್ಲಿ ವಾಸ್ತವ್ಯ ಮಾಡಿಸಿದ್ದೇ ನಾನು. ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಬನ್ನೂರಿನ ಬಿ.ಪಿ.ನಂಜುಂಡಸ್ವಾಮಿ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೆ. ಹುಣಸೂರಿನಲ್ಲಿ ಪುಟ್ಟಮಾದಯ್ಯರನ್ನ ಬಿಜೆಪಿ ತಾಲೂಕು ಅಧ್ಯಕ್ಷರನ್ನಾಗಿ ಮಾಡಿದ್ದೇನೆ. ಟೀಚರ್ ಆಗಿದ್ದ ದೇವಯ್ಯನನ್ನು ಕಟ್ಟೆಮಳಲವಾಡಿಯಲ್ಲಿ ಚೇರ್ಮನ್ ಮಾಡಿದ್ದೆ. ಜಿಲ್ಲಾ ಪರಿಷತ್‌ನಲ್ಲಿ ದೊರೆರಾಜು, ನಾಗರಾಜ್ ಮಲ್ಲಾಡಿ, ಕೃಷ್ಣೇಗೌಡ, ನಿಂಗರಾಜ್ ಮಲ್ಲಾಡಿ, ಶಾಸಕರಾಗಿದ್ದ ಮಾದಯ್ಯ, ವಾಟಾಳ್ ನಾಗರಾಜ್‌ರವರಂತಹ ಘಟಾನುಘಟಿಗಳ ನಡುವೆ ಬೆಳೆದಿದ್ದೇನೆ. ನಾನೆಂದಿಗೂ ಒಂದು ಜಾತಿ ಮಾಡಿಲ್ಲ. ನನ್ನ ರಾಜಕೀಯ ಜೀವನದಲ್ಲಿ ನನ್ನ ವಿರುದ್ಧ ಇದುವರೆಗೆ ಯಾವುದೇ ದೂರುಗಳು ದಾಖಲಾಗಿಲ್ಲ. ನನ್ನ ವಿರುದ್ಧ ಕೆಟ್ಟದಾಗಿ ಮಾತನಾಡುವವರ ವಿರುದ್ಧವೂ ದೂರು ನೀಡುವುದಿಲ್ಲ. ತಪ್ಪು-ಒಪ್ಪುಗಳನ್ನು ತಾಯಿ ಚಾಮುಂಡೇಶ್ವರಿ ನೋಡಿಕೊಳ್ಳಲಿ. **- ಜಿ.ಟಿ.ದೇವೇಗೌಡರು, ಶಾಸಕ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ**

ನಾನು ಜಾತಿವಾದಿಯಲ್ಲ...

"ಸಂವಿಧಾನದ ಪರವಾಗಿ, ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವ ನಾನು ಜಾತಿವಾದಿಯಲ್ಲ. ನಾನು ಜಾತಿವಾದಿಯಾಗಿದ್ದರೆ ಚಾಮುಂಡೇಶ್ವರಿ ಕ್ಷೇತ್ರದ ಜನ ಯಾಕೆ ಗೆಲ್ಲಿಸುತ್ತಾ ಇದ್ದರು. ಹುಣಸೂರಿನಲ್ಲಿ ಯಾಕೆ ಗೆಲ್ಲಿಸುತ್ತಾ ಇದ್ದರು. ಕ್ಷೇತ್ರದ ದಲಿತರ ಕಾಲೋನಿಗಳನ್ನು ಹೋಗಿ ನೋಡಲಿ ಯಾವ ರೀತಿ ಇಟ್ಟಿದ್ದೇನೆ ಎಂಬುದು ತಿಳಿಯುತ್ತದೆ ಎಂದ ಜಿ.ಟಿ.ದೇವೇಗೌಡರು, ಮೈಸೂರು ನಗರದ ಸುತ್ತಲೂ ಆಸ್ಪತ್ರೆಗಳು, ಬಾರ್‌ಗಳು, ಛತ್ರಗಳು, ಹೋಟೆಲ್‌ಗಳು, ಬಡಾವಣೆಗಳು ಬರುತ್ತಿರುವುದು(ಚಾಮುಂಡೇಶ್ವರಿ ಕ್ಷೇತ್ರ) ನನ್ನ ಕ್ಷೇತ್ರದಲ್ಲೇ. ಇಷ್ಟು ದಿನ ಎಲೆಕ್ಷನ್‌ನಲ್ಲಿ ದುಡ್ಡು ಕೇಳಿದ್ರು, ಗೌಡ್ರು ತೊಂದರೆ ಕೊಟ್ರು ಅಂತ ಯಾರಾದರೂ ಒಬ್ಬರು ಹೇಳಲಿ. ನನ್ನಲ್ಲಿ ತಪ್ಪುಗಳಿದ್ದರೆ ತಿದ್ದುವ ಶಕ್ತಿ ನಿಮಗಿದೆ.

1970ರಿಂದ ಸಹಕಾರ ಕ್ಷೇತ್ರದಲ್ಲಿ ಕಾರ್ಯದರ್ಶಿಯಾಗಿ, ಅದೇ ಸಂಘದಲ್ಲಿ ಅಧ್ಯಕ್ಷನಾಗಿ ಜಿಲ್ಲೆಯ ಎಲ್ಲಾ ಸಹಕಾರ ಸಂಘಗಳಿಗೆ ಬೇರೆಯವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೇನೆ. ನಂತರ ನಿರ್ದೇಶಕನಾಗಿ, ರಾಜ್ಯ ಮಹಾಮಂಡಲದ ಅಧ್ಯಕ್ಷನಾಗಿ, ಸಹಕಾರ ಸಚಿವನಾಗಿ ಸುದೀರ್ಘವಾದ ಸೇವೆಯನ್ನು ಈ ಕ್ಷೇತ್ರದಲ್ಲಿ ಸಲ್ಲಿಸಿದ್ದೇನೆ. ಸಹಕಾರಿ ಕ್ಷೇತ್ರದಿಂದ ಬೆಳೆದು ಬಂದಿರುವ ನಾನು ಯಾವುದೇ ಪಕ್ಷ, ಯಾವುದೇ ವ್ಯಕ್ತಿಯನ್ನು ವಿರೋಧ ಮಾಡಲ್ಲ. ಸಿದ್ದರಾಮಯ್ಯ ಅವರೇ ನಮ್ಮ ನಾಯಕ ಎಂದು 25 ವರ್ಷ ಇದ್ದೇನೆ. ತಪ್ಪುಗ್ರಹಿಕೆಯಿಂದ ಇಷ್ಟೆಲ್ಲಾ ಟೀಕೆಗಳು ಬಂದರೂ ನಾನು ನೋವು ಮಾಡಿಕೊಳ್ಳುವುದಿಲ್ಲ. ಹಾಗಾಗಿ ಸಾರ್ವಜನಿಕವಾಗಿ ಗೊತ್ತಿಲ್ಲದೆ ಇರುವವರಿಗೆ ತಪ್ಪು ಮಾಹಿತಿ ಕೊಡುವ ಕೆಲಸವನ್ನು ಮಾಡಬೇಡಿ. ನನ್ನನ್ನೇ ನೇರವಾಗಿ ಕೇಳಿ.

ಮೈಸೂರು, ಆ.26(ಎಂಕೆ)- ನಾನು ದಲಿತ ವಿರೋಧಿಯಲ್ಲ. ಯಾರ ವಿರೋಧಿಯೂ ಅಲ್ಲ. ದಲಿತರ ಬಗ್ಗೆ ಎಂದಿಗೂ ಅಗೌರವ ತೋರಿಲ್ಲ. ನನ್ನ ಜೀವನದಲ್ಲಿ ದಲಿತರೊಂದಿಗೆ ಬೆರೆತು ಒಂದಾಗಿದ್ದೇನೆಯೇ ಹೊರತು ಯಾವತ್ತೂ ಕೂಡ ದಲಿತರ ವಿರೋಧ ಮಾಡಿಲ್ಲ. ಆದರೂ ನನ್ನಿಂದ ತಪ್ಪಾಗಿದ್ದರೆ ಕ್ಷಮಿಸಿ. ಟೀಕಿಸುವವರು ನನ್ನ ಪಾಲಿನ ದೇವರು ಎಂದು ಹಿರಿಯ ಸಹಕಾರಿ, ಮಾಜಿ ಸಚಿವರೂ ಆದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಹೇಳಿದರು.

ವಿಧಾನಸಭಾ ಕಲಾಪದಲ್ಲಿ ಜಿಟಿಡಿ ದಲಿತ ವಿರೋಧಿ ಹೇಳಿಕೆ ನೀಡಿದ್ದಾರೆಂದು ನಡೆಯುತ್ತಿರುವ ಪ್ರತಿಭಟನೆಗಳ ಕುರಿತು ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿರುವ ತಮ್ಮ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿ ನಡೆಸಿ ಸ್ಪಷ್ಟನೆ ನೀಡಿದ ಅವರು, ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. ಸರ್ಕಾರದ ಪಾಲುದಾರಿಕೆ ಇರುವ ಸಹಕಾರ ಸಂಘ-ಸಂಸ್ಥೆಗಳಲ್ಲಿ ನಾಮ ನಿರ್ದೇಶಿತ ಸದಸ್ಯರನ್ನು ಸೇರಿಸಿ ಹಾಗೂ ಒಬ್ಬ ಹಿಂದುಳಿದ ವರ್ಗದವರಿಗೂ ಸ್ಥಾನಮಾನ ನೀಡಿ ಎಂದು ಮನವಿ ಮಾಡಿದ್ದೇನೆ. ಆದರೆ, ಇದನ್ನು ತಪ್ಪಾಗಿ ಅರ್ಥೈಸಿಕೊಂಡು ಹಲವರು ಟೀಕೆಗಾಗಿ ಕೆಟ್ಟ ಪದಗಳನ್ನು ಬಳಸಿ ಸಂವಿಧಾನಕ್ಕೆ ಅಪಚಾರ ಮಾಡುತ್ತಿದ್ದಾರೆ ಎಂದರು.

ನಾನು ದಲಿತರ ವಿರೋಧಿ ಎಂಬ ಮಾತನ್ನು ಯಾರು ಹೇಳ್ತಾ ಇದ್ದಿರಿ. ಸಂವಿಧಾನ ಪದವನ್ನು ಉಪಯೋಗಿಸಿದ್ದಿರಿ. ನೀವು ದೊಡ್ಡವರಿದ್ದೀರಿ. ನನ್ನ ಬಗ್ಗೆ ಏಕವಚನದಲ್ಲಿ ಮಾತನಾಡಿದ್ದೀರಿ. ಬೇರೆ ಪದಗಳನ್ನೂ ಬಳಸಿದ್ದೀರಿ. ನನ್ನ ಭಾಗಕ್ಕೆ ದೇವರಾಗಿದ್ದೀರಿ. ನನ್ನಿಂದ ನಿಮಗೆ ನೋವಾಗಿದ್ದರೆ ಕ್ಷಮೆ ಇರಲಿ. ಆದರೆ, ಈ ತರಹದ ಪದ ಬಳಕೆ ಮಾಡಿ ಸಂವಿಧಾನಕ್ಕೆ ಅಪಚಾರವನ್ನು ನೀವೇ ಮಾಡುತ್ತಿದ್ದಿರಿ ಹೊರತು ನಾನು ಮಾಡಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ನನ್ನನ್ನು ಯಾರು ಟೀಕೆ ಮಾಡುತ್ತಾರೆ ಅವರು ದೇವರಾಗಿದ್ದಾರೆ. ಅವರ ಟೀಕೆಗಳನ್ನು ನಾನು ಸ್ವೀಕಾರ ಮಾಡುತ್ತೇನೆ. ನಾನು ಯಾವತ್ತೂ ಅವರ ವಿರುದ್ಧ ಏನನ್ನೂ ಹೇಳುವುದಿಲ್ಲ ಎಂದು ಜಿ.ಟಿ.ದೇವೇಗೌಡರು ಸ್ಪಷ್ಟಪಡಿಸಿದರು.

ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ...

"ಆಡಳಿತ ಪಕ್ಷ ಮಾಡುವ ಕಾಯ್ದೆಗಳನ್ನು ಪರಿಶೀಲಿಸಿ, ತಪ್ಪಿದ್ದರೆ ವಿರೋಧ ಪಕ್ಷದಲ್ಲಿದ್ದು ಪ್ರಶ್ನೆ ಮಾಡಲೇಬೇಕಾಗುತ್ತದೆ. ವಿರೋಧ ಮಾಡುವಾಗಲೂ ಸಂವಿಧಾನಕ್ಕಾಗಲೀ, ಸಮಾಜಕ್ಕಾಗಲೀ, ತಂದಿರುವ ನಾಮ ನಿರ್ದೇಶನಕ್ಕಾಗಲೀ ವಿರೋಧ ಮಾಡಿಲ್ಲ. ಸರ್ಕಾರದ ಪಾಲುದಾರಿಕೆ ಇರುವ, ಸಹಕಾರ ಸಂಘ-ಸಂಸ್ಥೆಗಳ ಮೇಲೆ ನಿಮಗೆ ಅಧಿಕಾರ ಇದೆ ಮಾಡಿ ಎಂದು ಬೆಂಬಲ ಕೊಟ್ಟಿದ್ದೇವೆ. ಇದೇ ವಿಚಾರವನ್ನು ಕಲಾಪದಲ್ಲಿ ಪ್ರಸ್ತಾಪಿಸುವಾಗ ಶಿವರಾಜ್ ತಂಗಡಗಿ ಅವರು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. ಸರ್ಕಾರ ಪ್ರತಿಯೊಂದರಲ್ಲಿಯೂ ಹಸ್ತಕ್ಷೇಪ ಮಾಡಿ ಅಭದ್ರಗೊಳಿಸುವ ಬದಲು ಮುಚ್ಚಿಬಿಡಿ ಎಂದೇಳುವ ಸಂದರ್ಭದಲ್ಲಿ ಶಿವರಾಜ್ ತಂಗಡಗಿಯವರು ಎದ್ದು, ದಲಿತರನ್ನು ಮಾಡಿದರೆ, ಮುಚ್ಚೋಗಿ ಬಿಡ್ತಾವಾ ಎಂದು ಕೇಳ್ತಾರೆ. ಆಗ ನಾಮನಿರ್ದೇಶನಕ್ಕೆ ಸಮ್ಮತಿ ಇದೆ ಎಂದೇನೇ ಹೊರತು ದಲಿತರಿಂದ ಸಹಕಾರ ಸಂಘ-ಸಂಸ್ಥೆಗಳು ಮುಚ್ಚಿಹೋಗುತ್ತವೆ ಎಂದು ಹೇಳಿಲ್ಲ. ಆದರೆ, ಆ ಸಂದರ್ಭದಲ್ಲಾದ ಗದ್ದಲದಿಂದ ತಪ್ಪಾಗಿ ಅರ್ಥೈಸಿಕೊಳ್ಳಲಾಗಿದೆ ಎಂದು ಸದನದಲ್ಲಿ ನಡೆದ ಸನ್ನಿವೇಶವನ್ನು ಶಾಸಕ ಜಿಟಿಡಿ ವಿವರಿಸಿದರು.

ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರು ಹೈಕೋರ್ಟ್ ಮುಂಭಾಗದಲ್ಲಿ 'ಸಂವಿಧಾನ ಓದಿ' ಪುಸ್ತಕವನ್ನು ನನ್ನ ಕೈಯ್ಯಲ್ಲಿ ಬಿಡುಗಡೆಗೊಳಿಸಿದ್ದಾರೆ. ಅಂಬೇಡ್ಕರ್ ಅವರು ಈ ರೀತಿಯ ಕೆಟ್ಟ ಪದಗಳನ್ನು ಯಾರಿಗಾದರೂ ಬಳಸಿ ಎಂದಿದ್ದಾರೆಯೇ? ನನ್ನ ಎದುರಾಳಿಯಾಗಿ ಚಿಕ್ಕಮಾದು ಸೋತರೂ ಅವರನ್ನು ಕರೆದುಕೊಂಡು ಹೋಗಿ ಎಂಎಲ್‌ಸಿ ಮಾಡಿಕೊಂಡು ಬಂದೆ. ಹೆಚ್.ಡಿ.ದೇವೇಗೌಡರಾಗಲಿ... ಕುಮಾರಸ್ವಾಮಿಯವರಾಗಲಿ.. ಸಿದ್ದರಾಮಯ್ಯರವರಾಗಲಿ... ದಲಿತ ವಿರೋಧಿ ನಡೆಯನ್ನು ನನಗೆ ಕಲಿಸಿಲ್ಲ. ದಲಿತ ನಾಯಕರಾದ ಬಿ.ರಾಚಯ್ಯ, ವಿ.ಶ್ರೀನಿವಾಸ್ ಪ್ರಸಾದ್, ಆರ್.ಧ್ರುವನಾರಾಯಣ್, ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಎಲ್ಲರೂ ನನ್ನನ್ನು ಅತ್ಯಂತ ಪ್ರೀತಿಯಿಂದ ಕಾಣುತ್ತಾರೆ. ಅವರೊಂದಿಗೆ ಇಷ್ಟು ವರ್ಷ ಜೊತೆಗಿದ್ದರೂ ನಮ್ಮ ನಡುವೆ ಯಾವತ್ತೂ ವ್ಯತ್ಯಾಸ ಬಂದಿಲ್ಲ. ಅವರ ಒಡನಾಡಿಯಾಗಿ ಬೆಳೆದಿದ್ದೇನೆ ಎಂದರು.

ನಾಮ ನಿರ್ದೇಶನ ವಿರೋಧಿಸಿಲ್ಲ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವಿದ್ದು, ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಸಹಕಾರ ಸಚಿವರಾಗಿದ್ದ ಲಕ್ಷ್ಮಣ ಸವದಿ ಅಧ್ಯಕ್ಷತೆಯಲ್ಲಿ ಸಹಕಾರ ಕಾಯ್ದೆ ತಿದ್ದುಪಡಿಗೆ ಕಮಿಟಿಯನ್ನು ಮಾಡಲಾಗಿತ್ತು. ಕಮಿಟಿಯಲ್ಲಿ ನಾನು, ಹಾಲಿ ಶಾಸಕ ಶಿವರಾಂ ಹೆಬ್ಬಾರ್, ಎಸ್.ಆರ್.ಪಾಟೀಲ್, ಶಾಸಕ ಷಡಕ್ಷರಿ, ಎಂಎಲ್‌ಸಿ ರಾಜೇಂದ್ರ ಮತ್ತು ಅಧಿಕಾರಿಗಳಿದ್ದರು. ಈ ಸಮಿತಿಯು ಮಾಡಿದ್ದ ತಿದ್ದುಪಡಿ ಕುರಿತು ಸಮಿತಿಯ ಮುಂದೆಯೂ ಚರ್ಚಿಸಿ, ನೇರವಾಗಿ ವಿಧಾನಸಭೆಯಲ್ಲಿ ಹಿರಿಯ ಸಹಕಾರಿಗಳಾದ ಹೆಚ್.ಕೆ.ಪಾಟೀಲ್ ಅವರ ಮುಂದೆಯೂ ಹೇಳಿದ್ದೇನೆ. ಆದರೆ, ಏಕಾಏಕಿ ಸಮಿತಿಯನ್ನು ಮರೆಮಾಡಿ, ಅಪಮಾನ ಮಾಡಿ, ಈ ಕಾಯ್ದೆಯನ್ನು ಮಂಡಿಸುತ್ತಾ ಇದ್ದೀರಿ. ರಾಜ್ಯದಲ್ಲಿರುವ 47 ಸಾವಿರ ವಿವಿಧ ಸಹಕಾರ ಸಂಘ-ಸಂಸ್ಥೆಗಳಲ್ಲಿ ಸುಮಾರು 15 ಸಾವಿರ ಸಂಘ-ಸಂಸ್ಥೆಗಳು ಮುಚ್ಚುವ ಹಂತದಲ್ಲಿವೆ. ನೂರಾರು ವರ್ಷಗಳಿಂದ ಯಾವುದೇ ಅನುದಾನ ಕೊಟ್ಟಿಲ್ಲ ಎಂದು ನೋವಿನಿಂದ ಮುಚ್ಚಿಬಿಡಿ... ಮುಚ್ಚಿಬಿಡಿ... ಮುಚ್ಚಿಬಿಡಿ ಎಂದು ನೋವಿನ ಆಕ್ರೋಶದಿಂದ ಹೇಳಿದ್ದು ಬಿಟ್ಟರೆ, ನಾಮ ನಿರ್ದೇಶನ ಮಾಡಿದನ್ನು ವಿರೋಧ ಮಾಡಿಲ್ಲ ಎಂದು ಜಿ.ಟಿ.ದೇವೇಗೌಡರು ಸ್ಪಷ್ಟೀಕರಿಸಿದರು.

ನಮ್ಮ ಅಭ್ಯಂತರವಿಲ್ಲ: 13-15 ಜನ ನಿರ್ದೇಶಕರು ಇರುವ ಸಹಕಾರ ಸಂಘವೊಂದರಲ್ಲಿ ಈಗಾಗಲೇ 6 ಜನರಿಗೆ ಮೀಸಲಾತಿ ನೀಡಲಾಗಿದೆ. ಅದರ ಜೊತೆಗೆ ಇನ್ನೂ 3 ಜನರನ್ನು ನಾಮ ನಿರ್ದೇಶನದ ಮೂಲಕ ಆಯ್ಕೆ ಮಾಡುವುದಕ್ಕೆ ನನ್ನ ವಿರೋಧ ಇಲ್ಲ. ಆದರೆ, ಸರ್ಕಾರದ ಪಾಲುದಾರಿಕೆ, ಸರ್ಕಾರದ ಷೇರು ಹಣ ಇರುವ ಸಹಕಾರ ಸಂಘ-ಸಂಸ್ಥೆಗಳಿಗೆ ನಾಮ ನಿರ್ದೇಶನ ಮಾಡಿ. ನಾಮ ನಿರ್ದೇಶನಕ್ಕೆ ಎಸ್‌ಸಿ, ಎಸ್ಟಿ ಮತ್ತು ಸಾಮಾನ್ಯ ಮಹಿಳೆ ಜೊತೆಗೆ ಹಿಂದುಳಿದವರನ್ನು ಹಾಕಿದರೂ ನಮ್ಮ ಅಭ್ಯಂತರವಿಲ್ಲ. ಆದರೆ, ಸರ್ಕಾರಿ ಪಾಲುದಾರಿಕೆ ಇಲ್ಲದ ಸಹಕಾರ ಸಂಘ-ಸಂಸ್ಥೆಗಳಲ್ಲಿಯೂ ಸರ್ಕಾರದ ಹಸ್ತಕ್ಷೇಪ ಸರಿಯಲ್ಲ. ಇದರ ಬಗ್ಗೆ ಪರಿಶೀಲನೆ ನಡೆಸಿ ಎಂದಿದ್ದೇನೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಜೆಡಿಎಸ್‌ನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜಿಲ್ಲಾಧ್ಯಕ್ಷ ಬೆಳವಾಡಿ ಶಿವಕುಮಾರ್, ಮುಖಂಡರಾದ ಮುಳ್ಳೂರು ದೇವರಾಜು, ಹಿನಕಲ್ ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ನೈಪುಣ್ಯದಲ್ಲಿ ಪರಿಸರ ಗಣಪತಿ ತಯಾರಿಸಿದ ಚಿಣ್ಣರು





ಮೈಸೂರಿನ ಕನಕದಾಸನಗರ ಮತ್ತು ಆರ್.ಟಿ.ನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯಲ್ಲಿ ಮಕ್ಕಳು, ಮಣ್ಣು ಮತ್ತು ಪರಿಸರ ವಸ್ತುಗಳನ್ನು ಬಳಸಿಕೊಂಡು ಗೌರಿ-ಗಣೇಶ ಮೂರ್ತಿಗಳನ್ನು ತಯಾರಿಸಿದರು. ತರಗತಿವಾರು ವಿದ್ಯಾರ್ಥಿಗಳು ವಿವಿಧ ನಮೂನೆಯ ವಿಗ್ರಹಗಳನ್ನು ರೂಪಿಸಿ, ಸಂಭ್ರಮಿಸಿದರು. ನಂತರ ಕ್ಯಾಂಪಸ್‌ನ ಗಣೇಶ ಗುಡಿ ಮುಂದೆ ಮಕ್ಕಳು ತಯಾರಿಸಿದ ನೂರಕ್ಕೂ ಹೆಚ್ಚು ಗಣಪತಿ ಹಾಗೂ ಗೌರಿ ಮೂರ್ತಿಗಳನ್ನಿಟ್ಟು, ಪೂಜೆ ಸಲ್ಲಿಸಿ, ಗೌರಿ-ಗಣೇಶ ಹಬ್ಬಕ್ಕೆ ಸ್ವಾಗತ ಕೋರಿದರು.

ದಸರಾ ಮಹೋತ್ಸವದಲ್ಲಿ ಜನಸಂದಣಿ ನಿಯಂತ್ರಣಕ್ಕೆ ಎಸ್‌ಒಪಿ ವಿಧಾನ ಬಳಸುವಂತೆ ಡಿಸಿ ಸೂಚನೆ



ದಸರಾ ಮಹೋತ್ಸವದಲ್ಲಿ ಜನಸಂದಣಿ ನಿರ್ವಹಣೆಗೆ ಎಸ್‌ಒಪಿ ವಿಧಾನ ಬಳಕೆ ಕುರಿತಂತೆ ಸಭೆ ನಡೆಸಲಾಯಿತು.

ಮೈಸೂರು, ಆ.26(ಜಿಎ)-ದಸರಾ ಮಹೋತ್ಸವದಲ್ಲಿ ಜನಸಂದಣಿ ಇರುವ ಪ್ರದೇಶಗಳಲ್ಲಿ ಯಾವುದೇ ಅವಘಡಗಳು ಸಂಬಂಧಿಸಿದಂತೆ ತಡೆಯಲು ಪ್ರಮಾಣಿತ ಕಾರ್ಯಾಚರಣೆ ವಿಧಾನ(ಎಸ್‌ಒಪಿ)ವನ್ನು ಎಲ್ಲಾ ಇಲಾಖೆಯ ಅಧಿಕಾರಿಗಳು ಪಾಲನೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜನಸಂದಣಿ ನಿರ್ವಹಣೆಗೆ ಸಂಬಂಧಿಸಿದಂತೆ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಕುರಿತಂತೆ ನಡೆದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದಸರಾ ಆಚರಣೆ ವೇಳೆ ಯುವ ಸಂಭ್ರಮ, ಯುವ ದಸರಾ, ಅರಮನೆ ಕಾರ್ಯಕ್ರಮಗಳು, ವಸ್ತುಪ್ರದರ್ಶನ ಆವರಣದಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಜನ ಸೇರುತ್ತಾರೆ. ಈ ಪ್ರದೇಶಗಳಲ್ಲಿ ಹೆಚ್ಚಿನ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ದಸರಾ ಕಾರ್ಯಕ್ರಮಗಳಲ್ಲಿ ನಡೆಯುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿ, ಸಮಯ, ಕಾರ್ಯಕ್ರಮದ ವಿವರಗಳ ಮಾಹಿತಿಯನ್ನು ಸಾರ್ವಜನಿಕರಿಗೆ ನೀಡಬೇಕು. ಜನಸಂದಣಿ ಆಗದಂತೆ ಅಗತ್ಯ ಸೂಚನೆಗಳನ್ನು ಆಗಾಗ್ಗೆ ಸಾರ್ವಜನಿಕರಿಗೆ ನೀಡುತ್ತಿರಬೇಕು. ಜನಸಂದಣಿ ಇರುವ ಪ್ರದೇಶಗಳಲ್ಲಿ ಅಪಾಯದ ಸ್ಥಳಗಳನ್ನು ಗುರುತಿಸಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಜನಸಂದಣಿ ಉಂಟಾಗದಂತೆ ಪೊಲೀಸ್ ಇಲಾಖೆ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಪಂ ಸಿಇಒ ಎಸ್.ಯುಕೇಶ್‌ಕುಮಾರ್, ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಡಿಸಿಪಿ ಬಿಂದುಮಣಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಶ್ರೀಗಳ ಪುಣ್ಯಸ್ಮರಣೆ...



ಇತ್ತೀಚೆಗೆ ವಿಧಿವಶರಾದ ವಿಶ್ವ ಒಕ್ಕಲಿಗರ ಪೀಠದ ಜಗದ್ಗುರು ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಅವರ ಪುಣ್ಯಸ್ಮರಣೆಯನ್ನು ಮೈಸೂರಿನ ಕೆ.ಜಿ.ಕೊಪ್ಪಲಿನ ಗ್ರಾಮಸ್ಥರು, ಮಠದ ಭಕ್ತರು ಶ್ರೀಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪ್ರಸಾದ ವಿತರಿಸುವ ಮೂಲಕ ಆಚರಿಸಿದರು. ಈ ವೇಳೆ ಮಾಜಿ ಕಾರ್ಪೊರೇಟರ್‌ಗಳಾದ ಚೆನ್ನಪ್ಪ, ಶಿವಕುಮಾರ್, ಮೈಸೂರು-ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಚೇತನ್ ಎಂ.ಈ., ದ್ಯಾವಪ್ಪ, ಸತೀಶ, ಶಂಬಣ್ಣ, ಶ್ರೀನಿವಾಸ, ಮೆಲ್ಲಹಳ್ಳಿ ಪುಟ್ಟರಾಜು, ಸುರೇಶ್, ರವಿಗೌಡ, ಲೋಕೇಶ್, ದತ್ತು ರಾಜಕುಮಾರ್, ಚಂದ್ರಣ್ಣ, ಪಾಪಣ್ಣ ಉಪಸ್ಥಿತರಿದ್ದರು.

ಸಂಜಯ್ ನಿಧನ



ಮೈಸೂರು, ಆ.26- ಮೈಸೂರು ಒಂಟಿಕೊಪ್ಪಲು ಮಹೇಂದ್ರ (ಮಾಯಿ) ಅವರ ಸಹೋದರ ಸಂಜಯ್ (53) ಅವರು ಮಂಗಳವಾರ ನಿಧನರಾದರು. ಮೃತರು ಮೂವರು ಸಹೋದರರು ಸೇರಿ ಅಪಾರ ಬಂಧು-ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಆ.27) ಬೆಳಗ್ಗೆ 11.30ಕ್ಕೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಷ್ಟ್ರೀಯ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಕೆ.ಎಸ್.ಮಧುಸೂದನ್‌ಗೆ ಅಭಿನಂದನೆ...



ರಾಷ್ಟ್ರೀಯ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಹಿನಕಲ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕ ಕೆ.ಎಸ್.ಮಧುಸೂದನ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಶ್ರೀನಿವಾಸ್, ರಾಜಕುಮಾರ್, ಹಿನಕಲ್ ಗಣೇಶ್, ಜನಾರ್ಧನ್, ನಂಜುಂಡಸ್ವಾಮಿ, ಸುನಿಲ್, ನೇಹಾ, ಸವಿತಾ, ಶಾಲಿನಿ, ನಾರಾಯಣ್, ವೆಂಕಟೇಶ್, ಪೈಲ್ವಾನ್ ಗಿರೀಶ್, ಇಂದಿರಾ, ಸೋಮಣ್ಣ ಇತರರಿದ್ದರು.

ಪಿಹೆಚ್.ಡಿ ಪದವಿ



ಮೈಸೂರು: ಡಾ.ಎಸ್.ಜೆ.ಮಂಜುನಾಥ್ ಅವರ ಮಾರ್ಗದರ್ಶನದಲ್ಲಿ ಶ್ರೀಧರ್ ಮಟವಾ್ ಅವರು ನಿರ್ವಹಣೆ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರ ಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ದೇಶ - ವಿದೇಶ

ರಷ್ಯಾ-ಉಕ್ರೇನ್ ಯುದ್ಧ ಅಂತ್ಯಕ್ಕೆ ಭಾರತದ ನೆರವು ಅಗತ್ಯ: ಝೆಲೆನ್ಸ್ಕಿ



ಕೈವ್: ಉಕ್ರೇನ್‌ನ ಸ್ವಾತಂತ್ರ್ಯ ದಿನದಂದು ಪ್ರಧಾನಿ ನರೇಂದ್ರ ಮೋದಿ ಅವರ ಆತ್ಮೀಯ ಶುಭಾಶಯಗಳಿಗೆ ಉಕ್ರೇನಿಯನ್ ಅಧ್ಯಕ್ಷ ವ್ಲಾಡಿಮಿರ್ ಝೆಲೆನ್ಸ್ಕಿ ಧನ್ಯವಾದ ಅರ್ಪಿಸಿದ್ದಾರೆ ಮತ್ತು ರಷ್ಯಾದೊಂದಿಗಿನ ಯುದ್ಧವನ್ನು ಕೊನೆಗೊಳಿಸಲು ಭಾರತದ ಕೊಡುಗೆಯನ್ನು ಕೀವ್ ನಂಬುತ್ತಿದೆ ಎಂದು ತಿಳಿಸಿದ್ದಾರೆ. ಝೆಲೆನ್ಸ್ಕಿ, ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಶಾಂತಿ ಮತ್ತು ಸಂವಾದಕ್ಕೆ ಭಾರತದ ಸಮರ್ಪಣೆಯನ್ನು ಉಕ್ರೇನ್ ಮೆಚ್ಚುತ್ತದೆ ಎಂದು ಹೇಳಿದರು. ಈಗ, ಇಡೀ ಜಗತ್ತು ಈ ಭಯಾನಕ ಯುದ್ಧವನ್ನು ಘನತೆ ಮತ್ತು ಶಾಶ್ವತ ಶಾಂತಿಯಿಂದ ಕೊನೆಗೊಳಿಸಲು ಶ್ರಮಿಸುತ್ತಿರುವಾಗ, ನಾವು ಭಾರತದ ಕೊಡುಗೆಯನ್ನು ನಂಬುತ್ತೇವೆ ಎಂದರು.

ರಾಜತಾಂತ್ರಿಕತೆಯನ್ನು ಬಲಪಡಿಸುವ ಪ್ರತಿಯೊಂದು ನಿರ್ಧಾರವು ಯುರೋಪ್‌ನಲ್ಲಿ ಮಾತ್ರವಲ್ಲದೆ ಇಂಡೋ-ಪೆಸಿಫಿಕ್ ಮತ್ತು ಅದರಾಚೆಗೂ ಉತ್ತಮ ಭದ್ರತೆಗೆ ಕಾರಣವಾಗುತ್ತದೆ ಎಂದರು. ಆಗಸ್ಟ್ 16ರಂದು, ಮೋದಿ ಅವರು ಉಕ್ರೇನ್ ಜನರಿಗೆ ಶಾಂತಿ ಮತ್ತು ಪ್ರಗತಿಯಿಂದ ಗುರುತಿಸಲ್ಪಟ್ಟ ಭವಿಷ್ಯವನ್ನು ಹಾರೈಸಿದರು, ಝೆಲೆನ್ಸ್ಕಿ ಅವರ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳಿಗೆ ಧನ್ಯವಾದ ಹೇಳಿದರು.

ಲಡಾಖ್‌ನಲ್ಲಿ ಋತುವಿನ ಮೊದಲ ಹಿಮಪಾತ; ಭಾರಿ ಮಳೆ ಮುನ್ಸೂಚನೆ



ಲೇಹ್: ಲಡಾಖ್‌ನ ಖರ್ದುಂಗ್ ಲಾ ಪಾಸ್ ಸೇರಿದಂತೆ ಅನೇಕ ಋತುವಿನ ಮೊದಲ ಹಿಮಪಾತವಾಗಿದೆ. ಬಯಲು ಪ್ರದೇಶಗಳಲ್ಲಿ ಅಧಿಕ ಮಳೆಯಾಗುತ್ತಿದೆ. ಇದರ ಪರಿಣಾಮ ಕಳೆದ ತಿಂಗಳು ಲೇಹ್‌ಗೆ ಪ್ರವಾಸಕ್ಕೆ ಬಂದಿದ್ದ ಟಿಬೆಟಿಯನ್ ಆಧ್ಯಾತ್ಮಿಕ ಗುರು ದಲೈಲಾಮಾ ಲೇಹ್‌ನಲ್ಲಿ ಸಿಲುಕಿದ್ದಾರೆ. ಶ್ಯೋಕ್ ಮತ್ತು ನುಬ್ರಾ ಕಣಿವೆಗಳಿಗೆ ಪ್ರವೇಶ ದ್ವಾರವಾಗಿ ಇರುವ ಖರ್ದುಂಗ್ ಲಾ ಶಿಖರ, ಲೇಹ್-ಪಂಗೊಂಗ್ ಸರೋವರ ರಸ್ತೆಯ ಉದ್ದಕ್ಕೂ 17,950 ಅಡಿ ಎತ್ತರದ ಚಾಂಗ್ಲಾ ಶಿಖರ ಮತ್ತು ಝನ್ಸ್ಕರ್ ಕಣಿವೆ ಪ್ರದೇಶದಲ್ಲಿ ಹಿಮಪಾತವಾಗಿದೆ. ಲೇಹ್ ಮತ್ತು ಕಾರ್ಗಿಲ್ ಪ್ರದೇಶದಲ್ಲೂ ಮಳೆಯಾಗುತ್ತಿದೆ. ಇನ್ನು ಕೆಲವು ದಿನಗಳ ಕಾಲ ಮಳೆಯಾಗುವ ಸಾಧ್ಯತೆಯಿದ್ದು ಸ್ಥಳೀಯರಿಗೆ ಎಚ್ಚರಿಕೆಯಿಂದಿರಲು ಅಧಿಕಾರಿಗಳು ಮುನ್ಸೂಚನೆ ನೀಡಿದ್ದಾರೆ. ಲೇಹ್ ವಿಮಾನ ನಿಲ್ದಾಣದಲ್ಲಿ ಪ್ರತಿಕೂಲ ಹವಾಮಾನದಿಂದಾಗಿ ವಿಮಾನಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಿದೆ. ಹಲವು ವಿಮಾನಗಳ ಹಾರಾಟವನ್ನು ರದ್ದುಗೊಳಿಸಲಾಗಿದೆ. ಇದರ ಪರಿಣಾಮವಾಗಿ ಟಿಬೆಟಿಯನ್ ಆಧ್ಯಾತ್ಮಿಕ ಗುರು ದಲೈಲಾಮಾ ಇನ್ನು ಕೆಲವು ದಿನಗಳ ಕಾಲ ಲೇಹ್‌ನಲ್ಲೇ ಉಳಿದುಕೊಳ್ಳಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಮೆರಿಕ: ಫೆಡರಲ್ ರಿಸರ್ವ್ ಗವರ್ನರ್ ಲೀಸಾ ಕುಕ್ ವಜಾ



ವಾಷಿಂಗ್ಟನ್: ಅಮೆರಿಕದ ಫೆಡರಲ್ ರಿಸರ್ವ್ ಗವರ್ನರ್ ಲೀಸಾ ಕುಕ್ ಅವರನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಜಾಗೊಳಿಸಿದ್ದಾರೆ.


ರಾಜಕೀಯದಿಂದ ದೂರವಿದ್ದು, ಸ್ವತಂತ್ರ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ ಎಂದೇ ಪರಿಗಣಿಸಲಾಗುತ್ತಿದ್ದ ಫೆಡರಲ್ ರಿಸರ್ವ್ ಮೇಲೆ ತಮ್ಮ ಹಿಡಿತ ಸಾಧಿಸುವ ಉದ್ದೇಶದಿಂದ ಟ್ರಂಪ್ ಅವರು ಈ ಕ್ರಮ ಕೈಗೊಂಡಿದ್ದಾರೆ ಎನ್ನಲಾಗುತ್ತಿದೆ. ಈ ಕುರಿತು ಸಾಮಾಜಿಕ ಮಾಧ್ಯಮ 'ಟ್ರುತ್ ಸೋಷಿಯಲ್'ನಲ್ಲಿ ಪತ್ರವೊಂದನ್ನು ಪೋಸ್ಟ್ ಮಾಡಿರುವ ಟ್ರಂಪ್, ಹಣಕಾಸು ವ್ಯವಹಾರದಲ್ಲಿ ವಂಚನೆ ಮಾಡಿರುವ ಆರೋಪಗಳನ್ನು ಎದುರಿಸುತ್ತಿರುವ ಕಾರಣ ಕುಕ್ ಅವರನ್ನು ಕೆಲಸದಿಂದ ವಜಾಗೊಳಿಸಲಾಗಿದೆ ಎಂದು ಹೇಳಿದ್ದಾರೆ. ಟ್ರಂಪ್ ಅವರು ರಾಜೀನಾಮೆ ನೀಡುವಂತೆ ಸೂಚಿಸಿದರೂ, ನಾನು ಈ ಹುದ್ದೆಯಿಂದ ಕೆಳಗಿಳಿಯುವುದಿಲ್ಲ' ಎಂಬುದಾಗಿ ಕುಕ್ ಕೆಲ ದಿನಗಳ ಹಿಂದಷ್ಟೆ ಹೇಳಿದ್ದರು. ಇದರ ಬೆನ್ನಲ್ಲೇ ಟ್ರಂಪ್ ಈ ಕ್ರಮ ಕೈಗೊಂಡಿದ್ದಾರೆ.

ಜಮ್ಮು-ಕಾಶ್ಮೀರದಲ್ಲಿ ಮೇಘ ಸ್ಫೋಟ: ಹತ್ತಕ್ಕೂ ಹೆಚ್ಚು ಮನೆಗಳು ನಾಶ



ನವದೆಹಲಿ: ಜಮ್ಮು-ಕಾಶ್ಮೀರದ ದೋಡಾ ಜಿಲ್ಲೆಯಲ್ಲಿ ಸಂಭವಿಸಿದ ಮೇಘಸ್ಫೋಟದಿಂದಾಗಿ 10ಕ್ಕೂ ಹೆಚ್ಚು ಮನೆಗಳು ನಾಶವಾಗಿವೆ. ಇತ್ತೀಚಿಗಷ್ಟೇ ಹವಾಮಾನ ಇಲಾಖೆ ಕಥುವಾ, ಸಾಂಬಾ, ದೋಡಾ, ಜಮ್ಮು, ರಾಂಬನ್ ಮತ್ತು ಕಿಶ್ತ್ವಾರ್ ಜಿಲ್ಲೆಗಳು ಸೇರಿದಂತೆ ಜಮ್ಮುವಿನ ಹಲವು ಭಾಗಗಳಲ್ಲಿ ಭಾರಿ ಮಳೆಯಾಗಲಿದೆ ಎಂದು ಎಚ್ಚರಿಕೆ ನೀಡಿತ್ತು. ಈ ಬಗ್ಗೆ ಅಧಿಕಾರಿಯೊಬ್ಬರು ಮಾತನಾಡಿ, ಪ್ರತಿಕೂಲ ಹವಾಮಾನದ ಹಿನ್ನೆಲೆ ಜಮ್ಮುವಿನಾದ್ಯಂತ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಿಗೆ ರಜೆ ಘೋಷಿಸಲಾಗಿದೆ. ಜೊತೆಗೆ ಜಮ್ಮುವಿನಲ್ಲಿ ಪ್ರವಾಹದ ಎಚ್ಚರಿಕೆ ನೀಡಲಾಗಿದ್ದು, ಜನರು ಭೂಕುಸಿತ ಪೀಡಿತ ಪ್ರದೇಶಗಳಿಂದ ದೂರವಿರಲು ಸೂಚಿಸಲಾಗಿದೆ. ತಾವಿ ನದಿ ಸೇರಿದಂತೆ ಅನೇಕ ನದಿಗಳು, ಹೊಳೆಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ರಾತ್ರಿ ವೇಳೆ ನೀರಿನ ಪ್ರಮಾಣದಲ್ಲಿ ಏರಿಕೆಯಾಗುವ ನಿರೀಕ್ಷೆಯಿದೆ. ಕಾಶ್ಮೀರದ ದಕ್ಷಿಣ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಿದ್ದು, ಝೀಲಂ ನದಿಗೆ ಪ್ರವಾಹ ಎಚ್ಚರಿಕೆ ನೀಡಲಾಗಿಲ್ಲವಾದರೂ, ನೀರಿನ ಮಟ್ಟ ಏರಿಕೆಯಾಗುವ ನಿರೀಕ್ಷೆಯಿದೆ. ಮಧ್ಯ ಕಾಶ್ಮೀರದಲ್ಲಿ ಹಗುರದಿಂದ ಮಧ್ಯಮ ಮಳೆಯಾಗಿದ್ದರೆ, ಉತ್ತರ ಕಾಶ್ಮೀರದಲ್ಲಿ ಹಗುರ ಮಳೆ ಅಥವಾ ಒಣ ಹವಾಮಾನ ಕಂಡುಬಂದಿದೆ.

ಯಹೂದಿ ವಿರೋಧಿ ದಾಳಿಯಲ್ಲಿ ಭಾಗಿಯಾಗಿದ್ದ ಇರಾನ್ ರಾಯಭಾರಿ ಹೊರಹಾಕಿದ ಆಸ್ಟ್ರೇಲಿಯಾ



ಮೆಲ್ಬರ್ನ್: ಇರಾನ್‌ನ ರಾಯಭಾರಿಯನ್ನು ದೇಶದಿಂದ ಹೊರಹಾಕಲಾಗುವುದು ಎಂದು ಆಸ್ಟ್ರೇಲಿಯಾ ಪ್ರಧಾನಿ ಆಂಥೋನಿ ಅಲ್ಬನೀಸ್ ಮಂಗಳವಾರ ಹೇಳಿದ್ದಾರೆ.

ಆಸ್ಟ್ರೇಲಿಯಾದಲ್ಲಿ ಯಹೂದಿಗಳ ಮೇಲೆ ನಡೆದಿರುವ ಕನಿಷ್ಠ ಎರಡು ದಾಳಿಗಳ ಹಿಂದೆ ಇರಾನ್ ಸರ್ಕಾರವಿದೆ ಎಂದು ಗುಪ್ತಚರ ಇಲಾಖೆಯು ಬಹಿರಂಗಪಡಿಸಿದ ನಂತರ ಈ ಕ್ರಮ ತೆಗೆದುಕೊಂಡಿದ್ದಾರೆ. ಹಿಂದಿನ ವರ್ಷದ ಅಕ್ಟೋಬರ್‌ನಲ್ಲಿ ಸಿಡ್ನಿಯಲ್ಲಿರುವ ಕೋಷರ್ ಫುಡ್ ಕಂಪನಿಯ ಲೆವಿಸ್ ಕಾಂಟಿನೆಂಟಲ್ ಕಿಚನ್ ಹಾಗೂ ಡಿಸೆಂಬರ್‌ನಲ್ಲಿ ಮೆಲ್ಬರ್ನ್‌ನಲ್ಲಿರುವ ಅಡ್ಡಾಸ್ ಇಸ್ರೇಲ್ ಸಿನಗಾಗ್ ಮೇಲೆ ನಡೆದ ದಾಳಿಯಲ್ಲಿ ಇರಾನ್ ಸರ್ಕಾರದ ಪಾತ್ರವಿದೆ ಎಂದು ಆಸ್ಟ್ರೇಲಿಯಾದ ಭದ್ರತಾ ಗುಪ್ತಚರ ಸಂಸ್ಥೆಯು ತಿಳಿಸಿದೆ ಎಂದು ಅಲ್ಬನೀಸ್ ಮಾಹಿತಿ ನೀಡಿದ್ದಾರೆ. ಈ ಘೋಷಣೆಗೂ ಮೊದಲು, ಆಸ್ಟ್ರೇಲಿಯಾದಲ್ಲಿನ ಇರಾನ್ ರಾಯಭಾರಿ ಅಹಮದ್ ಸಾದೇಘಿ ಅವರನ್ನು ದೇಶದಿಂದ ಹೊರಹಾಕಲಾಗುವುದು ಎಂದು ತಿಳಿಸಲಾಗಿತ್ತು. ಇರಾನ್‌ನಲ್ಲಿರುವ ತಮ್ಮ ದೇಶದ ರಾಯಭಾರಿಯನ್ನು ವಾಪಸ್ ಕರೆಸಿಕೊಂಡು ಬೇರೆ ದೇಶಕ್ಕೆ ನಿಯೋಜಿಸಲಾಗಿದೆ ಅವರು ಹೇಳಿದ್ದಾರೆ.

ಹೊನ್ನಮ್ಮನ ಕೆರೆಗೆ ಬಾಗಿನ ಸಮರ್ಪಣೆ

ಮಡಿಕೇರಿ, ಆ.26– ಸೋಮವಾರಪೇಟೆ ತಾಲೂಕಿನ ಐತಿಹಾಸಿಕ ಹಿನ್ನೆಲೆ ಹೊಂದಿರುವ ದೊಡ್ಡಮಳ್ತೆ ಹೊನ್ನಮ್ಮನ ಕೆರೆ ಜಾತ್ರೋತ್ಸವ ಹಾಗೂ ಬಾಗಿನ ಅರ್ಪಣಾ ಕಾರ್ಯಕ್ರಮ ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ಶ್ರದ್ಧಾ–ಭಕ್ತಿಯಿಂದ ನೆರವೇರಿತು.

ಹೊನ್ನಮ್ಮನ ಕೆರೆಯ ದಡದಲ್ಲಿನ ಹೊನ್ನಮ್ಮ ತಾಯಿ, ಬಸವೇಶ್ವರ ಹಾಗೂ ಗಣಪತಿ ದೇವಾಲಯದಲ್ಲಿ ಬೆಳಗ್ಗಿನಿಂದಲೇ ಗ್ರಾಮಸ್ಥರು ವಿಶೇಷ ಪೂಜೆ ಸಲ್ಲಿಸಿದರು. ನಂತರ ತಾವುಗಳು ಮನೆಯಿಂದ ಪೂಜಿಸಿ ತಂದಿದ್ದ ಬಾಗಿನವನ್ನು ಬಂಗಾರದ ಕಟ್ಟೆಯ ಮೇಲಿಟ್ಟು ಹೊನ್ನಮ್ಮ ತಾಯಿಗೆ ಪೂಜೆ ಸಲ್ಲಿಸಿದರು. ಬಿದಿರಿನಿಂದ ಹೆಣೆದ ಮೊರದಲ್ಲಿ ಹರಿಸಿನ, ಕುಂಕುಮ, ಬಿಚ್ಚೋಲೆ, ರವಿಕೆ ಕಣ, ಕನ್ನಡಿ, ಬಾಚಣಿಕೆ, ಬಳೆ, ಗೌರಿ ಹೂ, ತೆಂಗಿನ ಕಾಯಿ, ಫಲ ತಾಂಬೂಲ ಗಳನ್ನೊಳಗೊಂಡ ಬಾಗಿನವನ್ನು ಹೊನ್ನಮ್ಮ ತಾಯಿಯ ಕುಟುಂಬಸ್ಥರು ಮೊದಲಿಗೆ ಕೆರೆಯಲ್ಲಿ ಅರ್ಪಿಸಿದರು.


ದೊಡ್ಡಮಳ್ತೆ ಹೊನ್ನಮ್ಮನ ಕೆರೆ ಜಾತ್ರೋತ್ಸವ ಹಾಗೂ ಬಾಗಿನ ಅರ್ಪಣಾ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಶಾಸಕ ಡಾ.ಮಂತರ್ ಗೌಡ.

ಮಡಿಕೇರಿ ಕ್ಷೇತ್ರ ಶಾಸಕ ಡಾ.ಮಂತರ್ ಗೌಡ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಕೆ.ಪಿ.ಚಂದ್ರಕಲಾ, ದೊಡ್ಡಮಳ್ತೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಗೋಪಾಲ ಕೃಷ್ಣ, ಪ್ರಮುಖರಾದ ಎಚ್.ಆರ್.ಸುರೇಶ್, ಕೆ.ಎಂ.ಲೋಕೇಶ್, ಬಿ.ಬಿ.ಸತೀಶ್, ಬಿ.ಜೆ. ದೀಪಕ್ ಮತ್ತಿತರರು ದೇವಾಲಯ ದಲ್ಲಿ ಪೂಜೆ ಸಲ್ಲಿಸಿ ಬಾಗಿನ ಅರ್ಪಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಡಾ.ಮಂತರ್ ಗೌಡ ಸಾವಿರಾರು ವರ್ಷಗಳ ಇತಿಹಾಸವಿರುವ ಹೊನ್ನಮ್ಮನ ಕ್ಷೇತ್ರದಲ್ಲಿ ಗ್ರಾಮಸ್ಥರು ಶ್ರದ್ಧಾಭಕ್ತಿಯಿಂದ ಜಾತ್ರೋತ್ಸವ ಆಚರಿಸುತ್ತಿರುವುದು ಶ್ಲಾಘನೀಯ. ಪ್ರವಾಸಿಗರು ಇತ್ತ ಕಡೆ ಅಧಿಕ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಹೊನ್ನಮ್ಮನ ಕೆರೆ ವಿಶಾಲವಾಗಿರುವುದರಿಂದ ಪ್ರತಿದಿನ ಬೋಟಿಂಗ್ ವ್ಯವಸ್ಥೆ ಮಾಡಲಾಗುವುದು. ಪ್ರಸಕ್ತ ವರ್ಷ ವಿಶೇಷ ಅನುದಾನದಲ್ಲಿ 50 ಲಕ್ಷ ರೂ.ಗಳನ್ನು ಹೊನ್ನಮ್ಮನ ಕೆರೆ ಅಭಿವೃದ್ಧಿ ಕಾಮಗಾರಿಗಳಿಗೆ ಒದಗಿಸಲಾಗುವುದು ಎಂದು ಶಾಸಕ ಡಾ.ಮಂತರ್ ಗೌಡ ಹೇಳಿದರು.

ಸಾಹಿತಿ ನಡಿಕೇರಿಯಂಡ ಚಿಣ್ಣಪ್ಪರ ಜನ್ಮೋತ್ಸವ

ಕೊಡವ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಕೊಡವ ಸಾಹಿತಿ

ಮಡಿಕೇರಿ, ಆ.26– ಪೊನ್ನಂಪೇಟೆ ಕೊಡವ ಸಮಾಜದಲ್ಲಿ ಪೊನ್ನಂಪೇಟೆ ಕೊಡವ ಸಮಾಜ ಹಾಗೂ ಪೊಮ್ಮಕ್ಕಡ ಕೂಟ ಜಂಟಿ ಆಶ್ರಯದಲ್ಲಿ ಮಹಾನ್ ಸಾಹಿತಿ ನಡಿಕೇರಿಯಂಡ ಚಿಣ್ಣಪ್ಪ ಅವರ 150ನೇ ಜನ್ಮೋತ್ಸವವನ್ನು ಅರ್ಥ ಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಸಾಹಿತಿ ಡಾ. ಕಾಳಿಮಾಡ ಕೆ.ಶಿವಪ್ಪ ಕೊಡವ ಸಾಹಿತ್ಯದಲ್ಲಿ ಅಲಿಖಿತವಾಗಿದ್ದ ಕೊಡವ ಸಂಸ್ಕೃತಿ, ಆಚಾರ ವಿಚಾರ ಪರಂಪರೆಗಳನ್ನು ಪಟ್ಟೋಲೆ ಪಳಮೆ ಕೃತಿಯಲ್ಲಿ ದಾಖಲಿಸಿ ಕೊಡವ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಸಾಹಿತಿ ನಡಿಕೇರಿಯಂಡ ಚಿಣ್ಣಪ್ಪ ಅವರು ಕೊಡವ ಜನಾಂಗದಲ್ಲಿ ಪ್ರಾತಃ ಸ್ಮರಣೀಯರಾಗಿ ಉಳಿದಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಪೊನ್ನಂಪೇಟೆ ಕೊಡವ ಸಮಾಜದ ಪೊಮ್ಮಕ್ಕಡ ಕೂಟದ ಅಧ್ಯಕ್ಷೆ ಪ್ರೊ. ಇಟ್ಟಿರ ಕಮಲಾಕ್ಷಿ ಬಿದ್ದಪ್ಪ ನಡಿಕೇರಿಯಂಡ ಚಿಣ್ಣಪ್ಪ ಅವರ ಜೀವನ ಚರಿತ್ರೆಯನ್ನು ವಿವರಿಸಿದರು. ಸುಮಾರು 125 ವರ್ಷಗಳ ಹಿಂದೆ ಆಧುನಿಕ ತಂತ್ರಜ್ಞಾನವಿಲ್ಲದ ಕಾಲಘಟ್ಟ ದಲ್ಲಿ ಎಲ್ಲವನ್ನು ನೋಡಿ, ಕೇಳಿ, ಸಂದರ್ಶನ ಮಾಡಿ ಕೈಯಲ್ಲಿ ಬರೆದು ದಾಖಲಿಸಿ ಕಷ್ಟ–ನಷ್ಟ, ನೋವು ಅನುಭವಿಸಿ ಪಟ್ಟೋಲೆ ಪಳಮೆಯನ್ನು ರಚಿಸಿದರು. ಅದನ್ನು ಕೊಡವ ಲೋಕಕ್ಕೆ ಅರ್ಪಿಸಿದ್ದರ ಹಿಂದೆ ಅವರ ಪತ್ನಿ ನಂಜಮ್ಮ ಅವರ ಕೊಡುಗೆಯೂ ಇದೆ ಎಂದು ವಿವರಿಸಿದರು.


ಸಾಹಿತಿ ನಡಿಕೇರಿಯಂಡ ಚಿಣ್ಣಪ್ಪರ ಜನ್ಮೋತ್ಸವ ಉದ್ಘಾಟನೆ ಮಾಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪೊನ್ನಂಪೇಟೆ ಸಮಾಜದ ಅಧ್ಯಕ್ಷ ಹಾಗೂ ಜಾನಪದ ತಜ್ಞ ಕಾಳಿಮಾಡ ಮೋಟಯ್ಯ ಪೊಲೀಸ್ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ನಡಿಕೇರಿಯಂಡ ಚಿಣ್ಣಪ್ಪ ಅವರು ಕೊಡವ ಸಾಹಿತ್ಯ, ಜಾನಪದ ಕಲೆ, ಆಚಾರ ವಿಚಾರ, ಇತಿಹಾಸ ಇತ್ಯಾದಿಗಳನ್ನು ದಾಖಲಿಸುವ ಉದ್ದೇಶದಿಂದ ಅವುಗಳನ್ನು ಅರಿತು ಅದನ್ನು ಮುಂದಿನ ಪೀಳಿಗೆಗೆ ಪರಿಚಯಿಸಿ ಉಳಿಸುವ ನಿಟ್ಟಿನಲ್ಲಿ ಅವರು ಪುಸ್ತಕ ರೂಪದಲ್ಲಿ ಹೊರ ತಂದಿದ್ದಾರೆ ಎಂದರು.

ಅಜ್ಜಿನಿಕಂಡ ಇನ್ನಿತ ಮಾಚಯ್ಯ ಮಾತನಾಡಿದರು. ಕೊಡವ ಸಮಾಜದ ನಿರ್ದೇಶಕಿ ಮೂಕಳೇರ ಕಾವ್ಯ ಮಧು, ಪೊಮ್ಮಕ್ಕಡ ಕೂಟದ ನಿರ್ದೇಶಕಿ ಬಲ್ಯಮೀದೇರಿರ ಆಶಾ ಶಂಕರ್, ಗೌರವ ಕಾರ್ಯದರ್ಶಿ ಬಲ್ಲಾಡಿಚಂಡ ಕಸ್ತೂರಿ ಸೋಮಯ್ಯ, ಮೂಕಳೇರ ಆಶಾ ಪೂಣಚ್ಚ, ಸೋಮಯ್ಯ ಎನ್.ಎಂ ಉಪಸ್ಥಿತರಿದ್ದರು.

ಕಾಡಾನೆ ದಾಳಿ: ಸವಾರ ಪಾರು, ಬೈಕ್ ಜಖಂ



ಸಿದ್ದಾಪುರ, ಆ.26– ಮನೆಗೆ ತೆರಳುತ್ತಿದ್ದ ಬೈಕ್ ಸವಾರನ ಮೇಲೆ ಕಾಡಾನೆಯೊಂದು ದಾಳಿ ಮಾಡಿದ ಪರಿಣಾಮ ಬೈಕ್ ಜಖಂಗೊಂಡು ಬೈಕ್ ಸವಾರ ಕೂದಳೆಲೆ ಅಂತರ ದಲ್ಲಿ ಪಾರಾದ ಘಟನೆ ವಿರಾಜಪೇಟೆ ತಾಲೂಕಿನ ಮಾಲ್ದಾರೆ ಸಮೀಪದ ಘಟ್ಟದಳ ಬಳಿ ಸೋಮವಾರ ರಾತ್ರಿ ಸಂಭವಿಸಿದೆ.

ಬೈಕ್ ಸವಾರ ಸವೀನ್ ಕುಮಾರ್ ಮಾಲ್ದಾರೆ ಗ್ರಾಮ ವ್ಯಾಪ್ತಿಯಲ್ಲಿರುವ ಮನೆಗೆ ಬೈಕಿನಲ್ಲಿ ಹೋಗುತ್ತಿದ್ದ ಸಂದರ್ಭ ಘಟ್ಟದಳ್ಳ ಬಳಿ ಕಾಫಿ ತೋಟದಿಂದ ಏಕಾಏಕಿ ರಸ್ತೆಯಲ್ಲಿ ಕಾಡಾನೆ ಎದುರಾಗಿದೆ. ಇದರಿಂದ ಭಯಭೀತರಾದ ಸವೀನ್ ಕುಮಾರ್ ಬೈಕ್ ಅನ್ನು ತಿರುಗಿಸಲು ಮುಂದಾಗಿದ್ದಾರೆ. ಈ ವೇಳೆ ಕಾಡಾನೆ ಬೈಕ್ ಸವಾರನ ಮೇಲೆ ದಾಳಿಗೆ ಮುಂದಾಗಿದೆ. ಇದರಿಂದ ಗಾಬರಿಗೊಂಡ ನವೀನ್ ಕುಮಾರ್ ಬೈಕನ್ನು ಸ್ಥಳದಲ್ಲಿ ಬಿಟ್ಟು ಓಡಿ ಪ್ರಾಣಪಾಯದಿಂದ ಪಾರಾಗಿದ್ದಾರೆ. ಇದೇ ಸಂದರ್ಭದಲ್ಲಿ ಈ ಮಾರ್ಗವಾಗಿ ಇತರ ವಾಹನಗಳು ಬಂದ ಸಂದರ್ಭ ಕಾಡಾನೆ ಮತ್ತೆ ಕಾಫಿ ತೋಟದತ್ತ ನುಸುಳಿ ಮರೆಯಾಗಿದೆ.

ವಿಷಯ ತಿಳಿದ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬೈಕ್ ಸಂಪೂರ್ಣ ಜಖಂ ಆಗಿದ್ದು, ಅರಣ್ಯ ಇಲಾಖೆ ಮೂಲಕ ಪರಿಹಾರ ನೀಡಲಾಗುವುದು ಎಂದು ವಲಯ ಅರಣ್ಯಾಧಿಕಾರಿ ಶಿವರಾಂ ತಿಳಿಸಿದ್ದಾರೆ. ಸ್ಥಳಕ್ಕೆ ಉಪವಲಯ ಅರಣ್ಯ ಅಧಿಕಾರಿ ಸಂಜಿತ್ ಸೋಮಯ್ಯ ಸೇರಿದಂತೆ ಅರಣ್ಯ ಇಲಾಖೆ ಹಾಗೂ ಆರ್‌ಆರ್‌ಟಿ ಸಿಬ್ಬಂದಿಗಳು ಭೇಟಿ ನೀಡಿದ್ದರು.

ಕಲಿಕೆಯೊಂದಿಗೆ ಕ್ರೀಡೆಗೂ ಗೌರವ ನೀಡಿ ಯಶಸ್ಸು ಗಳಿಸಿ

ವಿರಾಜಪೇಟೆ, ಆ.26– ಕ್ರೀಡೆಗಳಿಂದ ಉತ್ತಮ ಆರೋಗ್ಯ ಪಡೆದುಕೊಳ್ಳಲು ಸಾಧ್ಯ. ಕಲಿಕೆಯೊಂದಿಗೆ ಕ್ರೀಡೆಗೂ ಗೌರವ ನೀಡಿ ಜೀವನದಲ್ಲಿ ಯಶಸ್ಸು ಗಳಿಸಬೇಕು ಎಂದು ಮುಖ್ಯ ಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ತಿಳಿಸಿದರು.

ಕೊಡಗು ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ವಿರಾಜಪೇಟೆ ತಾಲೂಕು ಮತ್ತು ಪ್ರಗತಿ ಆಂಗ್ಲ ಮಾಧ್ಯಮ ಶಾಲೆಯ ಸಂಯುಕ್ತ ಆಶ್ರಯದಲ್ಲಿ ಪ್ರಗತಿ ಆಂಗ್ಲ ಮಾಧ್ಯಮ ಶಾಲೆಯ ಆವರಣದಲ್ಲಿ 2025–26ನೇ ಸಾಲಿನ ತಾಲೂಕು ಮಟ್ಟದ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳ ಕ್ರೀಡಾಕೂಟ ಉದ್ಘಾಟಿಸಿ ಅವರು ಮಾತನಾಡಿದರು.

ಕೊಡಗು ಜಿಲ್ಲೆ ಕ್ರೀಡೆಗಳ ತವರೂರು. ಜಿಲ್ಲೆಯ ವಿದ್ಯಾರ್ಥಿಗಳು ವಿವಿಧ ಕ್ರೀಡೆಗಳಲ್ಲಿ ಸಾಧನೆಗೈದು ರಾಷ್ಟ್ರ ಮಟ್ಟದ ತಂಡಕ್ಕೆ ಅಯ್ಕೆಗೊಂಡು ಉತ್ತಮ ಪ್ರದರ್ಶನ ತೋರಿ ಜಿಲ್ಲೆಯ ಹೆಸರು ಉನ್ನತಮಟ್ಟಕ್ಕೇರಿಸಿದ್ದಾರೆ. ಪ್ರಸ್ತುತ ದಿನಗಳಲ್ಲಿ ಗ್ರಾಮೀಣಾ ಮಟ್ಟದಿಂದ ಬಂದ ವಿದ್ಯಾರ್ಥಿಗಳು ದೇಶದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಾಧನೆಗೈದು ಉನ್ನತ ಪದವಿಗಳನ್ನು ಅಲಂಕರಿಸಿದ್ದಾರೆ.



ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಮಾತನಾಡುತ್ತಿರುವ ಶಾಸಕ ಎ.ಎಸ್.ಪೊನ್ನಣ್ಣ.

ಪ್ರಗತಿ ಆಂಗ್ಲ ಮಾಧ್ಯಮ ಶಾಲೆಯ ಸಂಸ್ಥಾಪಕರಾದ ಮಾದಂಡ ಎಸ್. ಪೊವಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪುರಸಭೆ ಅಧ್ಯಕ್ಷ ಎಂ.ದೇಚಮ್ಮ ಕಾಳಪ್ಪ ಗೌರವ ವಂದನೆ ಸ್ವೀಕರಿಸಿದರು. ಪುರಸಭೆ ಉಪಾಧ್ಯಕ್ಷ ಫಾಸಿಯ ತಬ್ಸುಂ, ಸ್ಥಾಯಿ ಸಮಿತಿ ಅಧ್ಯಕ್ಷ ಅಬ್ದುಲ್ ಜಲೀಲ್, ಪಿ.ಎ. ಪ್ರವೀಣ್ ಅಧ್ಯಕ್ಷರು ದೈಹಿಕ ಶಿಕ್ಷಕರ ಸಂಘ ಕೊಡಗು ಜಿಲ್ಲೆ, ವಿರಾಜಪೇಟೆ ತಾಲೂಕು ದೈಹಿಕ ಶಿಕ್ಷರ ಸಂಘ ಅಧ್ಯಕ್ಷ ಡಾ. ಸೋಮಯ್ಯ ವಿರಾಜಪೇಟೆ ತಾಲೂಕು ದೈಹಿಕ ಶಿಕ್ಷಕರ ಸಂಘ ಅಧ್ಯಕ್ಷ ಎಂ.ಎಸ್.ತಮ್ಮಯ್ಯ ಅವರುಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವಿರಾಜಪೇಟೆ ವಲಯ, ಪೊನ್ನಂಪೇಟೆ ವಲಯ, ಅಮ್ಮತ್ತಿ ವಲಯ, ಬಾಳಲೆ ವಲಯ, ಹುದಿಕೇರಿ ವಲಯ ಮತ್ತು ಶ್ರೀಮಂಗಲ ವಲಯದ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಕ್ರೀಡಾಕೂಟದಲ್ಲಿ ಭಾಗವಹಿಸಿದ್ದರು.

ಗಣೇಶ ಚತುರ್ಥಿ ಪೂಜಾ ಕಾರ್ಯಕ್ರಮ

ಮಡಿಕೇರಿ, ಆ.26– ಭಾಗಮಂಡಲ ಶ್ರೀ ಭಗಂಡೇಶ್ವರ–ತಲಕಾವೇರಿ ದೇವಾಲಯದಲ್ಲಿ ರೂಢಿ ಸಂಪ್ರದಾಯದಂತೆ ಪ್ರತೀ ವರ್ಷ ಗಣೇಶ ಚತುರ್ಥಿ ಪೂಜಾ ಕಾರ್ಯಕ್ರಮವನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಅದರಂತೆ ಈ ವರ್ಷವೂ ಆ.27 ರಂದು ಗಣೇಶ ಚತುರ್ಥಿ ಪೂಜಾ ಕಾರ್ಯಕ್ರಮ ನಡೆಯಲಿದೆ. ಭಾಗಮಂಡಲ ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ಆ.27 ರಂದು ಬೆಳಗ್ಗೆ 9.30 ಗಂಟೆಗೆ ಗಣಪತಿ ಹೋಮ, ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿ, ಮಹಾಮಂಗಳಾರತಿ, ಪ್ರಸಾದ ವಿತರಣೆ ಮತ್ತು ಅನ್ನ ಸಂತರ್ಪಣೆ ನಡೆಯಲಿದೆ.

ಯುವ ದಸರಾ ಸಮಿತಿಯಿಂದ ನೃತ್ಯ ಸ್ಪರ್ಧೆಗೆ ತಂಡಗಳ ಆಯ್ಕೆ ಪ್ರಕ್ರಿಯೆ

ಮಡಿಕೇರಿ, ಆ.26– ಮಡಿಕೇರಿ ನಗರ ಯುವ ದಸರಾ ಸಮಿತಿ ವತಿಯಿಂದ ಆಯೋಜಿಸುವ ರಾಜ್ಯ ಮಟ್ಟದ ನೃತ್ಯ ಸ್ಪರ್ಧೆಗೆ ಸೆ.6ರಂದು ತಂಡಗಳ ಆಯ್ಕೆ ಪ್ರಕ್ರಿಯೆ ನಡೆಯಲಿದೆ ಎಂದು ಯುವ ದಸರಾ ಸಮಿತಿಯ ಅಧ್ಯಕ್ಷ ಕವನ್ ಕೊತ್ತೋಳಿ ತಿಳಿಸಿದ್ದಾರೆ.

ನಗರದ ಹೊಟೇಲ್ ರಾಜ್ ದರ್ಶನ್ ಸಭಾಂಗಣದಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಲಿದ್ದು, ಆಯ್ಕೆಯಾದ ತಂಡಗಳ ನಡುವೆ ಸೆ.27 ರಂದು ನಗರದ ಗಾಂಧಿ ಮೈದಾನದ ವೇದಿಕೆಯಲ್ಲಿ ಸ್ಪರ್ಧೆಯನ್ನು ಆಯೋಜಿಸುವುದಾಗಿ ಅವರು ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಇದು ರಾಜ್ಯ ಮಟ್ಟದ ಸ್ಪರ್ಧೆಯಾಗಿದ್ದು, ಸ್ಪರ್ಧಿಗಳು ಶಾಸ್ತ್ರೀಯ ಪ್ರಕಾರ ಹಾಗೂ ದೇವರಿಗೆ ಸಂಬಂಧಪಟ್ಟ ಪ್ರಕಾರವನ್ನು ಹೊರತುಪಡಿಸಿ ಇತರೆ ಯಾವುದೇ ಪ್ರಕಾರವನ್ನು ಆಯ್ದುಕೊಳ್ಳಬಹುದು. ಸ್ಪರ್ಧೆಗೆ ವಯೋಮಿತಿಯ ನಿರ್ಬಂಧ ವಿಲ್ಲ, ತಂಡವು ಕನಿಷ್ಠ 12 ಹಾಗೂ ಗರಿಷ್ಠ 30 ಮಂದಿ ಕಲಾವಿದರನ್ನು ಹೊಂದಿರಬೇಕು. ನೃತ್ಯಗಳು ಸಾಮಾಜಿಕ ಪರಿಕಲ್ಪನೆ ಹಾಗೂ ಸಂದೇಶಗಳನ್ನು ಹೊಂದಿರಬೇಕು. ಹಾಡಿನ ಭಾಷೆ ಹಾಗೂ ಉಡುಗೆ ತೊಡುಗೆಗಳು ಸಭ್ಯವಾಗಿರಬೇಕು. ಯಾರ ನಂಬಿಕೆ ಹಾಗೂ ಭಾವನೆಗೆ ನೋವುಂಟು ಮಾಡಬಾರದು. 12 ನಿಮಿಷ ಕಾಲಾವಕಾಶ ಕಲ್ಪಿಸಲಾಗಿದ್ದು, ಬೆಂಕಿ, ಬಣ್ಣ, ನೀರು ಇತರ ಯಾವುದೇ ಹಾನಿ ಉಂಟುಮಾಡುವ ಪರಿಕರಗಳನ್ನು ಬಳಸುವಂತಿಲ್ಲ. ಸ್ಪರ್ಧಿಗಳು ಕಡ್ಡಾಯವಾಗಿ ಆಧಾರ್ ಕಾರ್ಡ್ ತರುವಂತೆ ಕವನ್ ಕೊತ್ತೋಳಿ ಮನವಿ ಮಾಡಿದ್ದಾರೆ.

ಹೆಚ್ಚಿನ ಮಾಹಿತಿಗೆ ಕವನ್ ಕೊತ್ತೋಳಿ 9741292825 ಹಾಗೂ ಲೀನೇಶ್ 99866 19262 ನ್ನು ಸಂಪರ್ಕಿಸಬಹುದಾಗಿದೆ.

ಇಂದು ಕೋಟೆ ಗಣಪತಿ ದೇವಾಲಯದಲ್ಲಿ ಮಹಾಪೂಜೆ

ಮಡಿಕೇರಿ, ಆ.26– ನಗರದ ಕೋಟೆ ಶ್ರೀ ಗಣಪತಿ ದೇವಾಲಯದಲ್ಲಿ ಶ್ರೀ ಗಣೇಶ ಚತುರ್ಥಿ ಹಬ್ಬದ ಪ್ರಯುಕ್ತ ಆ.27 ರಂದು ಬೆಳಗ್ಗೆ 7 ಗಂಟೆಯಿಂದ ಗಣಪತಿ ಪೂಜೆ ಹಾಗೂ ಬೆಳಗ್ಗೆ 10 ಗಂಟೆಗೆ ಗಣಪತಿ ಹೋಮ, ಮಧ್ಯಾಹ್ನ 1 ಗಂಟೆಗೆ ಮಹಾಪೂಜೆ ಮತ್ತು ಪ್ರಸಾದ ವಿತರಣೆ, ರಾತ್ರಿ 7.30 ಗಂಟೆಗೆ ಮಹಾಪೂಜೆ ನಡೆಯಲಿದೆ. ಆದ್ದರಿಂದ ಸಾರ್ವಜನಿಕ ಭಕ್ತಾದಿಗಳು ದೇವಾಲಯದಲ್ಲಿ ನಡೆಯುವ ಪೂಜೆಯಲ್ಲಿ ಪಾಲ್ಗೊಳ್ಳುವಂತೆ ಶ್ರೀ ಓಂಕಾರೇಶ್ವರ ದೇವಾಲಯ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರು ತಿಳಿಸಿದ್ದಾರೆ.

ಚಾ.ನಗರ ಜಿಲ್ಲೆಯಲ್ಲಿ ಸಂಭ್ರಮದ ಗೌರಿ ಹಬ್ಬ

ಗೌರಿ ಪ್ರತಿಷ್ಠಾಪಿಸಿ, ಮುತ್ತೈದೆಯರಿಂದ ಬಾಗಿನ ಸಮರ್ಪಣೆ

ಚಾಮರಾಜನಗರ: ಭಾದ್ರಪದ ಮಾಸದಲ್ಲಿ ಮೊದಲ ದೊಡ್ಡ ಹಬ್ಬ ಗಣೇಶ ಚೌತಿಯ ಮುನ್ನಾ ದಿನವಾದ ಮಂಗಳವಾರ ಜಿಲ್ಲಾದ್ಯಂತ ಗೌರಿ ಹಬ್ಬವನ್ನು ಅತ್ಯಂತ ಸಡಗರ–ಸಂಭ್ರಮದಿಂದ ಆಚರಿಸಲಾಯಿತು.

ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಹಾಗೂ ಹನೂರು ತಾಲೂಕು ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿನ ಪ್ರಮುಖ ದೇವಾಲಯಗಳಲ್ಲಿ ಗೌರಿಯನ್ನು ಪ್ರತಿಷ್ಠಾಪಿಸಲಾಗಿದ್ದು, ಬೆಳಗ್ಗೆಯೇ ಶುಭ ಮುಹೂರ್ತದಲ್ಲಿ ಗೌರಿಯನ್ನು ಪ್ರತಿಷ್ಠಾಪಿಸಿ, ಮುತ್ತೈದೆಯರು ಕುಟುಂಬ ಸಮೇತ ಬಂದು ತಾಯಿಗೆ ಬಾಗಿನ ನೀಡಿ ಕುಟುಂಬದ ಸದಸ್ಯರ ಹೆಸರಿನಲ್ಲಿ ಪೂಜೆ ನೆರವೇರಿಸಿದರು. ಮುತ್ತೈದೆ ಭಾಗ್ಯ ಕರುಣಿಸುವಂತೆ ದೇವಿಯಲ್ಲಿ ಪ್ರಾರ್ಥಿಸಿಕೊಂಡರು.

ಗೌರಿ ಹಬ್ಬದಂದು ಎಲ್ಲಾ ಮುತ್ತೈದೆಯರು ತಮ್ಮ ತವರು ಮನೆಗೆ ಹೋಗಿ ತಾನು ಹುಟ್ಟಿ ಬೆಳೆದ ಮನೆ ಸುಖ–ಸಮೃದ್ಧಿಯಿಂದ ಇರಬೇಕು ಎಂದು ಹಾರೈಸಿ ಬರುತ್ತಾರೆ. ಹಾಗೆಯೇ ತವರು ಮನೆಯವರು ಮಗಳಿಗೆ ಬಾಗಿನ ನೀಡಿ ಕಳುಹಿಸುವುದು ವಾಡಿಕೆ.

ಗೌರಿಗೆ ವಿಶೇಷ ಭಕ್ತಿ ಸಮರ್ಪಣೆ: ಗೌರಿ ದೇವಿಯು ಶಿವನನ್ನು ಮದುವೆಯಾದ ಮೇಲೆ ತಾಯಿ ಮನೆ ಭೂ ಲೋಕಕ್ಕೆ ಬಂದಾಗ ಭೂಮಿಯು ಹಸಿರಿನಿಂದ ನಳನಳಿಸುತ್ತಿರುತ್ತೆ ಇದರಿಂದ ಗೌರಿ ದೇವಿ ಸಂತೋಷ ದಿಂದ ಇದೇ ರೀತಿ ಮಳೆ ಬೆಳೆ ಚೆನ್ನಾಗಿ ಆಗಲಿ ಎಂದು ಹರಸುತ್ತಾಳೆ ಎಂಬ ನಂಬಿಕೆ ಇದೆ. ತವರು ಮನೆಗೆ ಬಂದ ಮಗಳಿಗೆ ಹೇಗೆ ಸತ್ಕರಿಸಿ ಕಳುಹಿಸಿಕೊಡಲಾಗುತ್ತ ದೆಯೋ ಹಾಗೆಯೇ ಗೌರಮ್ಮನಿಗೂ ಸಹ ಸತ್ಕರಿಸಲಾಗುತ್ತದೆ. ತಾಯಿಯನ್ನು ಮಗ ಗಣೇಶ ಹುಡುಕಿಕೊಂಡು ಬರುತ್ತಾನೆ. ಇದರಿಂದ ಗಣೇಶನ ಹಬ್ಬ ಬಂದಿದೆ ಎಂಬುದು ನಂಬಿಕೆ.


ಚಾಮರಾಜನಗರ ತಾಲೂಕು ಕುದೇರು ಗ್ರಾಮದಲ್ಲಿ ಮರಳಿನಲ್ಲಿ ಸ್ವರ್ಣ ಗೌರಿ ಸ್ಥಾಪಿಸಿ ಗೌರಿಗುಡಿಯತ್ತ ಪಲ್ಲಕ್ಕಿಯಲ್ಲಿ ಸಾಗುತ್ತಿರುವ ಸ್ವರ್ಣ ಗೌರಿ ಅಮ್ಮನವರಿಗೆ ಮೆರವಣಿಗೆಯಲ್ಲಿ ಸಾಲುಗಟ್ಟಿ ನಿಂತ ಮಹಿಳೆಯರು ಬಾಗಿನ ಅರ್ಪಿಸುತ್ತಿರುವುದು

ಸ್ವರ್ಣ ಗೌರಿಗೆ ವಿಶೇಷ ಪೂಜೆ: ಗೌರಿ ಹಬ್ಬದ ಹಿನ್ನೆಲೆಯಲ್ಲಿ ನಗರದ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನದಲ್ಲಿ ಪ್ರತಿಷ್ಠಾಪನೆ ಮಾಡಲಾಗಿದ್ದ ಗೌರಿ ವಿಗ್ರಹಕ್ಕೆ ಮುತ್ತೈದೆಯರು ಹಾಗೂ ಮಹಿಳೆಯರು ವಿಶೇಷ ಪೂಜೆ ಸಲ್ಲಿಸಿದರು.

ಬೆಳಗ್ಗೆ 7.30ರ ಶುಭ ಲಗ್ನದಲ್ಲಿ ಗೌರಿ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಲಾಗಿತ್ತು. ಬಳಿಕ ದೇವಾಲಯದ ಅರ್ಚಕರು ವಿಶೇಷ ಪೂಜೆ ಸಲ್ಲಿಸಿದರು. ಆ ನಂತರ ಸಾರ್ವಜನಿಕರು ಹಾಗೂ ಮುತ್ತೈದೆಯರಿಗೆ ಪೂಜೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು ಪೂಜೆ ಸಲ್ಲಿಸಿದ ಬಳಿಕ ಮುತ್ತೈದೆಯರು ಬಾಗಿನ ಅರ್ಪಿಸಿದರು. ಬಳಿಕ ಪರಸ್ಪರ ಗೌರಿ ದಾರವನ್ನು ಕಟ್ಟಿಕೊಂಡರು. ಈ ಬಾರಿ ಗೌರಮ್ಮ ಹುಲ್ಲಿನ ಮೇಲೆ ಬಂದಿದ್ದು, ಇದು ಮುತ್ತೈದೆಯರಿಗೆ ಶುಭ ಸೂಚಕವಾಗಿದೆ.

ಗ್ರಾಮೀಣ ಭಾಗದಲ್ಲಿ ಸಂಭ್ರಮ: ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಗೌರಿ– ಗಣೇಶ ಹಬ್ಬವನ್ನು ಸಡಗರದಿಂದ ಆಚರಿಸಲಾಯಿತು. ಬೀದಿ– ಬೀದಿಗಳಲ್ಲಿ, ದೇವಸ್ಥಾನ, ಸಮುದಾಯ ಭವನ ಸೇರಿದಂತೆ ಹಲವಡೆ ಚಪ್ಪರ ಹಾಕಿ ನಾನಾ ವಿನ್ಯಾಸದ ಗಣೇಶನ ಮೂರ್ತಿಗಳನ್ನು ಯುವಕರು, ಸಂಘ–ಸಂಸ್ಥೆಯ ಮುಖಂಡರು ಪ್ರತಿಷ್ಠಾಪಿಸಲು ಸಿದ್ಧತೆ ಕೈಗೊಂಡಿದ್ದಾರೆ.

ಭರ್ಜರಿ ವ್ಯಾಪಾರ: ಗಣೇಶ ಹಬ್ಬದ ಹಿನ್ನೆಲೆಯಲ್ಲಿ ಮಂಗಳವಾರ ಗಣೇಶ ಮೂರ್ತಿಗಳನ್ನು ಕೊಳ್ಳಲು ಗ್ರಾಹಕರು ಮುಗಿಬಿದ್ದರು, ಈ ಬಾರಿ ಗಣೇಶ ಮೂರ್ತಿಗಳ ವ್ಯಾಪಾರ ಉತ್ತಮವಾಗಿ ನಡೆಯುತ್ತಿದೆ. ಮಧ್ಯಾಹ್ನದ ವೇಳೆಗೆ ನಗರದಲ್ಲಿ ಎಲ್ಲಾ ಗಣೇಶ ಮೂರ್ತಿಗಳ ಮಾರಾಟ ಮಳಿಗೆಗಳ ಮುಂದೆ ಜನರು ಮೂರ್ತಿ ಖರೀದಿಗೆ ಮುಂದಾಗಿದ್ದರು.

ಆ.29ರಿಂದ ನಶಾ ಮುಕ್ತ ಅಭಿಯಾನ

ಬಂಡೀಪುರದಿಂದ ಬೀದರ್‌ವರೆಗೆ ಮೂರು ದಿನಗಳ ಕಾಲ ಬೈಕ್ ಜಾಥಾ

ಚಾಮರಾಜನಗರ, ಅ.26– ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯವು ಆಚರಿಸುತ್ತಿರುವ ನಶಾ ಮುಕ್ತ ಭಾರತ ಅಭಿಯಾನದ ಅಂಗವಾಗಿ, ಆ.29 ರಿಂದ 31ರವರೆಗೆ ಬಂಡೀಪುರದಿಂದ ಬೀದರ್‌ವರೆಗೆ 3 ದಿನಗಳ ಬೈಕ್ ಜಾಥಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಮದ್ಯಪಾನ ಮತ್ತು ಮಾದಕ ವಸ್ತುಗಳ ದುರುಪಯೋಗದ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಮಾದಕ ವಸ್ತು ಮುಕ್ತ ಸಮಾಜ ನಿರ್ಮಾಣಕ್ಕೆ ಪ್ರೇರಣೆ ನೀಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ನವೀನರಾಜ್ ಸಿಂಗ್ ತಿಳಿಸಿದ್ದಾರೆ.

ಈ ಕುರಿತು ಮಾಧ್ಯಮ ಪ್ರಕಟಣೆ ನೀಡಿರುವ ಅವರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಅರಣ್ಯ ಇಲಾಖೆ, ರಾಷ್ಟ್ರೀಯ ಸೇವಾ ಯೋಜನೆ ಎನ್‌ಎಸ್‌ಎಸ್ ಮತ್ತು ಎನ್‌ಸಿಸಿ ಸಹಯೋಗದೊಂದಿಗೆ ಜಾಥಾ ಆಯೋಜಿಸಲಾಗುತ್ತಿದೆ. ಸಾರ್ವಜನಿಕರಿಂದ ಆಯ್ಕೆಯಾದ 20 ಬೈಕ್ ಸವಾರರು ಭಾಗವಹಿಸಲಿದ್ದಾರೆ.

ಈ ಜಾಥಾ ಕಾರ್ಯಕ್ರಮವು ಮಾರ್ಗದುದ್ದಕ್ಕೂ ರಾಜ್ಯದ ಪ್ರಮುಖ ಜಿಲ್ಲೆಗಳ ಮೂಲಕ ಸಾಗುತ್ತಾ ಶಾಲೆಗಳು, ಕಾಲೇಜುಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಿದೆ.

ಈ ಬೃಹತ್ ಅಭಿಯಾನವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ನವೀನರಾಜ್ ಸಿಂಗ್, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿ (ಅರಣ್ಯ) ಮನೋಜಕುಮಾರ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ) ಆರ್.ರವಿಶಂಕರ್, ಬಂಡೀಪುರ ಹುಲಿ ಮೀಸಲು ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕ ಎಸ್.ಪ್ರಭಾಕರನ್, ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿ ಸರ್ಫರಾಜ್ ಖಾನ್ ಹಾಗೂ ಇತರ ಸರ್ಕಾರದ ಹಿರಿಯ ಅಧಿಕಾರಿಗಳು ಮತ್ತು ಗಣ್ಯರು ರೂಪಿಸಿದ್ದಾರೆ. ದೇಶಾದ್ಯಂತ 1 ಲಕ್ಷ ಕಿಲೋ ಮೀಟರುಗಳಿಗೂ ಹೆಚ್ಚು ಪ್ರಯಾಣವನ್ನು ಸೈಕ್ಲಿಂಗ್‌ನಲ್ಲಿ ಕ್ರಮಿಸಿ ಅಪ್ರತಿಮ ಸಾಧನೆ ಮಾಡಿರುವ ರೈಡರ್ ನಂದಿನಿ ಮಿಥುನ್ ಈ ಜಾಥಾ ಕಾರ್ಯಕ್ರಮದಲ್ಲಿ ಭಾಗವಹಿಸಲಿರುವುದು ವಿಶೇಷವಾಗಿದೆ. ಅವರು ತಮ್ಮ ಅಸಾಧಾರಣ ಅನುಭವಗಳು ಮತ್ತು ಬದ್ಧತೆಯಿಂದ ಸಾಮಾಜಿಕ ಉದ್ದೇಶಗಳ ಕಡೆಗೆ ಯುವಕರನ್ನು ಪ್ರೇರೇಪಿಸಲಿದ್ದಾರೆ.



ಗಣ್ಯರು ಶಾಲೆಗಳು, ಕಾಲೇಜುಗಳು, ಮತ್ತು ಸಾರ್ವಜನಿಕ ವೇದಿಕೆಗಳಲ್ಲಿ ಭಾಗವಹಿಸಿ, ಯುವಜನತೆಗೆ ಉದ್ದೇಶಿತ ಜಾಗೃತಿ ಭಾಷಣಗಳು ಮತ್ತು ಸಂದೇಶಗಳನ್ನು ನೀಡಲಿದ್ದಾರೆ.

ಕರ್ನಾಟಕ ಸರ್ಕಾರವು ಈ ಜಾಥಾ ಕಾರ್ಯಕ್ರಮದ ಮೂಲಕ ಸಾರ್ವಜನಿಕರಿಗೆ ಮಾದಕ ದ್ರವ್ಯ ಮುಕ್ತ ಹಾಗೂ ಆರೋಗ್ಯಕರ ಸಮಾಜವನ್ನು ಸೃಷ್ಟಿಸುವ ಪ್ರಯತ್ನವಾಗಿ ಹಮ್ಮಿಕೊಳ್ಳುತ್ತಿದೆ.

ಗುಂಡ್ಲುಪೇಟೆಯಲ್ಲೂ ಸಂಭ್ರಮದ ಗೌರಿ ಹಬ್ಬ ಆಚರಣೆ

ಗುಂಡ್ಲುಪೇಟೆ, ಆ.26– ಪಟ್ಟಣ ಹಾಗೂ ತಾಲೂಕಿನಾದ್ಯಂತ ಗೌರಿ ಹಬ್ಬವನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ಮಂಗಳವಾರ ಸ್ವರ್ಣಗೌರಿ ಹಬ್ಬವನ್ನು ಮುತ್ತೈದೆಯರು ಹಾಗೂ ಮಕ್ಕಳು ಮುಂಜಾನೆಯಿಂದಲೇ ಪಟ್ಟಣದ ವಿವಿಧ ಭಾಗಗಳಲ್ಲಿ ಮತ್ತು ದೇವಾಲಯಗಳಲ್ಲಿ ತರಕಾರಿ, ಹಣ್ಣು ಹಾಗೂ ತಳಿರು ತೋರಣಗಳಿಂದ ನಿರ್ಮಿಸಿ ಪ್ರತಿಷ್ಠಾಪಿಸಲಾಗಿದ್ದ ಗೌರಿ ಗುಡಿಯಲ್ಲಿ ಸ್ವರ್ಣ ಗೌರಿಗೆ ಹೂವು, ಹಣ್ಣು, ಬಳೆ, ನೈವೇದ್ಯದೊಂದಿಗೆ ಹಾಗೂ ಬಾಗಿನ ಸಮರ್ಪಿಸುವುದರೊಂದಿಗೆ ಗೌರಿ ಹಬ್ಬವನ್ನು ಸಂಭ್ರಮ ಹಾಗೂ ಸಡಗರದಿಂದ ಆಚರಿಸಿದರು.

ಗೌರಿ ಹಬ್ಬದ ಹಿನ್ನೆಲೆಯಲ್ಲಿ ಪಟ್ಟಣದ ಶ್ರೀ ಪ್ರಸನ್ನ ಗಣಪತಿ ದೇವಾಲಯದಲ್ಲಿ ಪ್ರಧಾನ ಅರ್ಚಕ ನಾಗರಾಜಸ್ವಾಮಿ ಅವರ ನೇತೃತ್ವದಲ್ಲಿ ನಿರ್ಮಿಸಲಾಗಿದ್ದ ಗೌರಿ ಗುಡಿಯಲ್ಲಿ ಸರದಿ ಸಾಲಿನಲ್ಲಿ ನಿಂತು ಸುಮಂಗಲಿಯರು ಮಾತೆ ಗೌರಿಗೆ ಪೂಜೆ ಸಲ್ಲಿಸಿ ಪುನೀತರಾದರು. ಅಶ್ವಿನಿ ಬಡಾವಣೆಯ ಸರ್ವಸಿದ್ದಿ ವಿನಾಯಕ ದೇವಾಲಯದಲ್ಲಿ ಅರ್ಚಕ ಬಸವರಾಜು ಅವರ ಪೌರೋಹಿತ್ಯದಲ್ಲಿ ಗೌರಿ ಪೂಜೆಯನ್ನು ಮುತ್ತೈದೆಯರು ನೆರವೇರಿಸಿದರು. ಹಳೇ ಆಸ್ಪತ್ರೆ ರಸ್ತೆಯಲ್ಲಿರುವ ಬಲಮುರಿ ಗಣಪತಿ ದೇವಾಲಯದ ಪ್ರಧಾನ ಅರ್ಚಕ ವಿದ್ಯಾಶಂಕರ್ ಅವರ ಮನೆಯಲ್ಲಿ ನಿರ್ಮಿಸಲಾಗಿದ್ದ ಗೌರಿಗುಡಿಯಲ್ಲಿ ಮಹಿಳೆಯರು ಗೌರಿ ಪೂಜೆಯನ್ನು ನೆರವೇರಿಸಿದರು.


ಗುಂಡ್ಲುಪೇಟೆ ತಾಲೂಕಿನಾದ್ಯಂತ ಮಂಗಳವಾರ ಗೌರಿ ಹಬ್ಬವನ್ನು ಸಂಭ್ರಮ ಮತ್ತು ಸಡಗರದಿಂದ ಆಚರಿಸಲಾಯಿತು.

ಪಟ್ಟಣದ ಪುರಾತನ ಶ್ರೀರಾಮೇಶ್ವರ ದೇವಾಲಯದಲ್ಲಿ ಪ್ರಧಾನ ಅರ್ಚಕ ಶಂಕರನಾರಾಯಣ ಜೋಯಿಸ್ ನೇತೃತ್ವದಲ್ಲಿ ಸ್ವರ್ಣಗೌರಿ ಪ್ರತಿಷ್ಠಾಪನೆ ಮಾಡಲಾಗಿತ್ತು. ನೂರಾರು ಮಹಿಳೆ ಯರು ಸ್ವರ್ಣ ಗೌರಿಗೆ ಬಾಗಿನ ಸಲ್ಲಿಸಿ ಎಳೆಕಟ್ಟಿಸಿಕೊಂಡರು

ಗಣೇಶ ಹಬ್ಬಕ್ಕೆ ಖರೀದಿ ಭರಾಟೆ: ಒಂದೆಡೆ ಮಹಿಳೆಯರು ಸ್ವರ್ಣಗೌರಿ ಹಬ್ಬದ ಆಚರಣೆಯಲ್ಲಿ ನಿರತರಾಗಿದ್ದರೆ ಯುವಕರು ಮತ್ತು ಮಕ್ಕಳು ಸಂಭ್ರಮದ ಗಣೇಶ ಹಬ್ಬದ ಆಚರಣೆಗೆ ಭರದಿಂದ ಸಿದ್ದತೆ ನಡೆಸಿದ್ದಾರೆ.

ಸೆ.2ರಿಂದ ಕೊಳ್ಳೇಗಾಲ, ಯಳಂದೂರು ತಾಲೂಕು ಮಟ್ಟದ ದಸರಾ ಕ್ರೀಡಾಕೂಟ

ಚಾಮರಾಜನಗರ, ಆ.26– ಕೊಳ್ಳೇಗಾಲ ಮತ್ತು ಯಳಂದೂರು ತಾಲೂಕು ಮಟ್ಟದ ದಸರಾ ಕ್ರೀಡಾಕೂಟದ ವೈಯಕ್ತಿಕ ಹಾಗೂ ಗುಂಪು ಸ್ಪರ್ಧೆಗಳನ್ನು ಸೆ.2 ಮತ್ತು 3ರಂದು ಬೆಳಿಗ್ಗೆ 9 ಗಂಟೆಗೆ ಕೊಳ್ಳೆಗಾಲ ಪಟ್ಟಣದ ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣ ದಲ್ಲಿರುವ ತಾಲೂಕು ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದೆ.

ಅಥ್ಲೆಟಿಕ್ಸ್ ವಿಭಾಗದಲ್ಲಿ ಪುರುಷರಿಗೆ 100ಮೀ, 200ಮೀ, 400ಮೀ, 800ಮೀ, 1500ಮೀ, 5000ಮೀ, 10000ಮೀ ಓಟ, ಉದ್ದ ಜಿಗಿತ, ಎತ್ತರ ಜಿಗಿತ, ಗುಂಡು ಎಸೆತ, ಟ್ರಿಪಲ್ ಜಂಪ್, ಜಾವಲಿನ್ ಎಸೆತ, ಡಿಸ್ಕಸ್ ಎಸೆತ, 4x100 ಮೀ.ರಿಲೇ, 4x400 ಮೀ.ರಿಲೇ, 110ಮೀ ಹರ್ಡಲ್ಸ್, ವಾಲಿಬಾಲ್, ಕಬ್ಬಡಿ, ಖೋಖೋ, ಫುಟ್‌ಬಾಲ್, ಥ್ರೋಬಾಲ್, ಯೋಗಾಸನ (ವೀರಭದ್ರಾಸನ, ಜಾನು ಶಿರ್ಷಾಸನ, ಹಲಾಸನ ಹಾಗೂ ಧನುರಾಸನ) ಸ್ಪರ್ಧೆಗಳು ನಡೆಯಲಿವೆ.

ಅಥ್ಲೆಟಿಕ್ಸ್ ವಿಭಾಗದಲ್ಲಿ ಮಹಿಳೆಯರಿಗೆ 100ಮೀ, 200ಮೀ, 400ಮೀ, 800ಮೀ, 1500ಮೀ, 3000ಮೀ ಓಟ, ಉದ್ದ ಜಿಗಿತ, ಎತ್ತರ ಜಿಗಿತ, ಗುಂಡು ಎಸೆತ, ಜಾವಲಿನ್ ಎಸೆತ, ಡಿಸ್ಕಸ್ ಎಸೆತ, ಟ್ರಿಪಲ್ ಜಂಪ್, 4x100 ಮೀ.ರಿಲೇ, 4x400 ಮೀ.ರಿಲೇ, 100ಮೀ ಹರ್ಡಲ್ಸ್, ವಾಲಿಬಾಲ್, ಕಬ್ಬಡಿ, ಖೋಖೋ, ಥ್ರೋಬಾಲ್, ಯೋಗಾಸನ ಸ್ಪರ್ಧೆಗಳು ನಡೆಯಲಿವೆ.

ತಾಲೂಕು ಮಟ್ಟದಲ್ಲಿ ಭಾಗವಹಿಸುವ ಸ್ಪರ್ಧಿಗಳಿಗೆ ಯಾವುದೇ ಪ್ರಯಾಣಭತ್ಯೆ ಹಾಗೂ ದಿನಭತ್ಯೆ ನೀಡಲಾಗುವುದಿಲ್ಲ. ಸ್ಪರ್ಧಿಗಳು ಸೂಚಿಸಿರುವ ಸ್ಥಳ ಮತ್ತು ದಿನಾಂಕದಂದು ಬೆಳಿಗ್ಗೆ 9 ಗಂಟೆಗೆ ಹಾಜರಾಗಿ ವರದಿ ಮಾಡಿಕೊಳ್ಳಬೇಕು.

ತಾಲೂಕು ಮಟ್ಟದಲ್ಲಿ ವೈಯಕ್ತಿಕ ಸ್ಪರ್ಧೆಯಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದವರು ಮತ್ತು ಗುಂಪು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದವರು ಜಿಲ್ಲಾ ಮಟ್ಟದಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ ನಡೆಯುವ ದಿನಾಂಕವನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ. 08226–224932, 9845004610, 9945615695, 9880211027, 9916466659 ಸಂಪರ್ಕಿಸಬಹುದು

ಧರ್ಮಸ್ಥಳದಲ್ಲಿ ನನ್ನ ಪತಿ ಯಾವುದೇ ಶವ ಹೂತಿದ್ದ ವಿಚಾರ ನನ್ನೊಂದಿಗೆ ಹೇಳಿರಲಿಲ್ಲ

ಮಾಸ್ಕ್ ಮ್ಯಾನ್ ಚಿನ್ನಯ್ಯನ ಎರಡನೇ ಪತ್ನಿ ಮಲ್ಲಿಕಾ ಸ್ಪಷ್ಟನೆ



ಚಾಮರಾಜನಗರ: ನನ್ನ ಪತಿ ಧರ್ಮಸ್ಥಳದಲ್ಲಿ ಯಾವುದೇ ಶವ ಹೂತಿದ್ದ ಬಗ್ಗೆ ನನ್ನೊಂದಿಗೆ ಯಾವತ್ತೂ ಹೇಳಿರಲಿಲ್ಲ, ಅಲ್ಲದೇ ನಾನು ನನ್ನ ಪತಿ ಯಾವುದೇ ಧರ್ಮಕ್ಕೂ ಮತಾಂತರವೂ ಆಗಿಲ್ಲ ಎಂದು ಮಾಸ್ಕ್‌ಮ್ಯಾನ್ ಚಿನ್ನಯ್ಯನ ಎರಡನೇ ಪತ್ನಿ ಮಲ್ಲಿಕಾ ಹೇಳಿದರು.

ತಮಿಳುನಾಡಿನ ಸತ್ಯಮಂಗಲಂ ತಾಲೂಕಿನ ಚಿಕ್ಕರಸಂಪಾಳ್ಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ನನ್ನ ಪತಿ ಚಿನ್ನಯ್ಯ ಎರಡೂವರೆ ತಿಂಗಳ ಹಿಂದೆ ಕೂಲಿ ಕೆಲಸಕ್ಕೆಂದು ಹೋದವನು ಮತ್ತೆ ಬಂದಿಲ್ಲ. ನಾನು ಹಾಗೂ ನನ್ನ ಗಂಡ ಯಾವುದೇ ಧರ್ಮಕ್ಕೆ ಮತಾಂತರವಾಗಿಲ್ಲ. ಅವರ ಅಣ್ಣ ಒಬ್ಬರು ಕ್ರೈಸ್ತ ಪಾದ್ರಿ, ಅವರು ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಕೆಲಸವನ್ನು ಚಿನ್ನಯ್ಯ ಮಾಡುತ್ತಿದ್ದರು. ಅವರು ಯಾವುದೇ ಕಾರಣಕ್ಕೂ ಮತಾಂತರವಾಗಿರಲಿಲ್ಲ ಎಂದು ತಿಳಿಸಿದರು.



ಧರ್ಮಸ್ಥಳದಲ್ಲಿ ಹಿಂದೆ ಕೆಲಸ ಮಾಡುತ್ತಿದ್ದ ವೇಳೆ ಯಾವುದೇ ಸಾವಿನ ವಿಚಾರದ ಬಗ್ಗೆ ನನ್ನ ಜೊತೆಗೆ ಯಾವಾಗಲೂ ಚರ್ಚಿಸಿಲ್ಲ ನಾವು ಕೂಡ ಮಂಜುನಾಥ ಸ್ವಾಮಿಯ ಆರಾಧನೆ ಮಾಡುತ್ತೇವೆ. ನಾನು ಕೂಡ ಧರ್ಮ ಸ್ಥಳದಲ್ಲಿ ಕ್ಲೀನಿಂಗ್ ಕೆಲಸ ಮಾಡುತ್ತಿದ್ದೆ. ಧರ್ಮಸ್ಥಳದಿಂದ ಬಂದ ಬಳಿಕ ನಾವು ತಮಿಳುನಾಡಿನ ಸತ್ಯಂಮಂಗಲಂ ಚಿಕ್ಕರಸಂಪಾಳ್ಯಂದಲ್ಲಿ ವಾಸವಿದ್ದೇವೆ ಎಂದರು.

ಏನು ಗೊತ್ತಿಲ್ಲ: ನನ್ನ ಪತಿ ಚಿನ್ನಯ್ಯ ಅವರ ಹಿಂದೆ ಯಾರಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಧರ್ಮಸ್ಥಳದಲ್ಲಿ 7 ವರ್ಷ ಇದ್ದೆವು. ಇಲ್ಲಿಗೆ ಬಂದು 11 ವರ್ಷ ಆಯ್ತು, ಈಗ ನನಗೆ ಯಾರೂ ಆಧಾರವಿಲ್ಲ, ಇಬ್ಬರು ಮಕ್ಕಳಿದ್ದಾರೆ ಎಂದು ಕಣ್ಣೀರು ಸುರಿಸಿದರು. ಎಸ್‌ಐಟಿ ಪೊಲೀಸರು ಕೂಡ ಬಂದು ವಿಚಾರಿಸಿ ಹೋಗಿದ್ದಾರೆ ಎಂದು ಮಲ್ಲಿಕಾ ತಿಳಿಸಿದರು.

ಸೆ.1, ಮೈಸೂರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ

• ಸಮರೋಪಾದಿಯಲ್ಲಿ ಸಿದ್ಧತಾ ಕಾರ್ಯ • ಸೆಪ್ಟೆಂಬರ್ 1 ಮತ್ತು 2ರಂದು ಎಂ.ಜಿ.ರಸ್ತೆ, ಮೈಸೂರು ಅರಮನೆ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಮಾರ್ಗ ಸಂಚಾರಕ್ಕೆ ನಿರ್ಬಂಧ; ಕಟ್ಟುನಿಟ್ಟಿನ ಶಿಷ್ಟಾಚಾರ ಪಾಲನೆಗೆ ಡಿಸಿ ಸೂಚನೆ



ಮೈಸೂರು, ಆ.26(ಬಿಎಲ್‌ಯು, ಬಿಎನ್‌ಆರ್, ಬಿಸಿಟಿ)– ಮೈಸೂರಿನ ಮಾನಸ ಗಂಗೋತ್ರಿಯ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ವಜ್ರ ಮಹೋತ್ಸವ (60ನೇ ವಾರ್ಷಿಕೋತ್ಸವ) ಸಮಾರಂಭದಲ್ಲಿ ಪಾಲ್ಗೊಳ್ಳಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೆಪ್ಟೆಂಬರ್ 1ರಂದು ಸಾಂಸ್ಕೃತಿಕ ನಗರಿ ಮೈಸೂರಿಗೆ ಆಗಮಿಸಲಿದ್ದಾರೆ. ರಾಷ್ಟ್ರಪತಿಗಳ ಭೇಟಿಯ ಹಿನ್ನೆಲೆಯಲ್ಲಿ ಅರಮನೆ ನಗರಿಯಲ್ಲಿ ಭರದ ಸಿದ್ಧತೆಗಳು ಸಾಗಿವೆ.

ರಾಷ್ಟ್ರಪತಿಗಳ ಭೇಟಿ ಹಿನ್ನೆಲೆಯಲ್ಲಿ ಶಿಷ್ಟಾಚಾರದಂತೆ ಹಲವು ಭದ್ರತಾ ಕ್ರಮ ಕೈಗೊಳ್ಳಲಾಗುತ್ತಿದೆ. ಯಾವುದೇ ರೀತಿಯ ಅಹಿತಕರ ಘಟನೆಗೆ ಅವಕಾಶ ನೀಡದಂತೆ ಸ್ಥಳೀಯ ಪೊಲೀಸರು ಬಿಗಿ ಬಂದೋಬಸ್ತ್ ಮಾಡಲು ಸಿದ್ಧತೆ ಮಾಡಿಕೊಂಡಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೆಪ್ಟೆಂಬರ್ 1ರಂದು ಬೆಳಿಗ್ಗೆ ನವದೆಹಲಿಯಿಂದ ವಿಶೇಷ ವಿಮಾನದಲ್ಲಿ ಮೈಸೂರಿಗೆ ಆಗಮಿಸುವರು. ನಗರದ ರ್‍ಯಾಡಿಸನ್ ಬ್ಲೂ ಹೋಟೆಲ್‌ಗೆ ಆಗಮಿಸುವ ದ್ರೌಪದಿ ಮುರ್ಮು ಅವರು ಅಂದು ಸಂಜೆ 4 ಗಂಟೆಗೆ ನಗರದ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ವಜ್ರ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಈ ಕಾರ್ಯಕ್ರಮದ ನಂತರ ಸಂಜೆ ಚಾಮುಂಡಿಬೆಟ್ಟಕ್ಕೆ ತೆರಳಿ ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸುವರು. ರಾಷ್ಟ್ರಪತಿಗಳ ಭೇಟಿ ಹಿನ್ನೆಲೆಯಲ್ಲಿ ನಗರದಲ್ಲಿ ಸಮರೋಪಾದಿಯಲ್ಲಿ ಸಿದ್ಧತಾ ಕಾರ್ಯ ನಡೆಯುತ್ತಿದೆ.

ರಾಷ್ಟ್ರಪತಿಗಳು ವಿಶೇಷ ವಿಮಾನದಲ್ಲಿ ಆಗಮಿಸುವ ಮೈಸೂರು ವಿಮಾನ ನಿಲ್ದಾಣ, ಅವರು ಸಾಗುವ ಮಾರ್ಗ, ವಾಸ್ತವ್ಯ ಹೂಡುವ ಹೋಟೆಲ್ ಹಾಗೂ ಅವರು ಪಾಲ್ಗೊಳ್ಳುವ ಸಮಾರಂಭದ ಸ್ಥಳವನ್ನು ಈಗಾಗಲೇ ಸ್ಥಳೀಯ ಪೊಲೀಸರು ಪರಿಶೀಲನೆ ಮಾಡಿದ್ದಾರೆ. ಭದ್ರತೆಯಲ್ಲಿ ಯಾವುದೇ ಲೋಪದೋಷಗಳು ಎದುರಾಗದಂತೆ ಮುನ್ನೆಚ್ಚರಿಕಾ ಕ್ರಮ ವಹಿಸಿದ್ದಾರೆ.

ಸೆಪ್ಟೆಂಬರ್ 1ರಂದು ರಾಷ್ಟ್ರಪತಿಗಳು ಮೈಸೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ನಗರದ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಲಿದ್ದು, ಅಲ್ಲಿನ ವ್ಯವಸ್ಥೆಗಳನ್ನು ಈಗಾಗಲೇ ಸ್ಥಳೀಯ ಪೊಲೀಸರು ಪರಿಶೀಲನೆ ನಡೆಸಿದ್ದಾರೆ.

ರಾಷ್ಟ್ರಪತಿ ಭವನದಿಂದ ಅಧಿಕೃತ ಪ್ರವಾಸ ಕಾರ್ಯಕ್ರಮ(ಟಿಪಿ)ದ ಪಟ್ಟಿ ಜಿಲ್ಲಾಡಳಿತಕ್ಕೆ ಇನ್ನು ಬಂದಿಲ್ಲ. ರಾಷ್ಟ್ರಪತಿಗಳ ಮೈಸೂರು ಭೇಟಿಯನ್ನು ರಾಷ್ಟ್ರಪತಿ ಭವನ ದೃಢಪಡಿಸಿದ ನಂತರ ರಾಷ್ಟ್ರಪತಿಗಳು ಸಾಗುವ ಮಾರ್ಗವನ್ನು ನಿರ್ಧರಿಸಲಾಗುತ್ತದೆ. ಜೊತೆಗೆ ಯಾವ ಮಾರ್ಗದಲ್ಲಿ ಸಾರ್ವಜನಿಕ ವಾಹನಗಳ ನಿರ್ಬಂಧಿಸಬೇಕು ಎಂದು ತೀರ್ಮಾನಿಸಲಾಗುವುದು ಎಂದು ಸಂಚಾರ ವಿಭಾಗದ ಎಸಿಪಿ ಶಿವಶಂಕರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ರಾಷ್ಟ್ರಪತಿಗಳ ಮೈಸೂರು ಭೇಟಿ ಸಮಯದಲ್ಲಿ ಯಾವುದೇ ಲೋಪದೋಷಗಳಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಜೊತೆಗೆ ಶಿಷ್ಟಾಚಾರವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅವರು ಪೊಲೀಸ್, ಕಂದಾಯ, ಆರೋಗ್ಯ ಸೇರಿದಂತೆ ಇತರೆ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ರಾಷ್ಟ್ರಪತಿಗಳು ಸಂಚರಿಸುವ ಮಾರ್ಗದಲ್ಲಿ ವಾಹನ ಸಂಚಾರ ರದ್ದು ಮಾಡಲಾಗುವುದು. ಮೈಸೂರು ವಿಮಾನ ನಿಲ್ದಾಣದಿಂದ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್, ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಿಂದ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಮಾರ್ಗದಲ್ಲಿ ಸಾರ್ವಜನಿಕ ವಾಹನ ನಿರ್ಬಂಧಿಸಲಾಗುವುದು. ಅಷ್ಟೆ ಅಲ್ಲದೆ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಿಂದ ಮೈಸೂರು ಅರಮನೆ ಹಾಗೂ ಚಾಮುಂಡಿಬೆಟ್ಟದ ಮಾರ್ಗದಲ್ಲಿ ಕೂಡ ಸಾರ್ವಜನಿಕ ಸಂಚಾರಕ್ಕೆ ನಿರ್ಬಂಧ ಹೇರಲಾಗುವುದು.

ಈ ಹಿನ್ನೆಲೆ ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಚಾರಕ್ಕೆ ಪರ್ಯಾಯ ಮಾರ್ಗ ಗೊತ್ತು ಮಾಡಿಕೊಳ್ಳುವಂತೆ ಈಗಾಗಲೇ ಕೆಎಸ್‌ಆರ್‌ಟಿಸಿಯ ವಿಭಾಗೀಯ ನಿಯಂತ್ರಣಾಧಿಕಾರಿ ಅವರಿಗೆ ಸೂಚನೆ ನೀಡಲಾಗಿದೆ ಎಂದು ಶಿವಶಂಕರ್ ತಿಳಿಸಿದರು.

ರಾಷ್ಟ್ರಪತಿಗಳು ಪ್ರಯಾಣಿಸುವ ಮಾರ್ಗದ ಎಲ್ಲಾ ರಸ್ತೆಗಳ ಹಳ್ಳ ಮುಚ್ಚಿ ಡಾಂಬರೀಕರಣ ಮಾಡಲಾಗಿದೆ. ರ್‍ಯಾಡಿಸನ್ ಬ್ಲೂ ಹೋಟೆಲ್‌ನಿಂದ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆವರೆಗೆ ಸ್ವಚ್ಛತಾ ಕಾರ್ಯ ಭರದಿಂದ ಸಾಗಿದೆ. ರಸ್ತೆಯ ಇಕ್ಕೆಲಗಳಲ್ಲಿ ಬೆಳೆದಿರುವ ಗಿಡಗಳನ್ನು ತೆರವು ಮಾಡಲಾಗುತ್ತಿದೆ.

ನಗರಪಾಲಿಕೆ ಮುಂಭಾಗದ ರಸ್ತೆ ಕಾಡಾ ಕಚೇರಿ ರಸ್ತೆ ಬಸವೇಶ್ವರ ವೃತ್ತದತ್ತ ಜೆಎಸ್‌ಎಸ್ ವಿದ್ಯಾಪೀಠದ ಬಳಿ ರಸ್ತೆಗಳ ಹೊಂಡಗಳನ್ನು ಮುಚ್ಚಿ ಡಾಂಬರೀಕರಣ ಮಾಡಲಾಗಿದೆ.

ಸೆ.1ರಂದು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಸೇವೆ ರದ್ದು

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಭೇಟಿ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 1ರಂದು ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಚಿಕಿತ್ಸಾ ಸೇವೆಯನ್ನು ರದ್ದು ಮಾಡಲಾಗಿದೆ.

ರಾಷ್ಟ್ರಪತಿಗಳ ಭೇಟಿ ಹಿನ್ನೆಲೆಯಲ್ಲಿ ಸಂಸ್ಥೆಯ ಆಯ್ದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಸಾರ್ವಜನಿಕರಿಗೆ ಪ್ರವೇಶ ನಿರ್ಬಂಧಿಸಲಾಗಿದೆ ಅಂದು ಸಾರ್ವಜನಿಕರು ಸಂಸ್ಥೆಗೆ ಭೇಟಿ ನೀಡದಂತೆ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕಿ ಡಾ.ಎಂ.ಪುಷ್ಪಾವತಿ ಸಲಹೆ ನೀಡಿದ್ದಾರೆ.

ಸೆ.2ರಂದು ಮೈಸೂರು ಅರಮನೆಗೆ ದ್ರೌಪದಿ ಮುರ್ಮು ಭೇಟಿ

ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರ ಆಹ್ವಾನದ ಮೇರೆಗೆ ಸೆ.2ರಂದು ಬೆಳಗ್ಗೆ 8.30 ಗಂಟೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮೈಸೂರು ಅರಮನೆಗೆ ಭೇಟಿ ನೀಡುವರು.

ರಾಷ್ಟ್ರಪತಿಗಳ ಭೇಟಿ ಹಿನ್ನೆಲೆಯಲ್ಲಿ ಅಂದು ಮೈಸೂರು ಅರಮನೆಯಲ್ಲಿ ನಡೆಯುವ ಧ್ವನಿ ಮತ್ತು ಬೆಳಕು (ಸೌಂಡ್ ಅಂಡ್ ಲೈಟ್) ಕಾರ್ಯಕ್ರಮ ರದ್ದು ಮಾಡಲಾಗಿದೆ. ಅಲ್ಲದೆ ಸೆ.2ರಂದು ಬೆಳಿಗ್ಗೆ 11.30ರವರೆಗೆ ಮೈಸೂರು ಅರಮನೆಗೆ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ಮೈಸೂರು ಅರಮನೆ ಮಂಡಳಿ ಕಾರ್ಯನಿರ್ವಾಹಕ ಅಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದ್ದಾರೆ. ಸೆ.2ರಂದು ಎಲ್ಲಾ ಕಾರ್ಯಕ್ರಮ ಮುಗಿಸಿದ ನಂತರ ರಾಷ್ಟ್ರಪತಿಗಳು ಮೈಸೂರು ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ದೆಹಲಿಗೆ ತೆರಳುವರು.

ಎರಡು ದಿನದ ಪ್ರವಾಸ, ಮೂರು ಕಾರ್ಯಕ್ರಮ

ರಾಷ್ಟ್ರಪತಿಗಳು, ಎರಡು ದಿನಗಳ ಪ್ರವಾಸದಲ್ಲಿ ಮೈಸೂರಿನ ಮೂರು ಸ್ಥಳಗಳಿಗೆ ಭೇಟಿ ನೀಡಲಿದ್ದಾರೆ. ಸೆ.1ರಂದು ಮೈಸೂರಿಗೆ ಭೇಟಿ ನೀಡುವ ರಾಷ್ಟ್ರಪತಿಗಳು ಅಂದು ಸಂಜೆ 4 ಗಂಟೆ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ವಜ್ರ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಈ ಕಾರ್ಯಕ್ರಮದ ನಂತರ ಸಂಜೆ ಚಾಮುಂಡಿ ಬೆಟ್ಟಕ್ಕೆ ತೆರಳಿ ದೇವರ ದರ್ಶನ ಪಡೆಯಲಿದ್ದಾರೆ. ಪ್ರಮೋದಾದೇವಿ ಒಡೆಯರ್ ಅವರ ಆಹ್ವಾನದ ಮೇರೆಗೆ ಸೆ.2ರಂದು ಬೆಳಿಗ್ಗೆ ಮೈಸೂರು ಅರಮನೆಗೆ ಭೇಟಿ ನೀಡಲಿದ್ದಾರೆ.

– **ಜಿ.ಲಕ್ಷ್ಮಿಕಾಂತರೆಡ್ಡಿ**, ಜಿಲ್ಲಾಧಿಕಾರಿ, ಮೈಸೂರು

ವೇಶ್ಯಾವಾಟಿಕೆ: ಮಹಿಳೆ ಪೊಲೀಸ್ ವಶಕ್ಕೆ

ಮೈಸೂರು, ಆ.26– ವೇಶ್ಯಾವಾಟಿಕೆ ನಡೆಸುತ್ತಿದ್ದ ಮನೆ ಮೇಲೆ ಪೊಲೀಸರು ದಾಳಿ ನಡೆಸಿ, ಮಹಿಳೆಯನ್ನು ವಶಕ್ಕೆ ಪಡೆದ ಘಟನೆ ಗೋಕುಲಂ ಬಡಾವಣೆಯಲ್ಲಿ ಸೋಮವಾರ ಸಂಜೆ ನಡೆದಿದೆ.

ಗೋಕುಲಂ ಮೂರನೇ ಹಂತ, 2ನೇ ಕ್ರಾಸ್‌ನಲ್ಲಿ 10–20 ದಿನಗಳ ಹಿಂದೆಯಷ್ಟೇ ಬಾಡಿಗೆ ಪಡೆದಿದ್ದ ಮನೆಯಲ್ಲಿ ವೇಶ್ಯಾವಾಟಿಕೆ ನಡೆಸಲಾಗುತ್ತಿತ್ತು. ಈ ಬಗ್ಗೆ ಖಚಿತ ಮಾಹಿತಿ ತಿಳಿದ ಸಿಸಿಬಿ ಹಾಗೂ ವಿವಿಪುರಂ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ, ವೇಶ್ಯಾವಾಟಿಕೆ ನಡೆಸುತ್ತಿದ್ದ ಮಹಿಳೆಯನ್ನು ವಶಕ್ಕೆ ಪಡೆದಿದ್ದಾರೆ. ಜಾಲದಲ್ಲಿ ಸಿಲುಕಿದ್ದ ಇಬ್ಬರು ಮಹಿಳೆಯರ ರಕ್ಷಿಸಿ, ಇಬ್ಬರು ಯುವಕರನ್ನು ಠಾಣೆಗೆ ಕರೆದೊಯ್ದು ತಿಳುವಳಿಕೆ ನೀಡಿ ಕಳುಹಿಸಿದ್ದಾರೆ. ಈ ಸಂಬಂಧ ವಿವಿ ಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದಸರಾ ಉದ್ಘಾಟನೆಗೆ ಬಾನು ಮುಷ್ತಾಕರಿಗೆ ಆಹ್ವಾನ; ಕರ್ನಾಟಕ ಪ್ರಜಾ ಪಾರ್ಟಿ ಸ್ವಾಗತ



ಮೈಸೂರು, ಆ.26– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಉದ್ಘಾಟನೆಗೆ ಬೂಕರ್ ಪ್ರಶಸ್ತಿ ವಿಜೇತರಾದ ಸಾಹಿತಿ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವುದು ಒಳ್ಳೆಯ ಬೆಳವಣಿಗೆ ಎಂದು ಕರ್ನಾಟಕ ಪ್ರಜಾಪಾರ್ಟಿ(ರೈತಪರ್ವ) ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ ಅಭಿಪ್ರಾಯಿಸಿದ್ದಾರೆ.

ಸಾಮಾಜಿಕ ಸಾಮರಸ್ಯದ ದೃಷ್ಟಿಯಿಂದ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವ ಸರ್ಕಾರದ ನಿರ್ಧಾರವನ್ನು, ಎಲ್ಲಾ ಪಕ್ಷದ ನಾಯಕರೂ ಒಮ್ಮತದಿಂದ ಒಪ್ಪಬೇಕಾಗುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕ ಪ್ರಜಾಪಾರ್ಟಿ(ರೈತ ಪರ್ವ) ವತಿಯಿಂದ ಶ್ರೀಮತಿ ಬಾನು ಮುಷ್ತಾಕ್ ಅವರಿಗೆ ದಸರಾ ಉದ್ಘಾಟನೆಗೆ ಆತ್ಮೀಯ ಹಾಗೂ ಹೃದಯಸ್ಪರ್ಶಿ ಸ್ವಾಗತ ಕೋರಲಾಗುತ್ತಿದೆ. ಹಾಗೆಯೇ ದಸರಾ ಉದ್ಘಾಟನೆ ವೇಳೆ ಸಾಂಪ್ರದಾಯಿಕ ಪೂಜೆ ಪುನಸ್ಕಾರಗಳಿಗೆ ಅಪಚಾರವಾಗದಂತೆ ಹಾಗೂ ಜನರ ಭಾವನೆಗಳಿಗೆ ಧಕ್ಕೆಯಾಗದಂತೆ ಎಚ್ಚರಿಕೆ ವಹಿಸುವಂತೆ ಸರ್ಕಾರಕ್ಕೆ ಮನವಿ ಮಾಡುತ್ತಿದೆ ಎಂದು ಶಿವಣ್ಣ, ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾನು ಮುಷ್ತಾಕ್ ಅವರಿಗೆ ಅಭಿನಂದನೆ



ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಉದ್ಘಾಟನೆಗೆ ಆಯ್ಕೆಯಾಗಿರುವ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ವಿಜೇತರಾದ ಸಾಹಿತಿ ಬಾನು ಮುಷ್ತಾಕ್ ಅವರನ್ನು ಹಾಸನದ ಅವರ ನಿವಾಸದಲ್ಲಿ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಮೈಸೂರಿನ ಹೆಗ್ಗುರುತುಗಳಾದ ಮೈಸೂರು ಮಲ್ಲಿಗೆ, ಮೈಸೂರು ವೀಳ್ಯದೆಲೆ, ಮೈಸೂರ್ ಪಾಕ್, ಮೈಸೂರ್ ಸಿಲ್ಕ್ ಶಾಲು ಮತ್ತು ನಂಜನಗೂಡು ರಸಬಾಳೆಯನ್ನು ನೀಡಿ ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದೀಪಕ್ ಶಿವಣ್ಣ, ಮೈಸೂರು ನಗರ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರತಾಪ್, ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ನಿಶಾಂತ್ ಪಟೇಲ್, ಪ್ರಧಾನ ಕಾರ್ಯದರ್ಶಿಗಳಾದ ಚಂದ್ರು ಎನ್, ಮಂಜೇಶ್ ವಿರಾಟ್ ಗೌಡ, ಚೇತನ್ ರಾಜ್ ಉಪಸ್ಥಿತರಿದ್ದರು

ಜೈ ಸಂತೋಷ್ ನಾಯಕ್‌ಗೆ ಪಿಹೆಚ್.ಡಿ



ಮೈಸೂರು: ಡಾ. ಹೆಚ್.ಪಿ. ಜ್ಯೋತಿ ಅವರ ಮಾರ್ಗದರ್ಶನದಲ್ಲಿ ಜೈ ಸಂತೋಷ್ ನಾಯಕ್ ಕೆ. ಅವರು ಸಮಾಜ ಕಾರ್ಯ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಯಾದವಗಿರಿ ನಿವಾಸಿಗಳ ಮಾದರಿ ನಿಲುವು

ತಮ್ಮ ವಾರ್ಡ್ ಸಮಸ್ಯೆಗಳಿಗೆ ತಾವೇ ಪರಿಹಾರ ಕಂಡುಕೊಳ್ಳುವ ನಿರ್ಧಾರ



ವಾರ್ಡ್ ಸಮಸ್ಯೆಗಳನ್ನು ಚರ್ಚಿಸಿ, ಅವುಗಳಿಗೆ ಪರಿಹಾರ ಕಂಡುಕೊಳ್ಳಲು ಮೈಗ್ರಾಪ ಸದಸ್ಯರು ಮತ್ತು ಯಾದವಗಿರಿಯ 60ಕ್ಕೂ ಹೆಚ್ಚು ಸ್ಥಳೀಯ ನಿವಾಸಿಗಳು ಒಗ್ಗೂಡಿ ಚೆಲುವಾಂಬ ಪಾರ್ಕ್‌ನಲ್ಲಿ ಸಮಸ್ಯೆ ಕುರಿತು ಸಭೆ ನಡೆಸಿದರು.

ಮೈಸೂರು, ಆ.26(ಎಸ್‌ಪಿಎನ್)– ಸ್ಥಳೀಯ ಆಡಳಿತವನ್ನು ವಿಕೇಂದ್ರೀಕರಿಸುವ ಕಾರ್ಯ ಮೈಸೂರು ನಗರ ವ್ಯಾಪ್ತಿಯಲ್ಲಿ ಮಂದಗತಿಯಾದರೂ 74ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆಯನ್ನು ಪಾಲಿಕೆ ವ್ಯಾಪ್ತಿಯಲ್ಲಿ ಜಾರಿಗೆ ತರುವ ಪ್ರಯತ್ನ ನಡೆದಿದೆ. ಇಲ್ಲಿನ ವಾರ್ಡ್ ಸಮಸ್ಯೆಗಳನ್ನು ಚರ್ಚಿಸಿ, ಅವುಗಳಿಗೆ ಪರಿಹಾರ ಕಂಡುಕೊಳ್ಳಲು ಮೈಸೂರು ಗ್ರಾಹಕ ಪರಿಷತ್ ಸದಸ್ಯರು ಮತ್ತು ಯಾದವಗಿರಿಯ 60ಕ್ಕೂ ಹೆಚ್ಚು ಸ್ಥಳೀಯ ನಿವಾಸಿಗಳು ಒಗ್ಗೂಡಿ ಚೆಲುವಾಂಬ ಪಾರ್ಕ್‌ನಲ್ಲಿ ಸಮಸ್ಯೆ ಕುರಿತು ಸಭೆ ನಡೆಸಿದರು.

ಯಾದವಗಿರಿ ಸ್ವಚ್ಛತಾ ಉಸ್ತುವಾರಿ ಹೊಂದಿರುವ ಎಂಸಿಸಿ ಮೇಲ್ವಿಚಾರಕ ಪುಟ್ಟಸ್ವಾಮಿ ಮಾತನಾಡಿ, ಬಡಾವಣೆಯ ಕೆಲ ನಿವಾಸಿಗಳು, ಖಾಲಿ ನಿವೇಶನ, ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆದು ಹೋಗುತ್ತಿದ್ದಾರೆ. ಇದರಿಂದ ಕೆಲ ಸಮಸ್ಯೆಗಳು ಉಂಟಾಗುತ್ತಿದ್ದು, ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ದಂಡಾಸ್ತ್ರ ಪ್ರಯೋಗಿಸುವ ಎಚ್ಚರಿಕೆಯ ಫಲಕಗಳನ್ನು ಅಳವಡಿಸಿ, ನಿವಾಸಿಗಳಲ್ಲಿ ಮನವಿ ಮಾಡಿದ್ದರೂ ಆರು ಖಾಲಿ ಸ್ಥಳಗಳಲ್ಲಿ ಕಸದ ಗುಡ್ಡೆ ಹಾಕುತ್ತಿರುವುದಕ್ಕೆ ತೀವ್ರ ಬೇಸರ ವ್ಯಕ್ತಪಡಿಸಿದರು.

ಸಭೆಯಲ್ಲಿ ಪ್ರಮುಖವಾಗಿ ಈ ಬಡಾವಣೆಯ ಸ್ವಚ್ಛತೆಗೆ ಆದ್ಯತೆ ನೀಡುವುದು. ಸುರಕ್ಷಿತ ಸಂಚಾರಕ್ಕಾಗಿ ಗುಂಡಿಮುಕ್ತ ರಸ್ತೆಗೆ ಬೇಡಿಕೆ ಮತ್ತು ಕುಡಿದು ವಾಹನ ಚಲಾಯಿಸುವವರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಚರ್ಚಿಸಲಾಯಿತು. ಈ ಬಡಾವಣೆಯ ಪ್ರಮುಖ ರಸ್ತೆಗಳಲ್ಲಿ ನಿಷ್ಕ್ರಿಯ ಬೀದಿ ದೀಪಗಳನ್ನು ಸರಿಪಡಿಸುವುದು. ಮನೆಗಳ ಮುಂಭಾಗ ಗಿಡ ನೆಟ್ಟು ಪೋಷಿಸುವ ನಿವಾಸಿಗಳನ್ನು ಗುರುತಿಸುವುದು. ರಾಮಕೃಷ್ಣಾಶ್ರಮ ವಿದ್ಯಾಶಾಲೆಯಿಂದ ಪರಮಹಂಸ ರಸ್ತೆವರೆಗೆ ಫುಟ್‌ಪಾತ್ ಅಭಿವೃದ್ಧಿ ಕಳಪೆಯಿಂದ ಕೂಡಿದ್ದು, ಈ ಕಾಮಗಾರಿ ಕೈಗೊಂಡಿರುವ ಗುತ್ತಿಗೆದಾರರ ವಿರುದ್ಧ ಬೇರೆಬೇರೆ ಸಕ್ಷಮ ಪ್ರಾಧಿಕಾರಗಳಲ್ಲಿ ದೂರು ದಾಖಲಿಸಲು ನಿರ್ಧಾರ ಕೈಗೊಳ್ಳಲಾಯಿತು.

ಸಾರ್ವಜನಿಕ ಸ್ಥಳದಲ್ಲಿ ಕಸ ಗುಡ್ಡೆ ಹಾಕುವವರನ್ನು ಪತ್ತೆ ಹಚ್ಚಲು ಸಿಸಿಟಿವಿ ಅಳವಡಿಸುವುದೇ ಸೂಕ್ತ ಎಂಬುದನ್ನು ನಿರ್ಧರಿಸಿ, ಈ ಸ್ಥಳಗಳಲ್ಲಿ ಕಸ ಹಾಕುವವರನ್ನು ಗುರುತಿಸಲು ಸಿಸಿಟಿವಿಯಿದೆ ಅಂತಹವರಿಗೆ ದಂಡ ವಿಧಿಸಲಾಗುವುದು ಎಂಬ ಎಚ್ಚರಿಕೆಯ ಸೂಚನಾ ಫಲಕಗಳನ್ನು ಅಳವಡಿಸುವುದು ಸೂಕ್ತ ಎಂಬ ತೀರ್ಮಾನಕ್ಕೆ ಬರಲಾಯಿತು.

ಕೆಆರ್‌ಎಸ್ ರಸ್ತೆಯ ಚೆಲುವಾಂಬ ಉದ್ಯಾನವನದ ಬಳಿ ಆರು ರಸ್ತೆಗಳು ಕೂಡುವ ವೃತ್ತವಾಗಿದೆ. ಈ ಸ್ಥಳದಲ್ಲಿ ಸಂಚಾರಿ ಬೀದಿ ದೀಪಗಳ ಸುಧಾರಿಸಬೇಕು. ವಾಹನ ಪಾರ್ಕಿಂಗ್ ವಲಯದ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ಸಭೆಯಲ್ಲಿ ಹಾಜರಿದ್ದ ವಿವಿ ಮೊಹಲ್ಲಾ ಸಂಚಾರಿ ಪೊಲೀಸ್ ಠಾಣೆ ಎಸ್ಐ ಮೋಹನ್ ಕುಮಾರ್ ಅವರಲ್ಲಿ ಮನವಿ ಮಾಡಲಾಯಿತು.

ಈ ಸಭೆಗೆ ಆರೋಗ್ಯಾಧಿಕಾರಿ ಹರೀಶ್, ದೇವರಾಜ್ ಗೈರಾದ ಬಗ್ಗೆ ನಿವಾಸಿಗಳು ಬೇಸರ ವ್ಯಕ್ತಪಡಿಸಿದರು. ಈ ವಾರ್ಡ್ ನಿವಾಸಿಯಾಗಿರುವ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಅವರು ಸಭೆಯ ನೇತೃತ್ವ ವಹಿಸಿದ್ದರೆ ನಗರದ ಎಲ್ಲಾ ವಾರ್ಡ್‌ಗಳಿಗೂ ಪ್ರಬಲ ಸಂದೇಶ ರವಾನೆಯಾಗುತ್ತಿತ್ತು ಎಂದು ಮೈಗ್ರಾಪದ ಬಾಮಿ ವಿ.ಶೆಣೈ ಮತ್ತು ಎಸ್.ಕೆ.ದಿನೇಶ್ ಅಭಿಪ್ರಾಯ ಮಂಡಿಸಿದರು.

ಯಾದವಗಿರಿ ನಿವಾಸಿಗಳ ಹೆಗಲಿಗೆ: ಯಾದವಗಿರಿ ಬಡಾವಣೆಯ ಉದ್ಯಾನವನ ತ್ಯಾಜ್ಯ ನಿರ್ವಹಣೆಗೆ ಖಾಸಗಿ ಗುತ್ತಿಗೆದಾರರನ್ನು ನೇಮಿಸುವ ಹೊಣೆಯನ್ನು ವೈಆರ್‌ಎ ಸಂಚಾಲಕ ಎಸ್.ಕೆ.ದಿನೇಶ್ ವಹಿಸಿಕೊಂಡರು. ಪರಿಸರವಾದಿ ತಮ್ಮಣ್ಣ ನೇತೃತ್ವದಲ್ಲಿ ಯಾದವಗಿರಿ ಹಸಿರುಗೊಳಿಸುವ ನಿಟ್ಟಿನಲ್ಲಿ ಉಪಸಮಿತಿ ನೇತೃತ್ವ ವಹಿಸಲು ಸಂಜಯ್ ದತ್ತಾತ್ರಿ ಒಪ್ಪಿದರು. ಜಾಯ್ ಐಸ್‌ಕ್ರೀಂ ರಸ್ತೆಯ ಸ್ವಚ್ಛತೆ ಮತ್ತು ರಸ್ತೆ ಸುರಕ್ಷತೆ ನೇತೃತ್ವವನ್ನು ರವಿ, ಎಸ್.ಕೆ.ದಿನೇಶ್ ಅವರಿಗೆ ವಹಿಸಲಾಯಿತು.

ದಸರಾ ಗಜಪಡೆಯ ಪೂರ್ಣ ಪ್ರಮಾಣದ ತಾಲೀಮು

ಮೈಸೂರು, ಆ.26(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವ ಆರಂಭಕ್ಕೆ ದಿನಗಣನೆ ಆರಂಭವಾಗಿದ್ದು, ಜಂಬೂಸವಾರಿಗೆ ಗಜಪಡೆಯನ್ನು ಸಜ್ಜುಗೊಳಿಸುವ ಪೂರ್ಣ ಪ್ರಮಾಣದ ತಾಲೀಮು ಆರಂಭಿಸಲಾಗಿದೆ.

ಮೊದಲ ತಂಡದಲ್ಲಿ ಮೈಸೂರು ಅರಮನೆಗೆ ಆಗಮಿಸಿದ್ದ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ 9 ಆನೆಗಳು ಇದುವರೆಗೂ ತಾಲೀಮಿನಲ್ಲಿ ಪಾಲ್ಗೊಳ್ಳುತ್ತಿದ್ದವು. ಆದರೆ, ನೆನ್ನೆಯಷ್ಟೇ ಎರಡನೇ ತಂಡದ 5 ಆನೆಗಳು ಗಜಪಡೆಯನ್ನು ಸೇರ್ಪಡೆಗೊಂಡಿವೆ. ಮಂಗಳವಾರ ಬೆಳಗ್ಗೆ ಅರಮನೆ ಆವರಣದ ಕೋಡಿ ಸೋಮೇಶ್ವರ ದೇವಾಲಯದ ಬಳಿಯಿರುವ ಆನೆ ಬಿಡಾರದಿಂದ ತಾಲೀಮಿಗೆ ಹೊರಟ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆ ಬಲರಾಮ ದ್ವಾರದಿಂದ ಚಾಮರಾಜ ವೃತ್ತ, ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ ಮೂಲಕ ಸರ್ಕಾರಿ ಆಯುರ್ವೇದ ಕಾಲೇಜು ವೃತ್ತದವರೆಗೂ ತಾಲೀಮಿನಲ್ಲಿ ಪಾಲ್ಗೊಂಡವು. ಕೆ.ಆರ್.ವೃತ್ತದ ಸಮೀಪ ಸಾಲಾಗಿ 14 ಆನೆಗಳು ಬರುತ್ತಿದ್ದಂತೆಯೇ ನೂರಾರು ಮಂದಿ ಕಣ್ತುಂಬಿಕೊಂಡು ನಮಿಸಿದರು.

ಪ್ರತಿದಿನದಂತೆ ಸಯ್ಯಾಜಿರಾವ್ ರಸ್ತೆಗೆ ಗಜಪಡೆ ಎಂಟ್ರಿಯಾಗುತ್ತಿದ್ದಂತೆಯೇ ರಸ್ತೆ ಬದಿ ವ್ಯಾಪಾರಿಗಳು ಎಲ್ಲಾ 14 ಆನೆಗಳಿಗೂ ಹಣ್ಣು–ಹಂಪಲು ನೀಡಿ ಭಕ್ತಿ ಪ್ರದರ್ಶಿಸಿದರು. ಭದ್ರತೆ ಹಿನ್ನೆಲೆಯಲ್ಲಿ ಗಜಪಡೆಯ ತಾಲೀಮಿನ ವೇಳೆ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು.

ತುಂತುರು ಮಳೆಯಲ್ಲೂ ತಾಲೀಮು: ಸಂಜೆ ತುಂತುರು ಮಳೆಯಲ್ಲೂ ಸಾಗಿದ ಗಜಪಡೆಯ ಗಂಭೀರ ನಡೆ ಆಕರ್ಷಕವಾಗಿತ್ತು. ಅರಮನೆಯಿಂದ ಸಂಜೆ 5.30ಕ್ಕೆ ಪ್ರಶಾಂತ ಆನೆಯ ನೇತೃತ್ವದಲ್ಲಿ ತಾಲೀಮಿಗೆ ಬಂದ ಗಜಪಡೆ ತುಂತುರು ಮಳೆಯಲ್ಲಿ ಮಿಂದೆದ್ದವು. ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಬರುತ್ತಿದ್ದಂತೆಯೇ ತುಂತುರು ಮಳೆ ಆರಂಭವಾಯಿತು. ಮಳೆ ನಡುವೆಯೂ ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ ಮೂಲಕ ಸರ್ಕಾರಿ ಆಯುರ್ವೇದ ಆಸ್ಪತ್ರೆವರೆಗೂ ತಾಲೀಮಿನಲ್ಲಿ ಸಾಗಿದವು.

ರಾಜಮಾರ್ಗದಲ್ಲಿ ಸಾಲುಗಟ್ಟಿ ಸಾಗುವ ಗಜ ಗಾಂಭೀರ್ಯ ಚಿತ್ತಾಕರ್ಷಕ



ಜನ ಜಂಗುಳಿ ನಡುವೆ ಸಯ್ಯಾಜಿರಾವ್ ರಸ್ತೆಯಲ್ಲಿ ತಾಲೀಮು ಮುಗಿಸಿ ವಾಪಸ್ಸಾಗುತ್ತಿರುವ ದಸರಾ ಗಜಪಡೆ.

ಕಿಕ್ಕಿರಿದ ಜನಸಂದಣಿ: ಗಜಪಡೆಯ ತಾಲೀಮು ವೀಕ್ಷಿಸಲು ಸಂಜೆ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ, ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆಯುದ್ದಕ್ಕೂ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಜನ ಗಜಪಡೆಯನ್ನು ಕಣ್ತುಂಬಿಕೊಂಡು ಜೈಕಾರ ಹಾಕಿ ಸಂಭ್ರಮಿಸಿದರು.

ಗಮನ ಸೆಳೆದ ಹೊಸ ಆನೆಗಳು: ಇದೇ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿರುವ ಮತ್ತಿಗೋಡು ಶಿಬಿರದ ಶ್ರೀಕಂಠ(56), ದುಬಾರೆಯ ಹೇಮಾವತಿ(11) ಹಾಗೂ ಭೀಮನಕಟ್ಟೆ ಕ್ಯಾಂಪ್‌ನ ರೂಪ(44) ಮೊದಲ ದಿನವೇ ತಾಲೀಮಿನಲ್ಲಿ ಗಮನ ಸೆಳೆದವು. ಬೆಳಗ್ಗೆ ಅರಮನೆಯಿಂದ ಧನ್ವಂತರಿ ರಸ್ತೆಯಲ್ಲಿ ತೂಕದ ಪರೀಕ್ಷೆ ನಂತರ ಇರ್ವಿನ್ ರಸ್ತೆ ಮೂಲಕ ಆಯುರ್ವೇದ ಸರ್ಕಾರಿ ಕಾಲೇಜಿನ ವೃತ್ತದಲ್ಲಿ ಬೀಡುಬಿಟ್ಟಿದ್ದ ಮೊದಲ ತಂಡದ ಆನೆಗಳೊಂದಿಗೆ ಸೇರಿ ಮತ್ತೆ ಅರಮನೆಗೆ ವಾಪಸ್ಸಾಗಿದ್ದವು.

ಸಂಜೆ ಅರಮನೆಯಿಂದ ಸರ್ಕಾರಿ ಆಯುರ್ವೇದ ಕಾಲೇಜಿನವರೆಗೆ ತಾಲೀಮಿಗೆ ಬಂದು, ನಂತರ ಅದೇ ಮಾರ್ಗದಲ್ಲಿ ಅರಮನೆಗೆ ವಾಪಸ್ಸಾಗಿದ್ದವು. ಈ ವೇಳೆ ಹೊಸ ಆನೆಗಳು ತಮ್ಮ ವರ್ತನೆಯಿಂದ ಭರವಸೆ ಮೂಡಿಸಿದವು. ಅದರಲ್ಲೂ ಪ್ರೀತಿಯಿಂದ ಕರಿಬಂಡೆ ಎಂದು ಕರೆಸಿಕೊಳ್ಳುವ ಶ್ರೀಕಂಠ ಆನೆ ತನ್ನ ದೈತ್ಯಾಕಾರದ ದೇಹ, ದಂತ ಹಾಗೂ ಕಪ್ಪು ಮೈಬಣ್ಣದಿಂದ ಎಲ್ಲರ ಗಮನ ಸೆಳೆಯಿತು. ತೂಕದಲ್ಲೂ ಎರಡನೇ ಸ್ಥಾನ ಹೊಂದಿರುವ ಶ್ರೀಕಂಠ ನಡೆಯಲ್ಲೂ ಮೊದಲ ದಿನವೇ ಮೆಚ್ಚುಗೆಗೆ ಪಾತ್ರವಾಯಿತು.

ಗಜಪಡೆಯನ್ನು ಸಜ್ಜುಗೊಳಿಸಲಾಗುತ್ತಿದೆ

ದಸರೆಗೆ ಗಜಪಡೆಯನ್ನು ಸಜ್ಜುಗೊಳಿಸಲಾಗುತ್ತಿದೆ. ಎರಡು ಬಾರಿ ತಾಲೀಮಿಗೆ ಕರೆದೊಯ್ಯಲು ಉದ್ದೇಶಿಸಲಾಗಿದೆ. ಮಂಗಳವಾರ ಎರಡನೇ ತಂಡದ ಆನೆಗಳಿಗೆ ತೂಕದ ಪರೀಕ್ಷೆ ನಡೆಸಲಾಗಿದ್ದು, ಎಲ್ಲಾ ಆನೆಗಳು ಉತ್ತಮ ಸಾಮರ್ಥ್ಯ ಹೊಂದಿವೆ. ಇದರಿಂದ ಆನೆಗಳು ಆರೋಗ್ಯವಾಗಿವೆ ಎಂಬುದು ಖಚಿತವಾಗಿದೆ. ಪೌಷ್ಟಿಕ ಆಹಾರ ನೀಡಿ, ಆರೈಕೆ ಮಾಡಲಾಗುತ್ತಿದೆ.

– **ಡಾ.ಐ.ಬಿ.ಪ್ರಭುಗೌಡ**, ಡಿಸಿಎಫ್, ಮೈಸೂರು ವನ್ಯಜೀವಿ ವಿಭಾಗ

ಮೈಸೂರು ಮಿತ್ರ

ಅರಣ್ಯ ಪಾಲಕನ ಆರೋಗ್ಯ ವಿಚಾರಿಸಿದ ಅರಣ್ಯಾಧಿಕಾರಿಗಳು



ಅರಣ್ಯ ಪಾಲಕ ಮಾದನ ಆರೋಗ್ಯವನ್ನು ಅರಣ್ಯ ಇಲಾಖೆ ಅಧಿಕಾರಿಗಳು ವಿಚಾರಿಸಿದರು.

ಹೆಚ್.ಡಿ.ಕೋಟೆ, ಆ.26– ಕರಡಿ ದಾಳಿಗೊಳಗಾಗಿ ತೀವ್ರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿ ಗುಣಮುಖರಾಗಿ ಮನೆಗೆ ಆಗಮಿಸಿದ ಅರಣ್ಯ ಪಾಲಕ ಮಾದನ ಆರೋಗ್ಯವನ್ನು ಎಸಿಎಫ್ ಮಧು, ಆರ್‌ಎಫ್‌ಓ ಸಿದ್ದರಾಜು ವಿಚಾರಿಸಿ ಧನಸಹಾಯ ಮಾಡಿದರು.

ಕಳೆದ ಜೂನ್‌ನಲ್ಲಿ ತಾಲೂಕಿನ ನಾಗರ ಹೊಳೆ ಅಭಯಾರಣ್ಯದ ದಮ್ಮನಕಟ್ಟೆ ವಲಯದಲ್ಲಿ ಸೋಗಳ್ಳಿ ಹಾಡಿ ನಿವಾಸಿ ಮಾದ, ಪುಟ್ಟ ಬಸವ, ಶಂಕರ್, ಸಚಿನ್, ನಾಗರಾಜು ಅವರೊಂದಿಗೆ ಹಸಿ ಹಿಂಡಲ ಕಡ ಗಸ್ತಿನ ಹಳೆ ಟ್ರಾಂಜೆಕ್ಸ್ ಲೈನ್ ಅರಣ್ಯ ಪ್ರದೇಶದಲ್ಲಿ ಗಸ್ತಿನಲ್ಲಿದ್ದಾಗ ಮಾದನ ಮೇಲೆ ಮರಿಗಳ ಜೊತೆ ಇದ್ದ ಕರಡಿ ದಾಳಿ ನಡೆಸಿತ್ತು. ಈ ವೇಳೆ ಮಾದನ ತಲೆ, ಮುಖಕ್ಕೆ ತೀವ್ರ ಗಾಯಗಳಾಗಿದ್ದವು. ಈ ವೇಳೆ ಜೊತೆಯಲ್ಲಿದ್ದ ನಾಲ್ವರು ಕರಡಿಯಿಂದ ಮಾದನನ್ನು ರಕ್ಷಿಸಿದ್ದರು. ಬಳಿಕ ಆತನನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸ ಲಾಗಿತ್ತು. ಇದೀಗ ಗುಣಮುಖರಾಗಿ ಮನೆಗೆ ಆಗಮಿಸಿದ ಮಾದನ ಮನೆಗೆ ಅರಣ್ಯಧಿಕಾರಿ ಗಳು ಭೇಟಿ ನೀಡಿ ಆರೋಗ್ಯ ವಿಚಾರಿಸಿದರು. ಈ ವೇಳೆ ಅರಣ್ಯ ಸಿಬ್ಬಂದಿ ಹಾಜರಿದ್ದರು.

ಪ್ರತಿಯೊಬ್ಬರೂ ನಿಯಮಿತವಾಗಿ ರಕ್ತದಾನ ಮಾಡಿ



ಜೆಎಸ್‌ಎಸ್ ಕಾಲೇಜಿನಲ್ಲಿ ನಡೆದ ಶಿಬಿರದಲ್ಲಿ ವಿದ್ಯಾರ್ಥಿಗಳು ರಕ್ತದಾನ ಮಾಡಿದರು.

ನಂಜನಗೂಡು, ಆ.26– ರಕ್ತದಾನ ವ್ಯಕ್ತಿ ಜೀವಕ್ಕೆ ನೀಡುವ ಉಡುಗೊರೆಯಾ ಗಿದ್ದು, ಪ್ರತಿಯೊಬ್ಬ ಆರೋಗ್ಯವಂತ ವ್ಯಕ್ತಿಯೂ ನಿಯಮಿತವಾಗಿ ರಕ್ತದಾನಕ್ಕೆ ಮುಂದಾಗ ಬೇಕು ಎಂದು ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರೀಸರ್ಚ್ ಪೆಥಾಲಜಿ ವಿಭಾಗದ ಸಹಾಯಕ ಪ್ರಾಧ್ಯಾ ಪಕರಾದ ಡಾ. ಅರ್ಚನ ತಿಳಿಸಿದರು.

ನಗರದ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸಮು ಚ್ಛಯದಲ್ಲಿ ಜಗದ್ಗುರು ಡಾ.ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 110ನೇ ಜಯಂತಿ ಮಹೋತ್ಸವದ ಅಂಗವಾಗಿ ಜೆಎಸ್‌ಎಸ್ ಆಸ್ಪತ್ರೆ, ಮೈಸೂರು ಸಹ ಯೋಗ ದೊಂದಿಗೆ ನಡೆದ ರಕ್ತದ ಗುಂಪು ಪರೀಕ್ಷೆ ಮತ್ತು ರಕ್ತದಾನದಲ್ಲಿ ಅವರು ಮಾತನಾಡಿದರು. ಜೀವನ ಪ್ರತಿಯೊಬ್ಬ ರಿಗೂ ಅಮೂಲ್ಯ ವಾದದ್ದು, ವಿಶೇಷ ವಾಗಿ ಯುವ ಜನತೆ ಕಷ್ಟದಲ್ಲಿರುವ ರೋಗಿಗಳ ಅವಶ್ಯಕತೆ ಮನಗಂಡು ದಾನದಲ್ಲೇ ಶ್ರೇಷ್ಠವಾದ ರಕ್ತದಾನ ಮಾಡಬೇಕು. ಇದರಿಂದ ರೋಗಿಗಳಿಗೆ ಜೀವ ರಕ್ಷಣೆ ನೀಡಿದಂತಾಗುತ್ತದೆ ಎಂದರು.

ಇದೇ ವೇಳೆ ವೈದ್ಯರ ತಂಡದೊಂದಿಗೆ ತಾವೂ ಕೂಡ ರಕ್ತದಾನ ಮಾಡುವ ಮೂಲಕ ಯುವ ಜನರಿಗೆ ಪ್ರೇರಣೆ ನೀಡಿದರು.

ಕಾಲೇಜಿನ ಪ್ರಾಂಶುಪಾಲ ಡಾ.ಸಿ.ಎಸ್. ಹೊನ್ನೇಗೌಡ ಮಾತನಾಡಿ, ಜೀವ ಮತ್ತು ಜೀವನ ಪ್ರತಿಂಯೊಬ್ಬ ವ್ಯಕ್ತಿಯ ಪ್ರಮುಖ ವಾದ ಘಟ್ಟಗಳಾಗಿದ್ದು, ಈ ದಿಸೆಯಲ್ಲಿ ಜೆಎಸ್‌ಎಸ್ ಆಸ್ಪತ್ರೆ ನಾಡಿನ ಬಡಜನತೆಗೆ ವಿಶೇಷವಾದ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿದೆ. ಈ ಸೌಲಭ್ಯ ಸಾಕಾರಗೊಳ್ಳ ಬೇಕಾದರೆ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಪದವಿ ಪ್ರಮಾಣ ಪತ್ರಗಳನ್ನು ಪಡೆಯುವುದ ರೊಂದಿಗೆ ಸಾಮಾಜಿಕ ಮೌಲ್ಯಗಳು, ಜನಸೇವೆ ಯಂತಹ ಸ್ವಯಂ ನಿಸ್ವಾರ್ಥ ಸೇವೆಗಳ ಪ್ರಾಮುಖ್ಯತೆ ಅರಿತು ಕಷ್ಟದಲ್ಲಿರುವ ರೋಗಿಗಳಿಗೆ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ರಕ್ತದಾನ ಮಾಡಿ ವ್ಯಕ್ತಿ ಜೀವ ಉಳಿಸಬೇಕೆಂದು ಸಲಹೆ ನೀಡಿದರು.

ಈ ವೇಳೆ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಕೆ.ಎನ್.ಶಿವಕುಮಾರ್, ಐಕ್ಯೂಎಸಿ ಸಂಚಾಲಕ ಡಾ.ಬಿ.ಕೆ.ಕೆಂಡಗಣ್ಣ ಸ್ವಾಮಿ, ಅಧೀಕ್ಷಕ ಕೆ.ವಿ.ಸುಂದರರಾಜು, ಸಂಚಾಲಕರಾದ ಆರ್.ರವಿತೇಜ, ಹೆಚ್.ಆರ್. ಗುರು, ಎಂ.ಎಸ್.ದೀಪಾಲಿ, ಹೆಚ್.ಎಸ್. ಪ್ರವೀಣ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ರೈಲಿಗೆ ಸಿಲುಕಿ ಇಬ್ಬರು ಅಪರಿಚಿತರ ಸಾವು

ಮೈಸೂರು,ಆ.26(ಪಿಎಂ)– ಎರಡು ಪ್ರತ್ಯೇಕ ಸ್ಥಳಗಳಲ್ಲಿ ಇಬ್ಬರು ಅಪರಿಚಿತ ಪುರುಷರು ರೈಲಿಗೆ ಸಿಲುಕಿ ಮೃತ ಪಟ್ಟಿದ್ದಾರೆ. ಈ ಸಂಬಂಧ ಮೈಸೂರು



ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ. 35ರಿಂದ 40 ವರ್ಷದ ಅಪರಿಚಿತ ಪುರುಷರೊಬ್ಬರು ರೈಲು ಗಾಡಿಗೆ ಸಿಲುಕಿ ಮೃತಪಟ್ಟಿದ್ದಾರೆ. ಇವರು 5.7 ಅಡಿ ಎತ್ತರ, ಸಾಧಾರಣ ಶರೀರ, ಗೋಧಿ ಮೈ ಬಣ್ಣ, ಕೋಲುಮುಖ, ಉದ್ದ ಮೂಗು ಹೊಂದಿದ್ದಾರೆ. ಮತ್ತೊಂದು ಪ್ರಕರಣದಲ್ಲಿ ಸುಮಾರು 65 ವರ್ಷದ ಅಪರಿಚಿತ ವ್ಯಕ್ತಿಯು ಬೋರೆ ಆನಂದೂರು ಇಲವಾಲದ ಹತ್ತಿರದ ರೈಲಿಗೆ ಸಿಲುಕಿದ್ದು, ಸದರಿ ವ್ಯಕ್ತಿಯನ್ನು 108 ಅಂಬು ಲೆನ್ಸ್ ನಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯುವ ವೇಳೆ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ.

ಈ ಅಪರಿಚಿತರ ಮೃತದೇಹಗಳನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಗಿದೆ. ಮೃತರ ವಾರಸುದಾರರ ಬಗ್ಗೆ ಮಾಹಿತಿ ಕಂಡು ಬಂದಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆಯ ದೂ.ಸಂ. 0821–2516579 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ರೈಲ್ವೆ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಹಕಾರ ಕ್ಷೇತ್ರದಲ್ಲಿ ಎಸ್ಸಿ, ಎಸ್ಟಿ ಸಮುದಾಯದ ಮೀಸಲಾತಿ ವಿಚಾರದಲ್ಲಿ

ಶಾಸಕ ಜಿ.ಟಿ.ದೇವೇಗೌಡರ ವಿರುದ್ಧ ಪ್ರತಿಭಟನೆ

ಮೈಸೂರು, ಆ.26– ಸಹಕಾರ ಕ್ಷೇತ್ರದಲ್ಲಿ ಎಸ್ಸಿ/ಎಸ್ಟಿ ಸಮುದಾಯದವರಿಗೆ ಮೀಸಲಾತಿ ಜಾರಿಗೆ ವಿರೋಧ ವ್ಯಕ್ತಪಡಿಸಿದ ಶಾಸಕ ಜಿ.ಟಿ.ದೇವೇಗೌಡರ ವಿರುದ್ಧ ತಾಲೂಕಿನ ಸಿಂಧುವಳ್ಳಿಯಲ್ಲಿ ಮಂಗಳ ವಾರ ಪ್ರತಿಭಟನೆ ನಡೆಸಲಾಯಿತು. ಗ್ರಾಮದ ಅಂಬೇಡ್ಕರ್ ಪ್ರತಿಮೆ ಬಳಿ ಜಮಾಯಿಸಿದ ದಲಿತ ಸಂಘರ್ಷ ಸಮಿತಿ, ಜೈ ಭೀಮ್ ಒಕ್ಕೂಟದ ಸದಸ್ಯರು ಶಾಸಕ ಜಿ.ಟಿ.ದೇವೇಗೌಡ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಸಹಕಾರ ಕ್ಷೇತ್ರದಲ್ಲಿ ಪ.ಜಾತಿ ಮತ್ತು ಪಂಗಡಗಳಿಗೆ ಮೀಸಲಾತಿ ನೀಡಬೇಕೆಂದು ಕಳೆದ 3 ದಶಕಗಳಿಂದ ಹೋರಾಟ ಮಾಡುತ್ತಿದ್ದೇವೆ. ಇತ್ತೀಚೆಗೆ ನಡೆದ ವಿಧಾನ ಮಂಡಲ ಅಧಿವೇಶನದಲ್ಲಿ ಸಹಕಾರ ಕ್ಷೇತ್ರದಲ್ಲಿ ಎಸ್ಸಿ, ಎಸ್ಟಿ ಸಮುದಾಯದವರಿಗೆ ಮೀಸಲಾತಿ ನೀಡುವ ಸಲುವಾಗಿ ವಿಧೇಯಕ ಮಂಡನೆ ಮಾಡಿ, ಚರ್ಚೆಗೆ ಅವಕಾಶ ನೀಡಿದಾಗ ಶಾಸಕ ಜಿ.ಟಿ. ದೇವೇಗೌಡರು



ಸಿಂಧುವಳ್ಳಿಯಲ್ಲಿ ಶಾಸಕ ಜಿ.ಟಿ.ದೇವೇಗೌಡರ ವಿರುದ್ಧ ಪ್ರತಿಭಟನೆ ನಡೆಸಲಾಯಿತು.

ಆಕ್ರೋಶದಿಂದ ಕೂಗಾಡಿ, ಎಸ್ಸಿ, ಎಸ್ಟಿ ಸಮುದಾಯದ ವರಿಗೆ ಮೀಸಲಾತಿ ಕೊಟ್ಟರೆ ಸಹಕಾರ ಕ್ಷೇತ್ರ ಮುಚ್ಚಿ ಹೋಗುತ್ತದೆ ಎಂದು ಮೀಸಲಾತಿಗೆ ವಿರೋಧ ವ್ಯಕ್ತಪ ಡಿಸಿದ್ದರು. ನಮ್ಮ ವಿರುದ್ಧ ದನಿ ಎತ್ತುವವರ ಧ್ವನಿ ಅಡಗಿಸುವುದು ನಮಗೆ ಗೊತ್ತು. ಈ ಸಂಬಂಧ ಕ್ಷಮೆ ಕೇಳುವುದಿದ್ದರೆ ವಿಧಾನಸಭೆ ಸಭಾಪತಿಗಳ ಬಳಿ ಹೋಗಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ನಾಡಿನ ದಲಿತರ ಕ್ಷಮೆಯಾಚಿಸಬೇಕು ಎಂದರು.

ತಾಪಂ ಸದಸ್ಯ ಹೆಚ್.ಆರ್.ಸುರೇಶ್ ಕುಮಾರ್ ಮಾತ ನಾಡಿ, ಚಾಮುಂಡೇಶ್ವರಿ ಕ್ಷೇತ್ರದ ಪ್ರತಿ ಗ್ರಾಮದಲ್ಲಿರುವ ಎಲ್ಲಾ ಸಮುದಾಯದವರನ್ನು 3 ಗುಂಪುಗಳನ್ನಾಗಿ ಮಾಡಿ ಎತ್ತಿಕಟ್ಟಿ ಒಡೆದು ಆಳುವ ಅಹಂ ನಿಮಗೆ ಬಂದಿದೆ. ದಲಿತರಲ್ಲಿ ಮುಂಚೂಣಿಯಲ್ಲಿ ಗುರುತಿಸಿಕೊಂಡವರನ್ನು ದಲಿತರಲ್ಲಿ ಒಡಕು ತಂದು, ಒಡೆದು ಆಳುವ ಹುನ್ನಾರ ನಡೆಸು ತ್ತಿದ್ದೀರಾ. ನಿಮಗೆ ಇವೆಲ್ಲಾ ಶೋಭೆ ತರುವುದಿಲ್ಲ. ದಲಿತರ ಮೀಸಲಾತಿಗೆ ವಿರೋಧ ವ್ಯಕ್ತಪಡಿಸಿದ ನೀವು ಕೂಡಲೇ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದರು. ದಲಿತ ಮುಖಂಡ ಮುರುಡಗಳ್ಳಿ ಮಹದೇವು ಮಾತನಾಡಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಚೋರನಹಳ್ಳಿ ಶಿವಣ್ಣ, ಸಿಂಧುವಳ್ಳಿ ಮಧು, ಶೇಷಣ್ಣ, ಮಂಡಕಳ್ಳಿ ಚಾಮರಾಜು, ಕಡಕೊಳ ಭರತ್, ಹರೀಶ್, ಕುಮಾರ್ ಸೇರಿದಂತೆ ಜಯಪುರ ಹೋಬಳಿ ವ್ಯಾಪ್ತಿಯ ದಸಂಸ ಸದಸ್ಯರು ನೂರಾರು ಸಂಖ್ಯೆಯಲ್ಲಿದ್ದರು.

ಕರಿಮಣಿ ಬಿಚ್ಚೋಲೆ ಅರಿಶಿಣದೊಂದಿಗೆ ಬಂದ ಗೌರಿ

ಬನ್ನೂರು, ಆ.26– ಈ ಭಾರೀ ನಾಡಿಗೆ ಒಳಿತನ್ನು ಉಂಟು ಮಾಡುವ ನಿಟ್ಟಿನಲ್ಲಿ ಗೌರಿ ಕರಿಮಣಿ ಬಿಚ್ಚೋಲೆ ಅರಿಶಿಣದೊಂದಿಗೆ ಬಂದಿರುವುದು ಊರಿನ ಜನರಲ್ಲಿ ಸಂತಸವನ್ನುಂಟು ಮಾಡಿದೆ ಎಂದು ಆನಂದವಲ್ಲಿ ಹನು ಮಂತೇಶ್ವರ ದೇವಾಲಯದ ಪ್ರಧಾನ ಅರ್ಚಕ ಮಂಜುನಾಥ್ ತಿಳಿಸಿದರು.

ಪಟ್ಟಣದ ಕಾವೇರಿ ನದಿಯಲ್ಲಿ ಗೌರಮ್ಮ ದೇವಿಯನ್ನು ಊರಿಗೆ ಆಹ್ವಾನಿ ಸುವ ನಿಟ್ಟಿನಲ್ಲಿ ಸಲ್ಲಿಸುವ ಪೂಜೆಯ ವೇಳೆ ಮಾತನಾಡಿದ ಅವರು, ಗೌರಮ್ಮ ದೇವಿ ಅರಿಶಿಣ, ಕರಿಮಣಿ, ಬಿಚ್ಚೋಲೆ ಮೂಲಕ ಬಂದಿರುವುದು ಶುಭ ಸಂಕೇತವಾಗಿದೆ ಎಂದು ತಿಳಿಸಿದರು.

ನಂತರ ಶಾಸ್ತ್ರೋಸ್ತ್ರವಾಗಿ ಗೌರಮ್ಮನ ಮೂರ್ತಿಗೆ ಪೂಜೆ ಸಲ್ಲಿಸಿ ತೊಟ್ಟಿಲ ಮೂಲಕ ಊರಿಗೆ ತರಲಾಯಿತು. ಈ ಸಂದರ್ಭ ಗ್ರಾಮದ ಮಹಿಳೆಯರು ಗೌರಿ ದೇವಿಗೆ ಅಲ್ಲಲ್ಲಿ ಪೂಜೆ ಸಲ್ಲಿಸಿದರು. ಸಮಾಜ ಸೇವಕ ವೈ.ಎಸ್.ರಾಮಸ್ವಾಮಿ, ಅರವಿಂದ್, ನಾಡಗೌಡ ಪಾರ್ಥಸಾರಥಿ, ಬಾಲರಾಜ್ ಸೇರಿದಂತೆ ಇತರರಿದ್ದರು.



ಬನ್ನೂರಿನಲ್ಲಿ ತೊಟ್ಟಿಲಗೌರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಮಹಾರಾಜ ಟ್ರೋಫಿ ಫೈನಲ್‌ಗೆ ಹುಬ್ಬಳ್ಳಿ ಲಗ್ಗೆ

ನಾಳಿನ ಕ್ವಾಲಿಫೈಯರ್–2 ಪಂದ್ಯದಲ್ಲಿ ಮಂಗಳೂರಿಗೆ ಮತ್ತೊಂದು ಚಾನ್ಸ್



ಮೈಸೂರು, ಆ.26– ಟೂರ್ನಿಯುದ್ದಕ್ಕೂ ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಸ್ಥಿರ ಪ್ರದರ್ಶನ ನೀಡುತ್ತಾ ಬಂದಿರುವ ಹುಬ್ಬಳ್ಳಿ ಟೈಗರ್ಸ್ ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ಮಂಗಳೂರು ಡ್ರ್ಯಾಗನ್ಸ್ ವಿರುದ್ಧ 110 ರನ್‌ಗಳ ಭರ್ಜರಿ ಜಯಗಳಿಸುವ ಮೂಲಕ 4ನೇ ಆವೃತ್ತಿಯ ಮಹಾರಾಜ ಟ್ರೋಫಿ ಫೈನಲ್‌ಗೆ ಲಗ್ಗೆ ಹಾಕಿದೆ.

ಇದರೊಂದಿಗೆ ಹುಬ್ಬಳ್ಳಿ 2ನೇ ಬಾರಿಗೆ ಫೈನಲ್ ಪ್ರವೇಶಿಸಿದ್ದು, ಆ.28 ರಂದು ನಡೆಯುವ ಫೈನಲ್ ಪಂದದಲ್ಲಿ ಕ್ವಾಲಿಫೈಯರ್ 2 ಪಂದ್ಯದ ವಿಜೇತ ರೊಂದಿಗೆ ಟ್ರೋಫಿಗಾಗಿ ಕಾದಾಡಲಿದೆ. ಮತ್ತೊಂದೆಡೆ ಸೋಲು ಅನುಭವಿಸಿರುವ ಮಂಗಳೂರು ಆ.27 ರಂದು (ನಾಳೆ) ನಡೆಯುವ 2ನೇ ಕ್ವಾಲಿಫೈಯರ್ ಪಂದ್ಯದಲ್ಲಿ ಎಲಿಮಿನೇಟರ್ ಪಂದ್ಯದ ವಿಜೇತರೊಂದಿಗೆ ಮುಖಾಮುಖಿ ಯಾಗುವ ಮೂಲಕ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಮುಂದಾಗಲಿದೆ.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೈದಾನದಲ್ಲಿ ಮಂಗಳ ವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಹುಬ್ಬಳ್ಳಿ ಟೈಗರ್ಸ್ 20 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 210 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ದೇವದತ್ ಪಡಿಕ್ಕಲ್ ಹಾಗೂ ಮೊಹಮ್ಮದ್ ತಾಹ ಮೊದಲ ವಿಕೆಟ್‌ಗೆ 81 ರನ್‌ಗಳ ಜೊತೆಯಾಟ ವಾಡುವ ಮೂಲಕ ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ಆದರೆ ಈ ವೇಳೆ 28 ಎಸೆತಗಳಲ್ಲಿ 2 ಸಿಕ್ಸರ್, 4 ಬೌಂಡರಿ ಒಳಗೊಂಡ 37 ರನ್ ಗಳಿಸಿದ್ದ ತಾಹ ವಿಕೆಟ್ ಒಪ್ಪಿಸಿ ನಿರ್ಗಮಿಸಿದರು. ನಂತರ ಬಂದ ಅಭಿನವ್ ಮನೋಹರ್ 23 ಎಸೆತಗಳಲ್ಲಿ 3 ಸಿಕ್ಸರ್, 5 ಬೌಂಡರಿ ಮಿಂಚಿನ 50 ರನ್ ಗಳಿಸಿ ಔಟಾದರು. ಇನ್ನೊಂದು ಬದಿಯಲ್ಲಿ ನಾಯಕನಿಗೆ ತಕ್ಕ ಆಟವಾಡಿದ ದೇವದತ್ ಪಡಿಕ್ಕಲ್ 64 ಎಸೆತಗಳಲ್ಲಿ 5 ಸಿಕ್ಸರ್, 10 ಬೌಂಡರಿ ಒಳಗೊಂಡ ಅಜೇಯ 99 ರನ್ ಗಳಿಸಿ ಕೇವಲ ಒಂದು ರನ್‌ಗಳಿಂದ ಶತಕದಿಂದ ವಂಚಿತರಾದರು. ಇನ್ನಿಂಗ್ಸ್ ಕೊನೆಯಲ್ಲಿ ಅಬ್ಬರಿಸಿದ ಮನ್ವಿತ್ ಕುಮಾರ್ ಕೇವಲ 6 ಎಸೆತಗಳಲ್ಲಿ 2 ಸಿಕ್ಸರ್ ಒಳಗೊಂಡ 16 ರನ್ ಗಳಿಸಿ ತಂಡದ ಮೊತ್ತ 200ರ ಗಡಿ ದಾಟಿಸಿದರು. ಮಂಗಳೂರು ಪರ ರೋನಿತ್ ಮೋರೆ, ಕ್ರಾಂತಿ ಕುಮಾರ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಹುಬ್ಬಳ್ಳಿ ಟೈಗರ್ಸ್ ನೀಡಿದ 211 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಮಂಗಳೂರು ಡ್ರ್ಯಾಗನ್ಸ್ 16.1 ಓವರ್‌ಗಳಲ್ಲಿ 100 ರನ್‌ಗಳಿಗೆ ಆಲೌಟಾಗುವ ಮೂಲಕ 110 ರನ್‌ಗಳ ಹೀನಾಯ ಸೋಲು ಅನುಭವಿಸಿತು. ತಂಡದ ಮೊತ್ತ 21 ರನ್ ಆಗುವಷ್ಟರಲ್ಲಿ ಬಿ.ಆರ್.ಶರತ್ 1, ಲೋಚನ್ ಗೌಡ 14 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ತಿಪ್ಪಾರೆಡ್ಡಿ 16, ಕೆ.ವಿ.ಅನೀಶ್ 28 ರನ್ ಗಳಿಸಿ ಅಲ್ಪ ಪ್ರತಿರೋಧ ತೋರಿದರಾದರೂ ತಂಡವನ್ನು ಸೋಲಿನಿಂದ ಪಾರು ಮಾಡಲು ಸಾಧ್ಯವಾಗಲಿಲ್ಲ. ಉಳಿದಂತೆ ಆದರ್ಶ್ ಪ್ರಜ್ವಲ್ 17 ರನ್ ಗಳಿಸಿದರು. ಆದರೆ ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು.

ಹುಬ್ಬಳ್ಳಿ ಪರ ರಿತೇಶ್ ಭಟ್ಕಳ್ 3, ಶ್ರೀಶಾ ಆಚಾರ್, ಯಶ್ ರಾಜ್ ಪುಂಜಾ ಹಾಗೂ ಕೆ.ಸಿ.ಕರಿಯಪ್ಪ ತಲಾ 2, ನಾಥನ್ ಡಿ ಮೆಲ್ಲೊ 1 ವಿಕೆಟ್ ಪಡೆದರು. ಭರ್ಜರಿ ಬ್ಯಾಟಿಂಗ್ ಪ್ರದರ್ಶನ ತೋರಿದ ನಾಯಕ ದೇವ್‌ದತ್ತ ಪಡಿಕ್ಕಲ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಕ್ವಾಲಿಫೈಯರ್–2ಗೆ ಬೆಂಗಳೂರು ಬ್ಲಾಸ್ಟರ್ಸ್ ಎಂಟ್ರಿ

ಟೂರ್ನಿಯಿಂದ ಹೊರಬಿದ್ದ ಗುಲ್ಬರ್ಗಾ ಮಿಸ್ಟಿಕ್ಸ್



ಮೈಸೂರು, ಆ.26 (ವಿವಿಹೆಚ್)– ಕಳಪೆ ಪ್ರದರ್ಶನಕ್ಕೆ ಬೆಲೆತೆತ್ತ ಗುಲ್ಬರ್ಗಾ ಮಿಸ್ಟಿಕ್ಸ್ 4ನೇ ಆವೃತ್ತಿಯ ಮಹಾರಾಜ ಟ್ರೋಫಿ ಟಿ20 ಟೂರ್ನಿಯಿಂದ ಹೊರಬಿದ್ದರೇ, ಗುಲ್ಬರ್ಗಾ ವಿರುದ್ಧ 8 ವಿಕೆಟ್‌ಗಳ ಗೆಲುವು ಸಾಧಿಸಿದ ಬೆಂಗಳೂರು ಬ್ಲಾಸ್ಟರ್ಸ್ ಕ್ವಾಲಿಫೈಯರ್–2ಗೆ ಅರ್ಹತೆ ಪಡೆದಿದೆ.

ಇಲ್ಲಿನ ಗ್ಲೈಡ್ಸ್ ಮೈದಾನದಲ್ಲಿ ಮಂಗಳವಾರ ಸಂಜೆ ನಡೆದ ಮೊದಲ ಎಲಿಮಿನೇಟರ್ ಪಂದ್ಯದಲ್ಲಿ ಗುಲ್ಬರ್ಗಾ ನೀಡಿದ 126 ರನ್‌ಗಳ ಗುರಿ ಬೆನ್ನತ್ತಿದ ಬೆಂಗಳೂರು 12.3 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ ಗುರಿ ತಲುಪಿತು. ತಂಡದ ಪರ ಎಲ್.ಆರ್.ಚೇತನ್ 40(20), ರೋಹನ್ ಪಾಟೀಲ್ 7(5) ರನ್ ಗಳಿಸಿ ಔಟಾದರೆ, ಇತ್ತ ಅಜೇಯರಾಗಿ ಉಳಿದ ಮಯಾಂಕ್ ಅಗರ್ವಾಲ್ ಹಾಗೂ ಸೂರಜ್ ಅಹುಜಾ ತಂಡಕ್ಕೆ ಗೆಲುವು ತಂದುಕೊಟ್ಟರು. ನಾಯಕ ಅಗರ್ವಾಲ್ ಅಜೇಯ 28(30) ರನ್ ಗಳಿಸಿದರೇ, ಅಹುಜಾ 20 ಎಸೆತಗಳಲ್ಲಿ 44 ರನ್ ಬಾರಿಸಿದರು. ಗುಲ್ಬರ್ಗಾ ಪರ ಪೃಥ್ವಿರಾಜ್ ಶೇಖಾವತ್, ಶಶಕುಮಾರ್ ಕುಂಬ್ಳೆ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಲ್ಬರ್ಗಾ 20 ಎಸೆತಗಳಲ್ಲಿ 8 ವಿಕೆಟ್ ನಷ್ಟಕ್ಕೆ 122 ರನ್ ಗಳಿಸಿದರು. ಲವೀಶ್ ಕುಶಾಲ್ ಅಜೇಯ 35(17) ರನ್ ಗಳಿಸಿದ್ದು ಹೊರತಪಡಿಸಿದರೇ, ಸ್ಮರಣ್ ರವಿಚಂದ್ರನ್ 21(17), ಲವ್ನಿತ್ ಸಿಸೋಡಿಯಾ 15(12), ಪೃಥ್ವಿರಾಜ್ ಶೇಖಾವತ್ 15(23), ಪ್ರವೀಣ್ ದುಬೆ 13(15) ರನ್ ಗಳಿಸಿದರು. ಬೆಂಗಳೂರು ಪರ ವಿದ್ಯಾಧರ್ ಪಾಟೀಲ್ 2, ನವೀನ್, ಮೊಹಸೀನ್ ಖಾನ್, ಶುಭಾಂಗ್ ಹೆಗ್ಡೆ ಹಾಗೂ ಮಾಧವ್ ಪ್ರಕಾಶ್ ಬಜಾಜ್ ತಲಾ ಒಂದೊಂದು ವಿಕೆಟ್ ಪಡೆದರು. ಉತ್ತಮವಾಗಿ ಬ್ಯಾಟ್ ಮಾಡಿದ ಎಲ್.ಆರ್.ಚೇತನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಇಂದಿನ ಪಂದ್ಯ:
ಕ್ವಾಲಿಫೈಯರ್–2: ಮಂಗಳೂರು ಡ್ರ್ಯಾಗನ್ಸ್ vs ಬೆಂಗಳೂರು ಬ್ಲಾಸ್ಟರ್ಸ್ (ಸಂಜೆ 7.15)

ಮುಖ್ಯಮಂತ್ರಿಗಳಿಗೆ ಅಭಿನಂದನೆ



ಬೆಂಗಳೂರಿನ ಕಾವೇರಿ ನಿವಾಸದಲ್ಲಿ ಸಿಎಂ ಸಿದ್ದರಾಮಯ್ಯನವರನ್ನು ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಭೇಟಿ ಮಾಡಿ ಗೌರಿ–ಗಣೇಶ ಹಬ್ಬದ ಶುಭಾಶಯ ಕೋರಿದರು. ಬಳಿಕ ಒಳ ಮೀಸಲಾತಿ ಜಾರಿಗೊಳಿಸಿದ್ದಕ್ಕೆ ಅಭಿನಂದನೆ ಸಲ್ಲಿಸಿದರು. ಈ ವೇಳೆ ಜಿಪಂ ಮಾಜಿ ಸದಸ್ಯ ಬಿ.ವಿ.ಬಸವರಾಜು, ಮೈಸೂರು ನಗರ ಕಾಂಗ್ರೆಸ್ ಪ.ಜಾತಿ ವಿಭಾಗದ ಅಧ್ಯಕ್ಷ ಕೆ.ರಮೇಶ್, ಕೆಪಿಸಿಸಿ ಎಸ್ಸಿ ಘಟಕದ ರಾಜ್ಯ ಸಂಚಾಲಕ ರಂಗನಾಥ್, ಪ್ರಸಾದ್, ಮುಖಂಡ ಗಿರಿ ಪ್ರಸಾದ್, ಚಂದ್ರಶೇಖರ್ ಇದ್ದರು.

ಮೂಗೂರಲ್ಲಿ ವಿಜೃಂಭಣೆಯ ಗೌರಿ ಹಬ್ಬ

ಮೂಗೂರು, ಆ.26– ಶ್ರೀಗೌರಿ–ಗಣೇಶ ಹಬ್ಬದ ಅಂಗವಾಗಿ ಗ್ರಾಮದ ಸ್ವರ್ಣಗೌರಿ ಮಂದಿರದಲ್ಲಿ(ಗೌರಿಗುಡಿ) ಮಂಗಳವಾರ ಶ್ರೀಸ್ವರ್ಣಗೌರಿ ಪ್ರತಿಷ್ಠಾಪಿಸಿ ವಿಜೃಂಭಣೆಯಿಂದ ಹಬ್ಬ ಆಚರಿಸಲಾಯಿತು.



ಹಬ್ಬದ ಅಂಗವಾಗಿ ಗ್ರಾಮದ ಶೆಟ್ಟರ ಮುಖ್ಯಸ್ಥರ ಮನೆಯಲ್ಲಿ ಬ್ರಾಹ್ಮೀ ಮುಹೂರ್ತದಲ್ಲಿ ಮೊದಲಿಗೆ ಸ್ವರ್ಣಗೌರಿ ಅಮ್ಮನವರ ಮೂರ್ತಿಗೆ ಪೂಜೆ ಸಲ್ಲಿಸಿ ಮಂಗಳವಾದ್ಯದೊಂದಿಗೆ ಗೌರಿಗುಡಿ ದೇಗುಲಕ್ಕೆ ತಂದು ಪ್ರತಿಷ್ಠಾಪನೆ ಮಾಡಲಾಯಿತು.

ಪ್ರತಿ ವರ್ಷದಂತೆ ಈ ಬಾರಿಯೂ ಸ್ವರ್ಣಗೌರಿ ಅಮ್ಮನವರಿಗೆ ಬೆಳಗ್ಗೆಯಿಂದಲೇ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಮುತ್ತೈದೆಯರು ಬಾಗಿನ ಅರ್ಪಿಸಿ ಪೂಜೆ ಸಲ್ಲಿಸಿದರು. ಅಮ್ಮನವರ ಭಕ್ತ ಸಮೂಹ ಅಪಾರವಾಗಿದ್ದು, 9 ದಿನಗಳ ಕಾಲ ಬೆಳಗ್ಗೆಯಿಂದ ಸಂಜೆ ತನಕ ವಿಶೇಷ ಪೂಜೆ ಜರುಗಲಿದೆ. ಶ್ರೀ ಸ್ವರ್ಣಗೌರಿ ಭಕ್ತ ಮಂಡಳಿ ಹಾಗೂ ಸ್ಥಳೀಯ ಸೇವಾರ್ಥದಾರಿಂದ 9 ದಿನ ಸಂಜೆ ದೇವಾಲಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಪೂಜೆ ನೆರವೇರಲಿದೆ

ಅಪರಿಚಿತ ಮಹಿಳೆ ಶವ ಪತ್ತೆ

ತಿ.ನರಸೀಪುರ, ಆ.26– ತಾಲೂಕಿನ ಆದಿಬೆಟ್ಟಹಳ್ಳಿ ಗ್ರಾಮದ ಕಬಿನಿ ಬಲದಂಡೆ ನಾಲೆಯಲ್ಲಿ ಸುಮಾರು 35 ರಿಂದ 40 ವರ್ಷದ ಅಪರಿಚಿತ ಮಹಿಳೆ ಶವ ಪತ್ತೆಯಾಗಿದೆ. ಈಕೆ ಬಗ್ಗೆ ಯಾರಿಗಾದರೂ ಮಾಹಿತಿ ಇದ್ದಲ್ಲಿ ತಿ.ನರಸೀಪುರ ಪೊಲೀಸ್ ಠಾಣೆ ದೂ: 08227–261227 ಅನ್ನು ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸರ್ಕಾರದಿಂದ ಮಾದಿಗ ಸಮಾಜಕ್ಕೆ ಶೇ.6ರಷ್ಟು ಮೀಸಲಾತಿ

ಸಿಎಂಗೆ ಜಿಪಂ ಮಾಜಿ ಸದಸ್ಯೆ ಸುಧಾ ಮಹದೇವಯ್ಯ ಅಭಿನಂದನೆ

ತಿ.ನರಸೀಪುರ, ಆ.26– ಒಳ ಮೀಸಲಾತಿ ವರ್ಗೀಕರಣದಲ್ಲಿ ರಾಜ್ಯ ಸರ್ಕಾರ ತೆಗೆದುಕೊಂಡಿರುವ ನಿರ್ಧಾರ ಸ್ವಾಗತಾರ್ಹವಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಿಂದುಳಿದ ಮಾದಿಗ ಸಮಾಜಕ್ಕೆ ಶೇ.6ರಷ್ಟು ಮೀಸಲಾತಿ ನೀಡುವ ಮೂಲಕ ಸಮಾಜದ ಅಭಿವೃದ್ಧಿಗೆ ಮುನ್ನುಡಿ ಬರೆದಿದ್ದಾರೆ ಎಂದು ಜಿಪಂ ಮಾಜಿ ಸದಸ್ಯೆ ಸುಧಾ ಮಹದೇವಯ್ಯ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ವರದಿಯನ್ವಯ ಮಾದಿಗ ಸಮುದಾಯಕ್ಕೆ ಶೇ.6ರಷ್ಟು ಮೀಸಲಾತಿ ನೀಡಲಾಗಿದ್ದು, ಇದರಿಂದ ಆ ಸಮಾಜದ ಜನರು ಹೆಚ್ಚಿನ ಅಭಿವೃದ್ಧಿ ಹೊಂದಲು ಸಾಧ್ಯವಾಗಲಿದೆ. ಇದಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.



ಮಾದಿಗ ಸಂಘಟನೆಗಳು ಹಲವು ದಶಕಗಳಿಂದ ಒಳ ಮೀಸಲಾತಿ ಜಾರಿ ಗೊಳಿಸುವಂತೆ ಒತ್ತಾಯಿಸಿ ಸಾಕಷ್ಟು ಚಳವಳಿ ಮಾಡಿದ್ದವು ಹಾಗೂ ನ್ಯಾಯಾಲಯದಲ್ಲಿಯೂ ಈ ಬಗ್ಗೆ ಸಾಕಷ್ಟು ವಾದ ಮಂಡನೆ ಮಾಡಲಾಗಿತ್ತು. ಅಂತಿಮವಾಗಿ ಹೈಕೋರ್ಟ್ ರಾಜ್ಯ ಸರ್ಕಾರ ಶೀಘ್ರ ಒಳ ಮೀಸಲಾತಿ ಜಾರಿಗೊಳಿಸುವಂತೆ ಸೂಚಿಸಿದ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗ ರಚಿಸಿ, ವರದಿಯನ್ನು ಸಚಿವ ಸಂಪುಟದಲ್ಲಿ ಮಂಡಿಸಿ ಮಾದಿಗ ಸಮುದಾಯದ ಎಡಗೈ ಸಮುದಾಯಕ್ಕೆ ಶೇ.6ರಷ್ಟು ಒಳ ಮೀಸಲಾತಿ ನೀಡಿದೆ. ಈ ನಿರ್ಧಾರವನ್ನು ಮಾದಿಗ ಸಮುದಾಯದ ಪ್ರತಿಯೊಬ್ಬರೂ ಸ್ವಾಗತಿಸುತ್ತೇವೆ. ಹಕ್ಕು ಮತ್ತು ಅವಕಾಶಗಳಿಗಾಗಿ ಅನೇಕ ವರ್ಷಗಳಿಂದ ಸಮುದಾಯಗಳು ಹೋರಾಟ ಮಾಡುವುದರ ಮೂಲಕ ಯಶಸ್ಸು ಸಾಧಿಸಿದೆ. ಸಮು ದಾಯದ ಒಗ್ಗಟಿನಿಂದ ಯಾವುದೇ ಸಾಧನೆ ಮಾಡಲು ಸಾಧ್ಯ ಎಂಬುದನ್ನು ಆದೇಶ ತೋರಿಸಿ ಕೊಟ್ಟಿದೆ ಎಂದರು. ಒಳ ಮೀಸಲಾತಿ ಜಾರಿಯಾಗದಂತೆ ನಾನಾ ಶಕ್ತಿಗಳು ಅಡ್ಡಗಾಲು ಹಾಕಿದರೂ ಸಿಎಂ ಸಿದ್ದರಾಮಯ್ಯ ಯಾವುದಕ್ಕೂ ಜಗ್ಗದೆ ನುಡಿದಂತೆ ನಡೆದಿದ್ದಾರೆ. ಅದರಲ್ಲೂ ಮಾದಿಗ ಸಮುದಾಯಕ್ಕೆ ಮೀಸಲಾತಿ ನೀಡಿಯೇ ಸಿದ್ಧ ಎಂದು ಅನೇಕ ವರ್ಷಗಳಿಂದ ಹೇಳುತ್ತಿದ್ದರು. ಅದು ಮಾತಿನಂತೆ ನಡೆದುಕೊಂಡಿದ್ದಾರೆ. ಹಾಗಾಗಿ ಮಾದಿಗ ಸಮುದಾಯ ಅವರಿಗೆ ಕೃತಜ್ಞರಾಗಿರು ತ್ತದೆ ಎಂದರು.

2023ರ ವಿಧಾನಸಭಾ ಚುನಾವಣೆ ಪ್ರಣಾಳಿಕೆಯಲ್ಲಿ ಒಳ ಮೀಸಲಾತಿ ಜಾರಿಗೆ ತರುವ ಆಶ್ವಾಸನೆಯನ್ನು ಕಾಂಗ್ರೆಸ್ ಪಕ್ಷ ನೀಡಿತ್ತು. ಅಲ್ಲದೇ ದೇಶದಲ್ಲಿ ಒಳ ಮೀಸಲಾತಿಯನ್ನು ತೆಲಂಗಾಣದ ನಂತರ ಜಾರಿಗೊಳಿಸಿದ ಎರಡನೇ ರಾಜ್ಯ ಕರ್ನಾಟಕವಾಗಿದೆ. ಒಳ ಮೀಸಲಾತಿ ಜಾರಿಯಾದ ಕೂಡಲೇ ಕೆಲ ನೇಮಕಾತಿ ಪ್ರಕ್ರಿಯೆಗಳಿಗೂ ಚಾಲನೆ ನೀಡಲು ತೀರ್ಮಾನಿಸಿ ವಯೋಮಿತಿ ಸಡಿಲಿಸಿರುವ ರಾಜ್ಯ ಸರ್ಕಾರದ ತೀರ್ಮಾನ ಸ್ವಾಗತಾರ್ಹ. ಒಳ ಮೀಸಲಾತಿಯಿಂದ ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಮತ್ತು ಆರ್ಥಿಕವಾಗಿ ಬದುಕನ್ನು ಸಮರ್ಥವಾಗಿ ಕಟ್ಟಿಕೊಂಡು ಸಮಾಜದ ಮುಖ್ಯ ವಾಹಿನಿಗೆ ಬರಲು ಅವಕಾಶ ಕಲ್ಪಿಸಿರುವ ರಾಜ್ಯ ಸರ್ಕಾರದ ನಡೆ ಶ್ಲಾಘನೀಯ ಎಂದರು.

ಸರಗೂರಲ್ಲಿ ಸಂಭ್ರಮದ ಗೌರಿಹಬ್ಬ ಆಚರಣೆ



ಮುತ್ತೈದೆಯರು ಬಾಗಿನ ಸಮರ್ಪಿಸಿ ಗೌರಿ ಹಬ್ಬ ಆಚರಿಸಿದರು.

ಸರಗೂರು, ಆ.26– ಪಟ್ಟಣದಲ್ಲಿ ಮುತ್ತೈದೆಯರಿಗೆ ಬಾಗಿನ ಸಮರ್ಪಿಸಿ ಗೌರಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು.

ಪಟ್ಟಣದ ಶ್ರೀಬಸವೇಶ್ವರ ದೇವಾಲಯದಲ್ಲಿ ಮುಂಜಾನೆಯೇ ದೇವಾಲಯ ಸ್ವಚ್ಛಗೊಳಿಸಿ ಕಪಿಲಾ ನದಿಗೆ ತೆರಳಿ ಮಂಗಳ ವಾದ್ಯಗಳೊಂದಿಗೆ ಗೌರಿ ಯನ್ನು ತಂದು ಪ್ರತಿಷ್ಠಾಪಿಸಲಾಯಿತು. ಬಳಿಕ ಮುತ್ತೈದೆಯರು ಕುಟುಂಬ ಸಮೇತ ರಾಗಿ ಆಗಮಿಸಿ ತಾಯಿಗೆ ಬಾಗಿನ ನೀಡಿ ಕುಟುಂಬದ ಸದಸ್ಯರ ಹೆಸರಿನಲ್ಲಿ ಪೂಜೆ ನೆರವೇರಿಸಿದರು. ಅಲ್ಲದೇ ಮುತ್ತೈದೆ ಭಾಗ್ಯ ಕರುಣಿಸುವಂತೆ ದೇವಿಯಲ್ಲಿ ಪ್ರಾರ್ಥಿಸಿಕೊಂಡು ಗೌರಿಗೆ ಸಮರ್ಪಿಸಿದ ಬಾಗಿನವನ್ನು ಮುತ್ತೈದೆಯರು ಬದಲಾಯಿಸಿಕೊಂಡರು. ಈ ವೇಳೆ ಪುರೋಹಿತ ರವಿಶಾಸ್ತ್ರಿ, ವಿರೂಪಾಕ್ಷ, ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಎಸ್.ಎನ್. ಮೋಹನ್ ಕುಮಾರ್, ಕಾರ್ಯಕಾರಿ ಮಂಡಳಿ ಮುಖಂಡರು ಸೇರಿದಂತೆ ಇನ್ನಿತರರಿದ್ದರು.

ಪುಟ್ಟಮಾದಮ್ಮ ನಿಧನ

ತಿ.ನರಸೀಪುರ, ಆ.26– ಪಟ್ಟಣದ ಪುರಸಭೆ ವ್ಯಾಪ್ತಿಯ ಜೆಎಸ್‌ಎಫ್ ಕಾಲೋನಿ ನಿವಾಸಿ, ನಿವೃತ್ತ ಸಿಲ್ಕ್ ಫ್ಯಾಕ್ಟರಿ ಉದ್ಯೋಗಿ ಲೇ. ರಾಚೇಗೌಡರ ಪತ್ನಿ ಪುಟ್ಟಮಾದಮ್ಮ(85) ಮಂಗಳವಾರ ನಿಧನರಾದರು.



ಮೃತರು ಫ್ಯಾನ್ಸಿ ಅಂಗಡಿ ವಿಷಕಂಠಮೂರ್ತಿ ಸೇರಿದಂತೆ ನಾಲ್ವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಬೆಳಗ್ಗೆ 10 ಗಂಟೆಗೆ ಪಟ್ಟಣದ ತೋಟಗೇರಿ ಮಾರಮ್ಮನ ದೇವಸ್ಥಾನದ ಬಳಿಯ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದಸರಾ ಗಜಪಡೆಯ ಸುಗ್ರೀವ ತೂಕದಲ್ಲಿ ನಂಬರ್ ಒನ್!


ಸುಗ್ರೀವ (5545 ಕೆಜಿ)


ಶ್ರೀಕಂಠ (5540 ಕೆಜಿ)


ಗೋಪಿ (4990 ಕೆಜಿ)


ರೂಪ (3320 ಕೆಜಿ)


ಹೇಮಾವತಿ (2440 ಕೆಜಿ)

ಎರಡನೇ ತಂಡದ ಆನೆಗಳಿಗೆ ತೂಕ ಪರೀಕ್ಷೆ

ಮೈಸೂರು,ಆ.26(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿರುವ ಗಜಪಡೆ ಎರಡನೇ ತಂಡದ ಆನೆಗಳಿಗೆ ಮಂಗಳವಾರ ತೂಕ ಪರೀಕ್ಷೆ ಮಾಡಲಾಗಿದ್ದು, ಸುಗ್ರೀವ ನಂಬರ್ ಒನ್ ಆಗಿ ಹೊರಹೊಮ್ಮಿದರೆ, ಹೊಸ ಆನೆ ಎರಡನೇ ಸ್ಥಾನದಲ್ಲಿ ಗುರುತಿಸಿಕೊಳ್ಳುವ ಮೂಲಕ ಗಮನ ಸೆಳೆದಿದೆ.

ಈ ಸಾಲಿನ ದಸರಾ ಮಹೋತ್ಸವ ಸೆ.22ರಿಂದ ಆರಂಭವಾಗಲಿದ್ದು, ಅ.2ರಂದು ಜಂಬೂಸವಾರಿ ಮೆರವಣಿಗೆ ನೆರವೇರಲಿದೆ. ಈ ಹಿನ್ನೆಲೆಯಲ್ಲಿ ಎರಡು ತಂಡದಲ್ಲಿ 14 ಆನೆಗಳನ್ನು ಕರೆತರಲಾಗಿದ್ದು, ಆ.4ರಂದು ಮೊದಲ ತಂಡದಲ್ಲಿ ದಸರಾ ಗಜಪಡೆಯ ನಾಯಕ ಅಭಿಮನ್ಯು ನೇತೃತ್ವದ 9 ಆನೆಗಳನ್ನು ಮೈಸೂರಿಗೆ ಕರೆತರಲಾಗಿತ್ತು. ಎರಡನೇ ತಂಡದಲ್ಲಿ ಮೂರು ಹೊಸ ಆನೆ ಸೇರಿದಂತೆ 5 ಆನೆಗಳು ನೆನ್ನೆ(ಆ.25)ಯಷ್ಟೇ ಅರಮನೆ ಆವರಣ ಪ್ರವೇಶಿಸಿದ್ದವು.

ತೂಕದಲ್ಲಿ ಸುಗ್ರೀವನೇ ಮೇಲುಗೈ: ಎರಡನೇ ತಂಡದ ಮೂರು ಗಂಡಾನೆ ಸೇರಿ 5 ಆನೆಗಳಿಗೆ ಇಂದು ಬೆಳಗ್ಗೆ ಮೈಸೂರಿನ ಧನ್ವಂತರಿ ರಸ್ತೆಯಲ್ಲಿರುವ ಸಾಯಿರಾಂ ಅಂಡ್ ಕಂ ತೂಕದ ಕೇಂದ್ರದಲ್ಲಿ ತೂಕ ಮಾಡಿಸಲಾಯಿತು. ಸುಗ್ರೀವ 5545 ಕೆಜಿ ತೂಗುವ ಮೂಲಕ ದಸರಾ ಗಜಪಡೆಯಲ್ಲೇ ತೂಕದಲ್ಲಿ ಟಾಪ್ ಒನ್ ಸ್ಥಾನ ಅಲಂಕರಿಸಿತು. ಇದೇ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿರುವ ಹೊಸ ಆನೆ ಶ್ರೀಕಂಠ 5540 ಕೆಜಿ ತೂಗುವ ಮೂಲಕ ಎರಡನೇ ಸ್ಥಾನದಲ್ಲಿ ಗುರುತಿಸಿಕೊಂಡರೆ, ಗೋಪಿ 4990, ಹೊಸ ಆನೆಗಳಾದ ರೂಪ 3320, ಹೇಮಾವತಿ 2440 ಕೆಜಿ ತೂಗಿದವು.

ಮೊದಲ ತಂಡದಲ್ಲಿ ಬಂದಿದ್ದ ಕಿರಿಯ ಗಂಡಾನೆ ಭೀಮ 5465 ಕೆಜಿ ತೂಕ ಹೊಂದಿದ್ದು, ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದಾನೆ. ಕ್ಯಾಪ್ಟನ್ ಅಭಿಮನ್ಯು 5360 ಕೆಜಿ ತೂಕವಿರುವುದರಿಂದ ನಾಲ್ಕನೆ ಸ್ಥಾನದಲ್ಲಿದೆ.

ಆ.11ರಂದು ಮೊದಲ ತಂಡದ ಆನೆಗಳಿಗೆ ತೂಕ ಮಾಡಿಸಲಾಗಿತ್ತು. ಆಗ ಪ್ರಶಾಂತ – 5110, ಧನಂಜಯ 5310, ಮಹೇಂದ್ರ –5120, ಏಕಲವ್ಯ – 5305, ಕಂಜನ್–4880, ಲಕ್ಷ್ಮಿ – 3730 ಹಾಗೂ ಕಾವೇರಿ –3010ಕೆಜಿ ತೂಕ ಹೊಂದಿದ್ದವು.

ಅರಮನೆ ಆವರಣದಲ್ಲಿ ಗಜಪಡೆಗೆ ಪೌಷ್ಟಿಕ ಆಹಾರ ನೀಡಲಾಗುತ್ತಿದ್ದು, ಆರೋಗ್ಯ ಕಾಪಾಡಿಕೊಳ್ಳಲು ಹೆಚ್ಚಿನ ಗಮನ ಕೇಂದ್ರೀಕರಿಸಲಾಗಿದೆ. ಜಂಬೂ ಸವಾರಿಗೂ ಮುನ್ನ ದಿನವಾದ ಆಯುಧ ಪೂಜೆ ದಿನ(ಅ.1) ಸಂಜೆ ಗಜಪಡೆಯ ಎಲ್ಲಾ 14 ಆನೆಗಳಿಗೂ ಮತ್ತೊಮ್ಮೆ ತೂಕ ಮಾಡಿಸಲಾಗುತ್ತದೆ. ಆ ಬಳಿಕ ಪೌಷ್ಟಿಕ ಆಹಾರ ನೀಡಿದ ಬಳಿಕ ಯಾವ ಯಾವ ಆನೆ ಎಷ್ಟು ಕೆಜಿ ತೂಕ ಹೆಚ್ಚಿಸಿಕೊಂಡಿವೆ ಎಂದು ಗಮನಿಸಲಾಗುತ್ತದೆ.

ಇಂದು ತೂಕ ಹಾಕುವ ವೇಳೆ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಅರಮನೆ ಭದ್ರತಾ ಪಡೆಯ ಎಸಿಪಿ ಚಂದ್ರಶೇಖರ್, ಪಶುವೈದ್ಯ ಡಾ. ಆದರ್ಶ್, ಆರ್‌ಎಫ್‌ಓ ನದೀಮ್, ಸಹಾಯಕರಾದ ರಂಗರಾಜು, ಅಕ್ರಂ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಇಂದ್ರ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕೂಲಿ (ಕ) + ಕೂಲಿ (ತ)	2+2 ಪ್ರದರ್ಶನಗಳು
ಬಾಲಾಜಿ	(ದೂ: 2497199)
ವಾರ್ –2 (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ವಾರ್–2 (ತೆ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ಹಚ್ಚೆ (ಕ) + ವಾರ್–2 (ತೆ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಜಸ್ಟ್ ಮ್ಯಾರಿಡ್ (ಕ) + ಕಮರೊ2 (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಸು ಫ್ರಂ ಸೋ (ಕ): ಬೆ.10ಕ್ಕೆ, ಮ.3.55ಕ್ಕೆ, ವಾರ್–2 (ಹಿಂ): ಮ.12.40ಕ್ಕೆ, ಕೂಲಿ (ಕ): ಸಂ.6.35ಕ್ಕೆ, ಕೂಲಿ (ತ): ರಾ.9.40ಕ್ಕೆ
ಸ್ಕ್ರೀನ್ 2	ಕೂಲಿ (ತ): ಬೆ.6.45ಕ್ಕೆ, ಬೆ.10ಕ್ಕೆ, ಸಂ.4.35ಕ್ಕೆ, ರಾ.7.50ಕ್ಕೆ, ವಾರ್–2 (ಹಿಂ): ಮ.1.15ಕ್ಕೆ.
ಸ್ಕ್ರೀನ್ 3	ವಾರ್–2 (ಹಿಂ): ಬೆ.10.05ಕ್ಕೆ, ಸು ಫ್ರಂ ಸೋ (ಕ): ಮ.1.20ಕ್ಕೆ, ರಾ.7.10ಕ್ಕೆ, ಕೂಲಿ (ಕ): ಸಂ.4ಕ್ಕೆ, ಕೂಲಿ (ತ): ರಾ.9.50ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಬೆ.10.15ಕ್ಕೆ, ಸಂ.4ಕ್ಕೆ, ಕೂಲಿ (ಕ): ಮ.12.45ಕ್ಕೆ, ವಾರ್–2 (ಹಿಂ): ಸಂ.6.35ಕ್ಕೆ, ರಾ.9.55ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಣ್ಣಿನ ಗಣಪತಿಗೆ ಭಾರಿ ಡಿಮ್ಯಾಂಡ್


ಗಣಪತಿ ಮೂರ್ತಿ ಖರೀದಿಯಲ್ಲಿ ತೊಡಗಿರುವ ಜನ.

ಮೈಸೂರು,ಆ.26(ಎಂಟಿವೈ)– ಗಣೇಶ ಹಬ್ಬದ ಅಂಗವಾಗಿ ಮೈಸೂರಲ್ಲಿ ಮಣ್ಣಿನ ಗಣಪನ ಮೂರ್ತಿ ಖರೀದಿ ಜೋರಾಗಿದೆ.

ಮನೆಗಳಲ್ಲಿ ಗಣಪನ ಮೂರ್ತಿಯ ಪ್ರತಿಷ್ಠಾಪಿಸಿ, ಪೂಜಿಸುವುದಕ್ಕಾಗಿ ಚಿಕ್ಕ ಚಿಕ್ಕ ಮಣ್ಣಿನ ಗಣಪನ ಮೂರ್ತಿ ಖರೀದಿಸಲು ಜನ ಮುಗಿಬಿದ್ದರು. ಮೈಸೂರಿನ ಕೆ.ಟಿ.ಸ್ಟ್ರೀಟ್, ಕುಂಬಾರಗೇರಿ, ಸಯ್ಯಾಜಿರಾವ್ ರಸ್ತೆ, ಚಾಮುಂಡಿಪುರಂ, ನಂಜುಮಳಿಗೆ, ಟೆರೆಷಿಯನ್ ಕಾಲೇಜು ವೃತ್ತ, ಸಿದ್ದಾರ್ಥನಗರ, ಪಡುವಾರಹಳ್ಳಿ, ಗೋಕುಲಂ, ಒಂಟಿಕೊಪ್ಪಲ್ ಸೇರಿದಂತೆ ವಿವಿಧೆಡೆ ಮಣ್ಣಿನ ಗಣಪನ ಮೂರ್ತಿಗಳ ಮಾರಾಟ ಬಿರುಸಾಗಿ ಸಾಗಿತು. ಬೆಳಗ್ಗೆಯಿಂದ ಸಂಜೆವರೆಗೂ ಗಣಪತಿ ವಿಗ್ರಹ ಮಾರಾಟ ಜೋರಾಗಿತ್ತು.

ಪರಿಸರದ ಮೇಲೆ ದುಷ್ಪರಿಣಾಮ ಬೀರದಂತೆ ಪರಿಸರ ಸ್ನೇಹಿ ಗಣಪನನ್ನೇ ಪೂಜಿಸುವಂತೆ ಮೈಸೂರು ಮಹಾನಗರ ಪಾಲಿಕೆ ಜಾಗೃತಿ ಮೂಡಿಸಿದ್ದ ಹಿನ್ನೆಲೆಯಲ್ಲಿ ಜನರಲ್ಲಿ ಪರಿಸರ ಪ್ರಜ್ಞೆ ಮೂಡಿದ್ದು, ಆ ಕಾರಣದಿಂದ ಮಣ್ಣಿನ ಗಣಪನ ಮೂರ್ತಿಗೆ ಬೇಡಿಕೆ ಹೆಚ್ಚಾಗಿತ್ತು.

ಬೀದಿ ಹಾಗೂ ಬಡಾವಣೆಗಳಲ್ಲಿ ಪ್ರತಿಷ್ಠಾಪಿಸಲು ಎತ್ತರದ ಪೇಪರ್ ಮೌಲ್ಡ್ ಗಣಪನ ಮೂರ್ತಿಗಳಿಗೆ ಬೇಡಿಕೆ ಹೆಚ್ಚಾಗಿತ್ತು. ಸಂಜೆ ನಂತರ ಗಣಪತಿ ಮೂರ್ತಿ ಭರಾಟೆ ಹೆಚ್ಚಾಗಿತ್ತು. ಅದರಲ್ಲೂ ದೇವರಾಜ ಮಾರುಕಟ್ಟೆ, ಸಯ್ಯಾಜಿರಾವ್ ರಸ್ತೆ ಸೇರಿದಂತೆ ವಿವಿಧೆಡೆ ಗಣಪತಿ ಮೂರ್ತಿ ಖರೀದಿಗೆ ಹೆಚ್ಚಿನ ಜನ ಬಂದಿದ್ದ ಹಿನ್ನೆಲೆಯಲ್ಲಿ ಟ್ರಾಫಿಕ್ ಜಾಮ್ ಉಂಟಾಗುತ್ತಿತ್ತು.

ಹೆಬ್ಬಾಳ್ ಹೊಯ್ಸಳ ಯುವ ವೇದಿಕೆಯಿಂದ ಗಣೇಶ ಪೂಜಾ ಮಹೋತ್ಸವ



ಮೈಸೂರು, ಆ. 26– ಮೈಸೂರು ಹೆಬ್ಬಾಳ್ ಬಡಾವಣೆಯ ಹೊಯ್ಸಳ ಯುವ ವೇದಿಕೆಯಿಂದ 31ನೇ ವರ್ಷದ ಗಣೇಶ ಪೂಜಾ ಮಹೋತ್ಸವದ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ನಾಳೆ ಬೆಳಗ್ಗೆ 10.30ಕ್ಕೆ ಶ್ರೀ ಮಹಾಗಣಪತಿ ಪ್ರತಿಷ್ಠಾಪನೆ, ಆ. 28ರಂದು ಸಂಜೆ 4 ಗಂಟೆಗೆ ಮಕ್ಕಳು ಮತ್ತು ಮಹಿಳೆಯರಿಗೆ ಆಟೋಟ ಹಾಗೂ ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಆ. 29ರಂದು ಬೆಳಗ್ಗೆ 10 ಗಂಟೆಗೆ ಶ್ರೀ ಗಣಪತಿ ಹೋಮ, ಮಧ್ಯಾಹ್ನ 12 ಗಂಟೆಗೆ ಅನ್ನಸಂತರ್ಪಣೆ ನಡೆಯಲಿದೆ.

ಆ. 30ರಂದು ಸಂಜೆ 5 ಗಂಟೆಗೆ ಹೊಯ್ಸಳ ಪ್ರೀಮಿಯರ್ ಲೀಗ್ ಪಂದ್ಯ ಮತ್ತು ಆ. 31ರಂದು ಭಾನುವಾರ ಸಂಜೆ 6 ಗಂಟೆಗೆ ಅದ್ಧೂರಿ ಮೆರವಣಿಗೆ ಮೂಲಕ ಶ್ರೀ ಮಹಾಗಣಪತಿಯ ವಿಸರ್ಜನೆ ಮಾಡಲಾಗುವುದು ಎಂದು ಹೊಯ್ಸಳ ಯುವ ವೇದಿಕೆ ಪ್ರಕಟಣೆಯಲ್ಲಿ ತಿಳಿಸಿದೆ.

ಧರ್ಮಸ್ಥಳ ಪ್ರಕರಣ

ತನಿಖೆ ಶೀಘ್ರವೇ ಪೂರ್ಣಗೊಂಡು ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ಆಗಬೇಕು

ಶಾಸಕ ಜಿ.ಟಿ.ದೇವೇಗೌಡರ ಆಗ್ರಹ



ಮೈಸೂರು, ಆ.26(ಎಂಕೆ)– ಧರ್ಮಸ್ಥಳದಲ್ಲಿ ನಡೆಯುತ್ತಿರುವ ಎಸ್‌ಐಟಿ ತನಿಖೆಯನ್ನು ಶೀಘ್ರವೇ ಮುಕ್ತಾಯಗೊಳಿಸಿ, ಸತ್ಯಾಸತ್ಯತೆ ಹೊರ ತಂದು ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸುವ ಮೂಲಕ ರಾಜ್ಯದ ಆರೂವರೆ ಕೋಟಿ ಜನರಿಗೆ ನೆಮ್ಮದಿ ತರುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕು ಎಂದು ಶಾಸಕ ಜಿ.ಟಿ.ದೇವೇಗೌಡರು ಆಗ್ರಹಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿರುವ ತಮ್ಮ ಕಚೇರಿಯಲ್ಲಿ ಮಾಧ್ಯಮಗಳಿಗೆ ಧರ್ಮಸ್ಥಳದಲ್ಲಿ ನಡೆಯುತ್ತಿರುವ ತನಿಖೆ ಕುರಿತು ಪ್ರತಿಕ್ರಿಯಿಸಿದರು. ಸರ್ಕಾರವೇ ಇದೊಂದು ಷಡ್ಯಂತರ ಎಂದು ಹೇಳಿದೆ. ಅಲ್ಲದೆ ಕಳೆದ ಒಂದೆರಡು ತಿಂಗಳಿಂದ ಧರ್ಮಸ್ಥಳದಲ್ಲಿ ನಡೆಯುತ್ತಿರುವ ತನಿಖೆ ನೋಡಿ ರಾಜ್ಯದ ಜನರ ಮನಸ್ಸಿಗೆ ನೋವಾಗಿದೆ. ಹಾಗಾಗಿ ರಾಜ್ಯ ಸರ್ಕಾರ ಶೀಘ್ರವೇ ತನಿಖೆ ಪೂರ್ಣಗೊಳಿಸಬೇಕು ಎಂದರು.

ಧರ್ಮಸ್ಥಳವಾಗಲೀ... ವೀರೇಂದ್ರ ಹೆಗಡೆಯವರಾಗಲೀ ಟಾರ್ಗೆಟ್ ಅಲ್ಲ. ಅವರನ್ನು ಟಾರ್ಗೆಟ್ ಮಾಡಲು ಸಾಧ್ಯವಿಲ್ಲ. ಸತ್ಯವೇ ಉಳಿಯಲಿದ್ದು, ಕೊನೆಗೆ ಸತ್ಯ ಜನರಿಗೆ ಗೊತ್ತಾಗಲಿದೆ. ಸರ್ಕಾರ ತನಿಖಾ ದೃಷ್ಟಿಯಿಂದ ಎಸ್‌ಐಟಿ ತಂಡ ರಚಿಸಿ, ತನಿಖೆ ನಡೆಸುತ್ತಿದೆ. ಸತ್ಯಾಸತ್ಯತೆ ಹೊರತಂದು ಅದರ ಕ್ರೆಡಿಟ್ ಅನ್ನು ಸರ್ಕಾರವೇ ಪಡೆದುಕೊಳ್ಳಲಿ ಎಂದರು.

ಚಾಮುಂಡೇಶ್ವರಿ ಮೇಲೆ ನಂಬಿಕೆ ಇದ್ದರೆ ಬರ್ತಾರೆ...!

ದಸರಾ ಉದ್ಘಾಟಕರಾಗಿ ಸಾಹಿತಿ ಬಾನು ಮುಷ್ತಾಕ್ ಆಯ್ಕೆ ಕುರಿತು ಪರ–ವಿರೋಧ ಚರ್ಚೆಗೆ ಪ್ರತಿಕ್ರಿಯಿಸಿದ ಜಿಟಿಡಿ, ಪ್ರತೀ ವರ್ಷ ಮಠಾಧೀಶರು, ಸಾಹಿತಿಗಳು, ಸಾಧಕರಿಂದ ದಸರಾ ಉದ್ಘಾಟನೆ ಮಾಡಿಸಲಾಗುತ್ತದೆ. ದಸರಾ ಹೈ ಪವರ್ ಕಮಿಟಿ ಸಭೆಯಲ್ಲಿ ಚರ್ಚಿಸಿ, ಉದ್ಘಾಟಕರ ಆಯ್ಕೆ ಅಧಿಕಾರವನ್ನು ಮುಖ್ಯಮಂತ್ರಿಗಳಿಗೆ ನೀಡಲಾಗುತ್ತದೆ. ಅದರಂತೆ ಮುಖ್ಯಮಂತ್ರಿಗಳು ಬಾನು ಮುಷ್ತಾಕ್ ಅವರ ಹೆಸರನ್ನು ಸೂಚಿಸಿದ್ದು, ತಾಯಿ ಚಾಮುಂಡೇಶ್ವರಿ ಮೇಲೆ ಅವರಿಗೆ ನಂಬಿಕೆ ಇದ್ದರೆ ಬಂದು ಉದ್ಘಾಟನೆ ಮಾಡುತ್ತಾರೆ. ಇಲ್ಲವಾದರೆ ಬರಲ್ಲ. ಹಾಗಾಗಿ ಧರ್ಮದ ವಿಚಾರ ತಂದು ವಿರೋಧ ಮಾಡುವುದು ಸರಿಯಲ್ಲ.

– ಜಿ.ಟಿ.ದೇವೇಗೌಡರು, ಶಾಸಕ

ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್‌ಗೆ ಆಹ್ವಾನಕ್ಕೆ ಆಕ್ಷೇಪ ಸರಿಯಲ್ಲ


ಎನ್. ಭಾಸ್ಕರ್

ಮೈಸೂರು, ಆ.26(ಎಂಕೆ)– ದಸರಾ ಉದ್ಘಾಟನೆಗೆ ಬೂಕರ್ ಪ್ರಶಸ್ತಿ ವಿಜೇತ ಲೇಖಕಿ, ಹೋರಾಟಗಾರ್ತಿ ಬಾನು ಮುಷ್ತಾಕ್ ಆಯ್ಕೆಗೆ ತಗಾದೆ ತೆಗೆದಿರುವ ಮಾಜಿ ಸಂಸದ ಪ್ರತಾಪಸಿಂಹನಿಗೆ ಮತೀಯ ಪಿತ್ತ ನೆತ್ತಿಗೇರಿದೆ ಎಂದು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್. ಭಾಸ್ಕರ್ ಕಿಡಿಕಾರಿದ್ದಾರೆ.

ಎಲ್ಲದರಲ್ಲೂ ಧರ್ಮ ಹುಡುಕುವುದು ಬಿಜೆಪಿಯ ಕೆಲವು ಬಾಯಿ ಬಡುಕರ ಕೆಲಸವಾಗಿದೆ. ಮುಸ್ಲಿಂರ ಹೆಸರು ಪ್ರಸ್ತಾಪವಾಗುತ್ತಿದ್ದಂತೆಯೇ ಕಾರ್ಯಪ್ರವೃತ್ತರಾಗಿ ನಾಲಿಗೆ ಹರಿಬಿಡುತ್ತಾರೆ. ಕವಿ ನಿಸಾರ್ ಅಹಮದ್ ಅವರು ದಸರಾ ಉದ್ಘಾಟಕರಾಗಿದ್ದ ಸಂದರ್ಭದಲ್ಲಿ ಇದೇ ಪ್ರತಾಪ ಸಿಂಹ ಫೋಟೋ ತೆಗೆಸಿಕೊಂಡಿದ್ದು, ಈಗೇಕೆ ಆಕ್ಷೇಪ ತೆಗೆದಿದ್ದಾರೆ. ಪ್ರತಾಪ್ ಸಿಂಹನಿಗೆ ತನ್ನ ಪಕ್ಷದೊಳಗೆ ಬೆಲೆ ಇಲ್ಲ. ಸಮಾಜವನ್ನು ಪ್ರಕ್ಷುಬ್ಧಗೊಳಿಸುವ ಹೇಳಿಕೆಗಳ ಮೂಲಕ ಪ್ರಸ್ತುತನಾಗಲು ಹವಣಿಸುತ್ತಿದ್ದಾನೆ. ಅಹಂಕಾರದ ಮಾತುಗಳು, ಎಲ್ಲದರಲ್ಲೂ ಧರ್ಮ ಹುಡುಕುವ ನೀಚ ಮನಸ್ಥಿತಿಗೆ ಜನರೇ ಬುದ್ಧಿ ಕಲಿಸುತ್ತಾರೆ ಎಂದು ಟೀಕಿಸಿದ್ದಾರೆ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಕನ್ನಡದ ಕೀರ್ತಿಯನ್ನು ಬೆಳಗಿದ ಬಾನು ಮುಷ್ತಾಕ್ ಅವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸಿರುವ ಸರ್ಕಾರದ ನಿರ್ಧಾರ ಸ್ವಾಗತಾರ್ಹವಾಗಿದೆ. ಇದನ್ನು ವಿರೋಧಿಸುವವರು ಮತಿಗೇಡಿಗಳು. ಅವರೆಲ್ಲರಿಗೂ ಧಿಕ್ಕಾರ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆ.29ರಂದು ವಿಶೇಷ ಉಪನ್ಯಾಸ ಕಾರ್ಯಕ್ರಮ

ಮೈಸೂರು,ಆ.26– ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ಆ.29ರಂದು ಬೆಳಗ್ಗೆ 11 ಗಂಟೆಗೆ ಪುರಾತತ್ವ ಇಲಾಖೆ ಆಯುಕ್ತರ ಕಚೇರಿಯಲ್ಲಿ (ಕರ್ನಾಟಕ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ) ಕರ್ನಾಟಕದ ದೇವಾಲಯಗಳ 'ಕಲೆ ಮತ್ತು ವಾಸ್ತುಶಿಲ್ಪ' ಕುರಿತು ಮಾಸಿಕ ಸರಣಿ ವಿಶೇಷ ಉಪನ್ಯಾಸವನ್ನು ಹಮ್ಮಿಕೊಂಡಿದ್ದು, ಸಂಪನ್ಮೂಲ ವ್ಯಕ್ತಿಗಳಾಗಿ ಇತಿಹಾಸ ತಜ್ಞ ಡಾ.ಮನೋಜ್ ಪಾಲ್ಗೊಳ್ಳಲಿದ್ದಾರೆ. ಉಪನ್ಯಾಸ ಕಾರ್ಯಕ್ರಮದಲ್ಲಿ ಆಸಕ್ತ ವಿದ್ಯಾರ್ಥಿಗಳು, ಇತಿಹಾಸ ಆಸಕ್ತರು, ಸಂಶೋಧಕರು ಹಾಗೂ ಸಾರ್ವಜನಿಕರು ಉಚಿತವಾಗಿ ಭಾಗವಹಿಸಬಹುದು. ಮಾಹಿತಿಗಾಗಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತರ ಕಚೇರಿ ದೂ.ಸಂ. 0821–2424671 ಅನ್ನು (ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ) ಸಂಪರ್ಕಿಸಬಹುದು ಎಂದು ಇಲಾಖೆಯ ಉಪನಿರ್ದೇಶಕರು (ಪರಂಪರೆ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಲವಾಲದ ಆರ್‌ಎಂಪಿ ಕ್ಯಾಂಪಸ್‌ನಲ್ಲಿ ಹುಲಿ ಪ್ರತ್ಯಕ್ಷ

- ಗಸ್ತಿನಲ್ಲಿದ್ದ ಭದ್ರತಾ ಸಿಬ್ಬಂದಿ ಕಣ್ಣಿಗೆ ಬಿದ್ದ ಹುಲಿ
- ದಿಣ್ಣೆ ಮೇಲೆ ಕುಳಿತು ದಿಟ್ಟಿಸಿದ ಹುಲಿ
- ಇಲವಾಲದ ಅರಣ್ಯದಿಂದ ಸ್ಥಳ ಬದಲಿಸಿರುವ ಶಂಕೆ
- ಮೈಸೂರು-ಹುಣಸೂರು ಮುಖ್ಯ ರಸ್ತೆ ದಾಟಿರುವ ಅನುಮಾನ

ಮೈಸೂರು, ಆ.26(ಎಂಟಿವೈ)– ಮೈಸೂರು ತಾಲೂಕಿನ ಇಲವಾಲ ಬಳಿ ಇರುವ ಆರ್‌ಎಂಪಿ ಕ್ಯಾಂಪಸ್‌ನಲ್ಲಿ ಸೋಮವಾರ ಸಂಜೆ ಗಸ್ತು ತಿರುಗುತ್ತಿದ್ದ ಭದ್ರತಾ ಸಿಬ್ಬಂದಿ ಕಣ್ಣಿಗೆ ಹುಲಿ ಬಿದ್ದಿದೆ.

ಆರ್‌ಎಂಪಿ ಕ್ಯಾಂಪಸ್ ದಿಣ್ಣೆ ಮೇಲೆ ಹುಲಿ ಮಲಗಿದ್ದು, ವಾಹನದಲ್ಲಿ ಗಸ್ತು ತಿರುಗುತ್ತಿದ್ದ ಭದ್ರತಾ ಸಿಬ್ಬಂದಿಯನ್ನು ದಿಟ್ಟಿಸಿ ನೋಡಿದೆ. ಆ ದೃಶ್ಯವನ್ನು ಭದ್ರತಾ ಸಿಬ್ಬಂದಿ ಚಿತ್ರೀಕರಿಸಿದ್ದಾರೆ. ಆರ್‌ಎಂಪಿ ಕ್ಯಾಂಪಸ್‌ನಲ್ಲಿ ಕಂಡ ಹುಲಿ ಯಾವುದು ಎಂದು ಪರಿಶೀಲಿಸಲು ಅರಣ್ಯ ಇಲಾಖೆ ಮುಂದಾಗಿದೆ.

ಇಲವಾಲದ ಕಿರು ಅರಣ್ಯದಲ್ಲಿ ಕಳೆದ ಒಂದು ವಾರದಿಂದ ಎರಡು ಮರಿಗಳೊಂದಿಗೆ ಬೀಡು ಬಿಟ್ಟಿದ್ದ ತಾಯಿ ಹುಲಿ ಆರ್‌ಎಂಪಿ ಕ್ಯಾಂಪಸ್‌ಗೆ ಸ್ಥಳಾಂತರಗೊಂಡಿರುವ ಶಂಕೆಯೂ ವ್ಯಕ್ತವಾಗಿದೆ. ಆದರೆ, ಕ್ಯಾಂಪಸ್‌ನಲ್ಲಿ ದೊಡ್ಡ ಹುಲಿ ಮಾತ್ರ ಕಂಡುಬಂದಿದ್ದು, ಮರಿಗಳ ಬಗ್ಗೆ ಸುಳಿವು ಸಿಕ್ಕಿಲ್ಲ. ಇದರಿಂದ ಆರ್‌ಎಂಪಿ ಕ್ಯಾಂಪಸ್‌ನಲ್ಲಿರುವುದು ಬೇರೆ ಹುಲಿಯೇ ಎಂಬ ಪ್ರಶ್ನೆ ಕಾಡಲಾರಂಭಿಸಿದೆ. ಇಲವಾಲದ ಅರಣ್ಯದಲ್ಲಿದ್ದ ಹುಲಿಯೇ ಸ್ಥಳ ಬದಲಿಸಿದ್ದರೆ, ಅವುಗಳ ಮರಿಗಳು ಎಲ್ಲಿ ಹೋದವು ಎಂಬ ಅನುಮಾನ ಮೂಡಿದೆ.

ಹುಲಿ ಪ್ರತ್ಯಕ್ಷವಾಗಿರುವ ಆರ್‌ಎಂಪಿ ಕ್ಯಾಂಪಸ್ ಹುಣಸೂರು ಅರಣ್ಯ ವಲಯ ವ್ಯಾಪ್ತಿಗೆ ಸೇರಲಿದ್ದು, ಈ ಹಿನ್ನೆಲೆಯಲ್ಲಿ ಹುಣಸೂರು ಡಿಸಿಎಫ್ ಫಯಾಜ್ ಹಾಗೂ ಸಿಬ್ಬಂದಿ ತಂಡ ಆರ್‌ಎಂಪಿ ಕ್ಯಾಂಪಸ್‌ಗೆ ಭೇಟಿ ನೀಡಿ ಪರಿಶೀಲಿಸಿದೆ. ಅಲ್ಲದೆ, ಆರ್‌ಎಂಪಿ ಸಿಬ್ಬಂದಿಗೆ ಧೈರ್ಯ ತುಂಬುವ ಪ್ರಯತ್ನ ಮಾಡಿದ್ದು, ಹುಲಿಗಳ ಬಗ್ಗೆ ಹಾಗೂ ಅವುಗಳ ಸ್ವಭಾವದ ಮನವರಿಕೆ ಮಾಡಿಕೊಟ್ಟು, ಗಾಬರಿಯಾಗದಂತೆ ಸಲಹೆ ನೀಡಿದ್ದಾರೆ.

ಕ್ಯಾಂಪಸ್‌ನಲ್ಲಿ ಕೂಂಬಿಂಗ್ ಕಾರ್ಯಾಚರಣೆ ನಡೆಸಲು ನಿರ್ಧರಿಸಲಾಗಿದ್ದು, ಹುಲಿ ಸೆರೆಗಾಗಿ ಬೋನ್ ಇಡಲು ಕ್ರಮ ಕೈಗೊಳ್ಳಲಾಗಿದೆ. ಸ್ಥಳದಲ್ಲಿ ಹುಣಸೂರು ವಲಯದ ಅರಣ್ಯ ಸಿಬ್ಬಂದಿ ಬೀಡು ಬಿಟ್ಟಿದ್ದು, ಹುಲಿ ಚಲನವಲನ ಗಮನಿಸಲು ಕ್ಯಾಮರಾ ಟ್ರ್ಯಾಪ್ ಅಳವಡಿಸಲು ಉದ್ದೇಶಿಸಲಾಗಿದೆ.

ಇಲವಾಲದ ಹುಲಿಯೇ ಇರಬಹುದು: ಇಲವಾಲದ ಅರಣ್ಯ ಪ್ರದೇಶದಲ್ಲಿ ಆ.13ರಂದು ಸಂಜೆ ಅಲೋಕ ಬಳಿ ಬೈಪಾಸ್ ರಸ್ತೆ ದಾಟುತ್ತಿದ್ದ ದೃಶ್ಯ ಸ್ಥಳೀಯರು ಗಮನಿಸಿದ್ದರು. ಮರುದಿನವೇ ಅರಣ್ಯ ಇಲಾಖೆ ಕೂಂಬಿಂಗ್ ಕಾರ್ಯಾಚರಣೆ ನಡೆಸಿ, ಕ್ಯಾಮರಾ ಟ್ರ್ಯಾಪ್ ಅಳವಡಿಸಿತ್ತು ಕ್ಯಾಮರಾ ಟ್ರ್ಯಾಪ್‌ನಲ್ಲಿ ಎರಡು ಮರಿಗಳೊಂದಿಗೆ ತಾಯಿ ಹುಲಿಯ ಚಲನವಲನದ ದೃಶ್ಯ ಸೆರೆ ಸಿಕ್ಕಿತ್ತು. ಈ ಹಿನ್ನೆಲೆಯಲ್ಲಿ ಸುತ್ತಮುತ್ತಲಿನ ಗ್ರಾಮಗಳ ಜನರಲ್ಲಿ ಹುಲಿ ಇರುವಿಕೆ ಬಗ್ಗೆ ಜಾಗೃತಿ ಮೂಡಿಸಲಾಗಿತ್ತು.

ಒಂದು ವೇಳೆ ಆರ್‌ಎಂಪಿ ಕ್ಯಾಂಪಸ್‌ನಲ್ಲಿ ಕಂಡುಬಂದ ಹುಲಿ ಇಲವಾಲದ ಅರಣ್ಯದಲ್ಲಿ ಇದ್ದ ಹುಲಿಯೇ ಆಗಿದ್ದರೆ, ಅದು ಸುರಕ್ಷಿತ ಸ್ಥಳ ಹುಡುಕುತ್ತಾ ಮುಂದೆ ಸಾಗುತ್ತಿದೆ ಎಂಬ ಶಂಕೆ ಮೂಡಿದೆ. ಅದರಲ್ಲೂ ವಾಹನ ದಟ್ಟಣೆಯಿಂದ ಕೂಡಿರುವ ಮೈಸೂರು–ಹುಣಸೂರು ಮುಖ್ಯ ರಸ್ತೆಯನ್ನು ದಾಟುವ ಸಾಹಸ ಮಾಡಿದೆಯೇ ಎಂಬ ಪ್ರಶ್ನೆ ಅರಣ್ಯಾಧಿಕಾರಿಗಳಲ್ಲಿ ಕಾಡುತ್ತಿದೆ. ತಾಯಿ ಸಲೀಸಾಗಿ ದಾಟಿದ್ದರೆ, ಮರಿಗಳು ವಾಹನಗಳು ಸಾಗುವ ರಸ್ತೆಯನ್ನು ದಾಟುವುದು ಸುಲಭವಲ್ಲ. ಈ ಹಿನ್ನೆಲೆಯಲ್ಲಿ ತಾಯಿ ಹುಲಿ ಸುರಕ್ಷಿತವಾಗಿ ವಾಹನ ಸವಾರರ ಕಣ್ತಪ್ಪಿಸಿ ರಸ್ತೆ ದಾಟಿದ್ದರೆ, ಮರಿಗಳು ರಸ್ತೆ ದಾಟಲು ಸಾಧ್ಯವಾಗದೇ ಇಲವಾಲ ಅಥವಾ ಅಲೋಕದ ಅರಣ್ಯ ಪ್ರದೇಶಕ್ಕೆ ವಾಪಸ್ಸಾಗಿರುವ ಶಂಕೆಯೂ ಮೂಡಿದೆ.


ಇಲವಾಲ ಸಮೀಪದ ಆರ್‌ಎಂಪಿ ಕ್ಯಾಂಪಸ್‌ನಲ್ಲಿ ಕುಳಿತಿರುವ ಹುಲಿ.

ಹುಲಿ ಸಂಚರಿಸುವ ಸ್ಥಳ ಗುರುತಿಸಿ ವಾಹನದ ವೇಗಕ್ಕೆ ತಾತ್ಕಾಲಿಕ ಕಡಿವಾಣ ಹಾಕಲು ಮನವಿ

ಇಲವಾಲ ಅರಣ್ಯ, ಅಲೋಕದ ಕಡೆಯಿಂದ ಆರ್‌ಎಂಪಿ ಕ್ಯಾಂಪಸ್ ಕಡೆ ಹುಲಿ ಹೋಗಿರಬಹುದಾದ ಅಥವಾ ಹೋಗಲು ಆಯ್ಕೆ ಮಾಡಿಕೊಳ್ಳುವ ಸ್ಥಳ ಗುರುತಿಸಿ ಅರಣ್ಯ ಇಲಾಖೆ ಆ ಸ್ಥಳದಲ್ಲಿ ಮೈಸೂರು–ಹುಣಸೂರು ಮುಖ್ಯ ರಸ್ತೆಯಲ್ಲಿ ತಾತ್ಕಾಲಿಕವಾಗಿ ವಾಹನಗಳ ವೇಗಕ್ಕೆ ಕಡಿವಾಣ ಹಾಕಲು ಬ್ಯಾರಿಕೇಡ್ ಅಳವಡಿಸುವಂತೆ ಪರಿಸರ ಪ್ರೇಮಿಗಳು ಆಗ್ರಹಿಸಿದ್ದಾರೆ. ಹುಲಿಗಳ ಸಂರಕ್ಷಣೆ ಸವಾಲಾಗಿರುವುದರಿಂದ ಇಲವಾಲ, ಆರ್‌ಎಂಪಿ ಕ್ಯಾಂಪಸ್‌ನಲ್ಲಿರುವ ಹುಲಿಗಳ ಸಂರಕ್ಷಣೆ ಹಾಗೂ ಹುಲಿಗಳಿಂದ ಜನರಿಗೆ ಯಾವುದೇ ತೊಂದರೆಯಾಗದಂತೆ ಕಟ್ಟೆಚ್ಚರ ವಹಿಸುವಂತೆ ಮನವಿ ಮಾಡಿದ್ದಾರೆ.

ಮೈಸೂರಲ್ಲಿ ಭಕ್ತಿ–ಭಾವದಿಂದ ಗೌರಿ ವ್ರತ ಆಚರಣೆ


ಮೈಸೂರಿನ ಇಟ್ಟಿಗೆಗೂಡು ಬಡಾವಣೆಯಲ್ಲಿರುವ ಕರಗ ದೇವಾಲಯದಲ್ಲಿ ಗೌರಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿ, ಮಹಿಳೆಯರು ಬಾಗಿನ ನೀಡಿದರು.

ಮೈಸೂರು, ಆ.26(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಮಂಗಳವಾರ ಸ್ವರ್ಣಗೌರಿ ವ್ರತವನ್ನು ಹೆಂಗಳೆಯರು ಸಂಭ್ರಮ, ಸಡಗರದಿಂದ ಆಚರಿಸಿ, ಮುತ್ತೈದೆಯರಿಗೆ ಬಾಗಿನ ಅರ್ಪಿಸಿ ಶುಭ ಕೋರಿದರು.

ಗಣಪತಿ ಹಬ್ಬದ ಮುನ್ನ ದಿನ ಸ್ವರ್ಣಗೌರಿ ವ್ರತ ಆಚರಿಸುವ ಪದ್ಧತಿಯಿದ್ದು, ಈ ಹಿನ್ನೆಲೆಯಲ್ಲಿ ಮಂಗಳವಾರ ಮೈಸೂರಿನ ಎಲ್ಲೆಡೆ ಮಹಿಳೆಯರು ಸಂಭ್ರಮದಿಂದ ಗೌರಿ ಹಬ್ಬವನ್ನು ಆಚರಿಸಿದರು. ಮನೆಯಲ್ಲಿ ಇಂದು ಬೆಳಗ್ಗೆಯಿಂದಲೇ ಗೌರಿ ಮೂರ್ತಿ ಪ್ರತಿಷ್ಠಾಪಿಸಿ, ಕಳಸಕ್ಕೆ ಅಲಂಕಾರ ಮಾಡಿ, ವಿವಿಧ ಬಗೆಯ ಹಣ್ಣು, ನೈವೇದ್ಯ ಸಮರ್ಪಿಸಿ, ಹಸಿರು ಬಳೆ, ಕುಪ್ಪಸ, ಅರಿಶಿನ–ಕುಂಕುಮ ಇಟ್ಟು ಪೂಜೆ ಮಾಡುವ ಮೂಲಕ ಸ್ವರ್ಣಗೌರಿಯನ್ನು ಆರಾಧಿಸಿದರು.

ಬಳಿಕ ಮನೆಗೆ ಮುತ್ತೈದೆಯರನ್ನು ಕರೆದು ಅರಿಶಿನ, ಕುಂಕುಮದೊಂದಿಗೆ ಬಾಗಿನ ನೀಡಿ ಪರಸ್ಪರ ಶುಭ ಕೋರಿದರು.

ಕರಗ ದೇವಾಲಯದಲ್ಲಿ ವಿಶೇಷ ಪೂಜೆ: ಮೈಸೂರಿನ ಇಟ್ಟಿಗೆಗೂಡು ಬಡಾವಣೆಯಲ್ಲಿರುವ ಕರಗ ದೇವಾಲಯದಲ್ಲಿ ಗೌರಿ ಹಬ್ಬವನ್ನು ವಿಶೇಷವಾಗಿ ಆಚರಿಸಲಾಯಿತು. ದೇವಾಲಯದ ಆವರಣದಲ್ಲಿ ಗೌರಿ ವಿಗ್ರಹ ಪ್ರತಿಷ್ಠಾಪಿಸಿ ಅಲಂಕಾರ ಮಾಡಿ ಪೂಜಿಸಲಾಗಿತ್ತು. ಸ್ಥಳೀಯರು ಹಾಗೂ ವಿವಿಧ ಬಡಾವಣೆಗಳ ಮಹಿಳೆಯರು ದೇವಾಲಯಕ್ಕೆ ಬಂದು ಪೂಜೆ ಸಲ್ಲಿಸಿ, ಗೌರಿ ವಿಗ್ರಹದ ಬಳಿಯೇ ಬಾಗಿನ ನೀಡಿ ಗೌರವಿಸಿದರು.



ನಾಡಿನ ಸಮಸ್ತ ಜನತೆಗೆ
ಗೌರಿ ಗಣಪತಿ
ಹಬ್ಬದ
ಶುಭಾಶಯಗಳು

ಶುಭಾಶಯ ಕೋರುವವರು
ಅಧ್ಯಕ್ಷರು, ಶಿವಾರ್ಚಕ
ಬನ್ನೂರು ನಾಗರಾಜು
ಸುವರ್ಣ ರಾಜ್ಯ
ಶಿವಾರ್ಚಕ ಸಂಘ, ಮೈಸೂರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಬಿ.ಕೆ. ರಾಮಲಿಂಗು

ಶ್ರೀಮತಿ ಸುಧಾ ಕೆ.ಬಿ.

ಶ್ರೀ ಬಿ.ಕೆ. ರಾಮಲಿಂಗು

ಭೋಜನ : ಮಧ್ಯಾಹ್ನ 12-30ರಿಂದ ಹರಿಕಥೆ : ಸಂಜೆ 7.00 ರಿಂದ

ಇಂತಿ ದುಃಖತಪ್ತರು : ಶ್ರೀಮತಿ ಸುಧಾ ಕೆ.ಬಿ.
ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು


ಮೊ.: 9980640089

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

-ಜಾಹೀರಾತು ವ್ಯವಸ್ಥಾಪಕರು

ಗೌರವಪೂರ್ವಕ ಶ್ರದ್ಧಾಂಜಲಿ



ಡಾ. ಎನ್. ಆರ್. ಪರಶುರಾಮನ್

ಮಾಜಿ ನಿರ್ದೇಶಕರು ಮತ್ತು ಗೌರವ ನಿರ್ದೇಶಕರು, SDMIMD, ಮೈಸೂರು.

ಪ್ರೀತಿಪೂರ್ವಕ ಗೌರವದಿಂದ ಅವರ ಆತ್ಮಕ್ಕೆ ಶಾಂತಿ ಕೋರುವವರು

ಸಂಸ್ಥೆಯ ಅಧ್ಯಾಪಕವರ್ಗ, ಸಿಬ್ಬಂದಿವರ್ಗ, ಪ್ರಸ್ತುತ ಹಾಗೂ ಹಳೆಯ ವಿದ್ಯಾರ್ಥಿಗಳು,
SDMIMD, Mysore

sdmimd

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಎಕ್ಸ್‌ಟ್ರಾ ಇನ್ನಿಂಗ್ಸ್

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ಆಗಸ್ಟ್ 27 ಬುಧವಾರ 2025

ಪುಟಗಳು: VIII



ಕುಂಬಾರಗೇರಿಯಲ್ಲಿ ಗೌರಿ–ಗಣೇಶನಿಗೆ ವಿಶೇಷ ರೂಪ


ಪೆಂಡಾಲ್, ಮಂಟಪ ನಿರ್ಮಿಸಿ ಗಣಪನ ಪೂಜಾ ಕೈಂಕರ್ಯಕ್ಕೆ ಯುವಪಡೆ ಸಜ್ಜು



ಮೈಸೂರಿನ ಕುಂಬಾರಗೇರಿಯ ತಮ್ಮ ಮನೆಯಲ್ಲಿ ಕಲಾವಿದ ಎಂ.ಯಶವಂತ್ ಹಾಗೂ ಅವರ ತಾಯಿ ಗೌರಿ ಗಣೇಶ ಮೂರ್ತಿಗಳಿಗೆ ಅಂತಿಮ ಸ್ಪರ್ಶ ನೀಡುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.



ಗೌರಿ ಗಣೇಶ ಮೂರ್ತಿಗಳಿಗೆ ಮೈಸೂರಿನ ಕುಂಬಾರಗೇರಿಯ ತಮ್ಮ ಮನೆಯಲ್ಲಿ ಕುಶಲಕರ್ಮಿಗಳಾದ ವೆಂಕಟಮ್ಮ ಹಾಗೂ ಚಂದ್ರು ಅಂತಿಮ ಹಂತದ ಬಣ್ಣ ಲೇಪನ ಕಾರ್ಯ ಮಾಡುತ್ತಿರುವುದು.



● ಎಂ.ಬಿ.ಪವನ್‌ಮೂರ್ತಿ

ಗೌರಿ–ಗಣೇಶ ಹಬ್ಬದ ಸಂಭ್ರಮ ಸಾಂಸ್ಕೃತಿಕ ನಗರಿ ಮೈಸೂರು ನಗರದಲ್ಲೂ ಕಳೆಗಟ್ಟಿದೆ. ಎಲ್ಲೆಡೆ ಯುವಪಡೆಗಳು ಪೆಂಡಾಲ್, ಮಂಟಪ ನಿರ್ಮಿಸಿ ಗಣೇಶನ ಪ್ರತಿಷ್ಠಾಪನೆಗೆ ಕಾತುರದಿಂದ ಕಾದಿವೆ. ಮಂಗಳವಾರ ಗೌರಿ ಹಬ್ಬದ ಸಡಗರ ಮನೆ ಮಾಡಿದ್ದರೆ, ಬುಧವಾರ ಗಲ್ಲಿ–ಗಲ್ಲಿಗಳಲ್ಲಿ ಮಾತ್ರವಲ್ಲದೆ, ಮನೆಗಳಲ್ಲಿಯೂ ಗೌರಿ–ಗಣೇಶ ಆರಾಧಿಸಲು ತಯಾರಿ ನಡೆದಿದೆ.

ಈ ಹಬ್ಬದ ಕೇಂದ್ರಬಿಂದು 'ಗೌರಿ ಗಣೇಶ' ಮೂರ್ತಿಗಳು. ಮೈಸೂರಿನ ಹೃದಯಭಾಗದಲ್ಲಿರುವ ಕುಂಬಾರಗೇರಿ (ಲಷ್ಕರ್ ಮೊಹಲ್ಲಾ) ಪರಿಸರ ಸ್ನೇಹಿಯಾಗಿ ಜೇಡಿಮಣ್ಣಿನಿಂದ ಗೌರಿ–ಗಣೇಶ ಮೂರ್ತಿಗಳನ್ನು ಸಿದ್ಧಪಡಿಸುವ ನೆಲೆಬೀಡು. ಇಲ್ಲಿರುವ ಕುಂಬಾರ ಸಮುದಾಯದ ಕುಶಲ ಕರ್ಮಿಗಳಲ್ಲಿ ಸಾಕಷ್ಟು ಮಂದಿ ತಮ್ಮ ಕುಲಕಸುಬು 'ಕುಂಬಾರಿಕೆ' ಕಾಯಕವನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

ಆಧುನಿಕ ಜೀವನಶೈಲಿಯ ಭರಾಟೆಯಲ್ಲಿ ಮಣ್ಣಿನ ಮಡಿಕೆ, ಕುಡಿಕೆ, ಹಣತೆ, ಒಲೆ ಮೊದಲಾದ ಗೃಹೋಪಯೋಗಿ ಸಾಮಗ್ರಿಗಳು ಮರೆಯಾಗಿವೆ. ಗ್ರಾಮೀಣ ಪ್ರದೇಶದಲ್ಲೂ ಇಂತಹ ಪರಿಸರ ಸ್ನೇಹಿ ಗೃಹೋಪಯೋಗಿ ಸಾಮಗ್ರಿ ಕಾಣಲು ಸಾಧ್ಯವೇ ಇಲ್ಲ ಎನ್ನುವಂತಹ ಸನ್ನಿವೇಶ ಮೂಡಿದೆ. ಹಾಗಾಗಿ ಕುಂಬಾರಿಕೆ ಕಲೆ ನಂಬಿರುವ ಕುಶಲಕರ್ಮಿಗಳು ಈ ಬಗೆಯ ಸಾಮಗ್ರಿಗಳ ತಯಾರಿಕೆ ಕೈಬಿಟ್ಟಿದ್ದರೂ ಗೌರಿ–ಗಣೇಶ ಮೂರ್ತಿ ತಯಾರಿಕೆ ಕಾಯಕವನ್ನು ಮಾತ್ರ ಬಿಟ್ಟಿಲ್ಲ.

ಹೀಗಾಗಿ ಗೌರಿ–ಗಣೇಶ ಹಬ್ಬದಲ್ಲಿ ಈ ಕುಶಲಕರ್ಮಿಗಳಿಗೆ ವರಸಿದ್ಧಿ ವಿನಾಯಕನು ಒಂದಿಷ್ಟು ವರ (ಆದಾಯ) ತಂದುಕೊಡುತ್ತಿದ್ದಾನೆ ಎನ್ನಬಹುದು. ಇಲ್ಲಿನ ಕುಶಲಕರ್ಮಿಗಳು ಮೂರ್‍ನಾಲ್ಕು ತಿಂಗಳಿಂದ ಬಿಡುವಿಲ್ಲದಂತೆ ಕಾಯಕನಿರತರಾಗಿ ಗೌರಿ ಗಣೇಶ ಮೂರ್ತಿಗಳನ್ನು ಸಿದ್ಧಪಡಿಸಿ, ಪ್ರತಿಷ್ಠಾಪಿಸುವ ಭಕ್ತ ಸಮೂಹಗಳಿಗೆ ನೀಡಲು ಅಣಿಯಾಗಿದ್ದಾರೆ.

ಕುಟುಂಬದ ಪ್ರತಿಯೊಬ್ಬರು ಭಾಗಿ: ತಲೆತಲಾಂತರದಿಂದ ನಮ್ಮ ಕುಟುಂಬ ಗೌರಿ–ಗಣಪತಿ ವಿಗ್ರಹ ಸಿದ್ಧಪಡಿಸುವ ಕಾಯಕ ಮಾಡಿಕೊಂಡು ಬಂದಿದೆ. ಹಬ್ಬಕ್ಕೆ ಮೂರು ತಿಂಗಳು ಇರುವಾಗಲೇ ಮೂರ್ತಿಗಳ ತಯಾರಿಕೆ ಶುರು ಮಾಡುತ್ತೇವೆ. ಮಣ್ಣು ಹದಗೊಳಿಸಿ ನಂತರ ವಿಗ್ರಹ ತಯಾರಿಸುವ ಕೆಲಸ ಪ್ರಾರಂಭಿಸುತ್ತೇವೆ. ವಿಗ್ರಹ ಸಿದ್ಧಪಡಿಸಿ ಅದು ಒಣಗಿದ ಬಳಿಕ ಬಣ್ಣಲೇಪನ ಕಾರ್ಯ ಆರಂಭಿಸುತ್ತೇವೆ. ನಮ್ಮ ಕುಟುಂಬದ ಪ್ರತಿಯೊಬ್ಬರೂ ಈ ಕಾಯಕ ಮಾಡುತ್ತೇವೆ ಎನ್ನುತ್ತಾರೆ ಇಲ್ಲಿನ ಕಲಾವಿದ ಎಂ.ಯಶವಂತ್.

ಜೇಡಿಮಣ್ಣನ್ನು ಹೆಚ್‌ಡಿ ಕೋಟೆ ಬಳಿಯ ದೂರ ಗ್ರಾಮದಿಂದ ತರಿಸಿ, ಮನೆಯಲ್ಲೇ ವಿಗ್ರಹ ಸಿದ್ಧಪಡಿಸುತ್ತೇವೆ. ಗ್ರಾಹಕರಿಗೆ ನೇರವಾಗಿಯೂ ಮಾರಾಟ ಮಾಡುತ್ತೇವೆ. ಜೊತೆಗೆ ಸಗಟು ರೀತಿಯಲ್ಲೂ ಖರೀದಿ ಮಾಡುವ ಗ್ರಾಹಕರು ಇದ್ದಾರೆ. ಹಿಂದೆ ಮೈಸೂರಿನ ಕುಂಬಾರಗೇರಿಯಲ್ಲಿ ಮಾತ್ರವೇ ಗೌರಿ–ಗಣೇಶ ವಿಗ್ರಹ ತಯಾರಿಕೆ ಮಾಡಲಾಗುತ್ತಿತ್ತು. ಮಣ್ಣಿನ ಸಾಮಗ್ರಿಗಳಿಗೆ ನಮ್ಮ ಕುಂಬಾರಗೇರಿಯೇ ಕೇಂದ್ರಬಿಂದು. ಆದರೆ ಈಗ ಕಾಲ ಬದಲಾಗಿದೆ. ಕುಂಬಾರಗೇರಿಯಲ್ಲಿ ಈ ಹಿಂದಿನಿಂದಲೂ ಪರಿಸರ ಸ್ನೇಹಿಯಾದ ಮಣ್ಣಿನಲ್ಲೇ ಗೌರಿ–ಗಣೇಶ ಮೂರ್ತಿಗಳನ್ನು ಮಾಡಲಾಗುತ್ತಿತ್ತು. ಕುಂಬಾರಕೊಪ್ಪಲು ಸಹ ಮಣ್ಣಿನ ಸಾಮಗ್ರಿ ತಯಾರಿಕೆಗೆ ಹೆಸರುವಾಸಿಯಾಗಿತ್ತು ಎನ್ನುತ್ತಾರೆ ಅವರು.

ನಾವು ಬಳಸುವ ಬಣ್ಣ ಸಹ ವಾಟರ್ ಪೇಂಟ್ ಆಗಿದೆ. ನಮ್ಮ ತಂದೆ ಮಹೇಶ್ ಅವರ ಮಾರ್ಗದರ್ಶನದಲ್ಲಿ ಈ ಕಲೆ ಕರಗತ ಮಾಡಿಕೊಂಡು 3 ಇಂಚಿನಿಂದ 10 ಅಡಿವರೆಗೆ ಗಣೇಶ ಮೂರ್ತಿ ಮಾಡಿದ್ದೇವೆ. ಗಾತ್ರದ ಆಧಾರದಲ್ಲಿ ಬೆಲೆ ನಿಗದಿ ಮಾಡಿದ್ದು, 3 ಇಂಚಿನ ಮೂರ್ತಿಗಳ ಬೆಲೆಯು 30 ರೂ.ನಿಂದ ಪ್ರಾರಂಭವಾಗುತ್ತವೆ. 10 ಅಡಿಯ ಮೂರ್ತಿಗಳಿಗೆ 35 ಸಾವಿರ ರೂ. ಆಗುತ್ತದೆ. 2024 ರಲ್ಲಿ ಕಾವಾ ಶಿಲ್ಪಕಲೆಯಲ್ಲಿ ಮೈಸೂರು ವಿವಿಗೆ ಚಿನ್ನದ ಪದಕ ತಂದುಕೊಟ್ಟಿದ್ದೇನೆ. ಪಂಜಾಬಿನಲ್ಲಿ ನಡೆದ ಈ ಶಿಲ್ಪಕಲಾ ಸ್ಪರ್ಧೆಯಲ್ಲಿ 124 ವಿವಿಗಳ ಕಲಾವಿದರು ಭಾಗವಹಿಸಿದ್ದರು. ನಾನು ಮೈಸೂರು ವಿವಿಯ ಕಾವಾ ವಿದ್ಯಾರ್ಥಿಯಾಗಿ ಪಾಲ್ಗೊಂಡು ಚಿನ್ನದ ಪದಕ ಪಡೆದಿದ್ದೇನೆ. ಈಗಲೂ ಕಾವಾದಲ್ಲಿ ವಿದ್ಯಾಭ್ಯಾಸ ಮುಂದುವರೆಸಿದ್ದೇನೆ ಎಂದು ಎಂ.ಯಶವಂತ್ ಹರ್ಷಭರಿತರಾಗಿ ಹೇಳಿದರು.

ತಾತ–ಮುತ್ತಾತನ ಕಾಲದಲ್ಲಿ ಮಣ್ಣಿನಿಂದ ಗೃಹೋಪಯೋಗಿ ಸಾಮಗ್ರಿ ಮಾಡಲಾಗುತ್ತಿತ್ತು ; ಕುಶಲಕರ್ಮಿ ಡಿ.ರೇವಣ್ಣ

ನಮ್ಮ ತಾತ–ಮುತ್ತಾತನ ಕಾಲದಲ್ಲಿ ಅವರು ಮಣ್ಣಿನಿಂದ ಗೃಹೋಪಯೋಗಿ ಸಾಮಗ್ರಿಗಳನ್ನು ತಯಾರು ಮಾಡುತ್ತಿದ್ದರು. ನಮ್ಮ ತಂದೆ ಕಾಲದಲ್ಲಿ ಗೌರಿ–ಗಣೇಶ ಮೂರ್ತಿ ತಯಾರಿಸುವುದು ಆರಂಭಗೊಂಡಿತು ಎನ್ನುತ್ತಾರೆ ಕುಂಬಾರಗೇರಿಯ ಕುಶಲಕರ್ಮಿ ಡಿ.ರೇವಣ್ಣ.

ಮೈಸೂರಿನ ಕುಂಬಾರಗೇರಿಯಲ್ಲಿ ಕುಂಬಾರ ಸಮುದಾಯ, ಕುಲಕಸುಬು ಕುಂಬಾರಿಕೆಯಲ್ಲಿ ತಲೆತಲಾಂತರದಿಂದ ನಿರತವಾಗಿದೆ. ನಮ್ಮ ತಾತ ಮುತ್ತಾತರ ಕಾಲದಲ್ಲಿ ಮಡಿಕೆ, ಕುಡಿಕೆ ಸೇರಿದಂತೆ ಗೃಹೋಪಯೋಗಿ ಸಾಮಗ್ರಿಗಳನ್ನು ಮಾಡಲಾಗುತ್ತಿತ್ತು. ನಮ್ಮ ತಂದೆಯವರ ಕಾಲದಲ್ಲಿ ಸಮುದಾಯದ ಕುಶಲಕರ್ಮಿಗಳಿಂದ ಗೌರಿ–ಗಣೇಶ ಮೂರ್ತಿಗಳ ತಯಾರಿಕೆ ಆರಂಭವಾಯಿತು. ನಾನು ಗೌರಿ–ಗಣೇಶ ಮೂರ್ತಿ ಸಿದ್ಧಪಡಿಸುವುದನ್ನು ಮುಂದುವರೆಸಿದ್ದೇನೆ. ನಾನು ಕಾವಾದಲ್ಲಿ ಶಿಕ್ಷಣ ಪೂರೈಸಿರುವ ಹಿನ್ನೆಲೆಯಲ್ಲಿ ಬೇರೆ ಬೇರೆ ಮೂರ್ತಿಗಳನ್ನು ಮಾಡುವ ಕಲೆ ಕರಗತ ಮಾಡಿಕೊಂಡಿದ್ದೇನೆ. ಇಲ್ಲಿನ ಬಹುತೇಕರು ವರ್ಷಕ್ಕೊಮ್ಮೆ ಗೌರಿ–ಗಣೇಶ ಮೂರ್ತಿಗಳನ್ನು ಮಾಡುತ್ತಾರೆ. ಇದರ ಹೊರತಾಗಿ ಬೇರೆ ರೀತಿಯ ಮೂರ್ತಿಗಳನ್ನು ಮಾಡುವುದು ಕಡಿಮೆ. ಜೊತೆಗೆ ಈಗ ಸಾಕಷ್ಟು ಜನ ಕುಂಬಾರಗೇರಿ ಬಿಟ್ಟು ಬೇರೆಡೆ ನೆಲೆಸಿದ್ದಾರೆ. ಈ ಪೈಕಿ ಮೈಸೂರಿನ ಕುಂಬಾರಕೊಪ್ಪಲು, ಹೆಬ್ಬಾಳು ಮೊದಲಾದೆಡೆ ನೆಲೆಸಿರುವ ನಮ್ಮವರೇ ಗೌರಿ–ಗಣೇಶ ಮೂರ್ತಿ ತಯಾರಿಕೆ ಮುಂದುವರೆಸಿದ್ದಾರೆ ಎನ್ನುತ್ತಾರೆ ರೇವಣ್ಣ.

ಬೃಹತ್ ಮೂರ್ತಿ ತಯಾರಿಕೆಗೆ ಕರಕುಶಲವೇ ಹೆಚ್ಚು...

ಒಂದೇ ರೀತಿಯ ಗೌರಿ–ಗಣೇಶ ಮೂರ್ತಿಗಳ ತಯಾರಿಕೆಯಲ್ಲಿ ಬಹುತೇಕ ಭಾಗಗಳನ್ನು ಸಿದ್ಧಪಡಿಸಲು ಮೌಲ್ಡ್ (ಅಚ್ಚು) ಬಳಸುತ್ತೇವೆ. ಫ್ಯಾನ್ಸಿ ಮಾದರಿಯಲ್ಲಿ ವಿಶೇಷವಾಗಿ ಮೂರ್ತಿ ಬೇಕೆಂದು ಕೇಳುವವರಿಗೆ ಅವರ ಅಪೇಕ್ಷೆಯಂತೆ ಮಾಡಬೇಕಾಗುತ್ತದೆ. ಇಂತಹ ಮೂರ್ತಿಗಳ ಸಿದ್ಧಪಡಿಸುವಿಕೆಯಲ್ಲಿ ಮೌಲ್ಡ್ ಬಳಕೆ ಸಾಧ್ಯವಿಲ್ಲ. 1 ಅಥವಾ 2 ಇಂಚಿನ ಮೂರ್ತಿಗಳಿಗೆ ಮೌಲ್ಡ್ ಬಳಸುತ್ತೇವೆ. ಎಲ್ಲರೂ ಇದೇ ವಿಧಾನ ಅನುಸರಿಸುತ್ತಾರೆ. ದೊಡ್ಡ ಮೂರ್ತಿಗಳ ನಿರ್ಮಾಣದಲ್ಲಿ ಮೌಲ್ಡ್ ಬಳಕೆ ಕಡಿಮೆ. ಕರಕುಶಲವೇ ಹೆಚ್ಚು ಎನ್ನುತ್ತಾರೆ ಕುಶಲಕರ್ಮಿ ಎಂ.ಯಶವಂತ್.



ಕುಂಬಾರಗೇರಿಯಲ್ಲಿ ಆಕರ್ಷಿಸುತ್ತಿರುವ ಬೃಹತ್ ಗಾತ್ರದ ಪೇಪಲ್ ಪಲ್ಪ್ ವಿಧಾನದಲ್ಲಿ ಮಾಡಿರುವ ಗಣೇಶ ಮೂರ್ತಿಗಳು.

ಐಪಿಎಲ್ ವಿಜೇತ ಆರ್‌ಸಿಬಿ ಗಣೇಶ!

ಎಂ.ಯಶವಂತ್ ಅವರ ಕೈಚಳಕದಲ್ಲಿ ಐಪಿಎಲ್ ಚಾಂಪಿಯನ್ ಆದ ಆರ್‌ಸಿಬಿ ಸಮವಸ್ತ್ರ ಧರಿಸಿ ಟ್ರೋಫಿಯೊಂದಿಗೆ ನಿಂತಿರುವ ಗಣೇಶನ ಮೂರ್ತಿ ನಿರ್ಮಿಸಲಾಗಿದೆ. 'ಆರ್‌ಸಿಬಿ ಆಟಗಾರರ ಸಮವಸ್ತ್ರ ಧರಿಸಿರುವ ಮಾದರಿಯಲ್ಲಿ ಗಣೇಶನ ಮೂರ್ತಿ ತಯಾರಿಸಿ ಕೊಡಬೇಕೆಂದು ಕ್ರಿಕೆಟ್ ಅಭಿಮಾನಿಗಳು ನಮಗೆ ಆರ್ಡರ್ ಕೊಟ್ಟಿದ್ದರು. ಹಾಗಾಗಿ ಇದನ್ನು ಸಿದ್ಧಪಡಿಸಿದ್ದೇವೆ. ಇದರ ತಯಾರಿಕೆಯಲ್ಲಿ ಯಾವುದೇ ಮೌಲ್ಡ್ ಬಳಸಿಲ್ಲ. ಸಂಪೂರ್ಣವಾಗಿ ಕೈಯಿಂದಲೇ ರೂಪ ನೀಡಲಾಗಿದೆ. ಈ ವಿಭಿನ್ನ ಗಣೇಶ ಮೂರ್ತಿಯೊಂದಿಗೆ ಸಾಂಪ್ರದಾಯಿಕ ಶೈಲಿಯ ಗಣೇಶ ಮೂರ್ತಿಯನ್ನು ಸಹ ಪ್ರತಿಷ್ಠಾಪನೆ ಮಾಡುತ್ತಾರೆ. ಈ ರೀತಿ ಮಾಡಿಸಿರುವುದು ಕ್ರಿಕೆಟ್ ಮೇಲಿನ ಅಭಿಮಾನಕ್ಕಾಗಿ ಎಂದು ನಾನು ಭಾವಿಸಿದ್ದೇನೆ' ಎನ್ನುತ್ತಾರೆ ಕಲಾವಿದ ಯಶವಂತ್.



ಪ್ರತಿಷ್ಠಾಪನೆಗೆ ಸಿದ್ಧವಾಗಿರುವ ಗಣೇಶನ ವಿಗ್ರಹಗಳು (ಚಿತ್ರಗಳು : ಎಂ.ಎನ್.ಲಕ್ಷ್ಮೀನಾರಾಯಣ ಯಾದವ್)

'ಕುಂಬಾರಿಕೆ' ಜೀವನೋಪಾಯ ಮಾತ್ರವಲ್ಲ, ಪರಂಪರೆ

ಕುಂಬಾರಿಕೆ ಕಾಯಕ ನಮ್ಮ ಜೀವನೋಪಾಯ ಮಾತ್ರವಲ್ಲ, ಇದು ನಮ್ಮ ಸಮುದಾಯದ ಪರಂಪರೆಯೂ ಆಗಿದೆ ಎನ್ನುತ್ತಾರೆ ಕುಂಬಾರಗೇರಿಯ ಕುಶಲಕರ್ಮಿಗಳು. ಇವರ ಕುಲ ಕಸುಬಿನಿಂದ ಹಲವು ಮಣ್ಣಿನ ಸಾಮಗ್ರಿಗಳು ಆಧುನಿಕತೆಯ ಕಾರಣಕ್ಕೆ ದೂರವಾಗಿವೆ. ಆದರೆ ಗೌರಿ ಗಣೇಶ ಮೂರ್ತಿಗಳು ಇವರ ಕೈಗಳಿಗೆ ಕೆಲಸ ಕೊಟ್ಟಿದ್ದು, ವರ್ಷಕ್ಕೊಮ್ಮೆ ಪ್ರಮುಖ ಆದಾಯದ ಮೂಲವಾಗಿದೆ.

ಮೈಸೂರಿನ ಅಶೋಕ ರಸ್ತೆ ಸಮೀಪದ ಲಷ್ಕರ್ ಮೊಹಲ್ಲಾದ ಕುಂಬಾರಗೇರಿ ವಿಶೇಷವಾಗಿ ಕುಂಬಾರ ಸಮುದಾಯದವರೇ ನೆಲೆಸಿದ್ದ ಪ್ರದೇಶವಾಗಿತ್ತು. ಆದರೆ ಈಗ ನಗರೀಕರಣದ ಭರಾಟೆಯಲ್ಲಿ ಸನ್ನಿವೇಶ ಬದಲಾಗಿದೆ. ಕುಲಕಸುಬು ಮುಂದುವರೆಸಿರುವ ಕುಶಲಕರ್ಮಿಗಳ ಸಂಖ್ಯೆಯಲ್ಲಿಯೂ ಇಳಿಮುಖವಾಗಿದೆ. ಯಾವುದೇ ಮಣ್ಣಿನ ಸಾಮಗ್ರಿಗಳು ಇಲ್ಲಿನ ಕುಶಲಕರ್ಮಿಗಳ ಕೈಹಿಡಿಯದಿದ್ದರೂ ಇವರು ತಯಾರಿಸುವ ಮಣ್ಣಿನ ಗೌರಿ ಗಣೇಶ ಮೂರ್ತಿಗಳಿಗೆ ಬೇಡಿಕೆ ಇದ್ದೇ ಇದೆ.

ಇಲ್ಲಿನ ಕುಶಲಕರ್ಮಿ ಎಂ.ಯಶವಂತ್ ಅವರು ಕಂಡಂತೆ ಇಲ್ಲಿ ಸುಮಾರು 300ಕ್ಕೂ ಹೆಚ್ಚು ಕುಶಲಕರ್ಮಿಗಳು ಕುಲಕಸುಬು ಕಾಯಕದಲ್ಲಿ ತೊಡಗಿದ್ದರು. ಆದರೆ ಈಗ 50ಕ್ಕೂ ಕಡಿಮೆ ಸಂಖ್ಯೆಯಲ್ಲಿ ಕುಶಲಕರ್ಮಿಗಳು ಇದ್ದಾರೆ ಎನ್ನುತ್ತಾರೆ ಅವರು. ಜೇಡಿಮಣ್ಣಿನ ಬೆಲೆ ದಿನದಿಂದ ದಿನಕ್ಕೆ ದುಬಾರಿಯಾಗುತ್ತಿದೆ. ಇದೂ ಸಹ ಕಾಯಕದಿಂದ ಹಿಂದೆ ಸರಿಯಲು ಕಾರಣವಾಗುತ್ತಿದೆ ಎನ್ನುವ ಯಶವಂತ್, ಕುಂಬಾರಕೊಪ್ಪಲಿನಲ್ಲೂ ಕುಂಬಾರ ಸಮಾಜದ ಸ್ವಲ್ಪ ಕುಶಲಕರ್ಮಿಗಳು ಕುಲಕಸುಬು ಮುಂದುವರೆಸಿದ್ದಾರೆ ಎನ್ನುತ್ತಾರೆ.



ಕುಂಬಾರಗೇರಿಯಲ್ಲಿ ಶಂಕರಮ್ಮ ಕಾಯಕನಿರತರಾಗಿರುವುದು.

ಮಣ್ಣಿನ ಮೂರ್ತಿಗಳ ಮೇಲೆ ಪೇಪರ್ ಪಲ್ಪ್ ಪೈಪೋಟಿ...

ಮೈಸೂರಿನ ಕುಂಬಾರಗೇರಿಯ ಕೆಲ ಬೀದಿಗಳಲ್ಲಿ ಪೇಪರ್ ಪಲ್ಪ್ (ಕಾಗದದಿಂದ ತಯಾರು ಮಾಡುವ ಮೂರ್ತಿ) ವಿಧಾನದಲ್ಲಿ ತಯಾರಾದ ಬೃಹತ್ ಗಣೇಶ ಮೂರ್ತಿಗಳು (10ರಿಂದ 12 ಅಡಿ) ಸಹ ನೋಡುಗರನ್ನು ಆಕರ್ಷಿಸುತ್ತಿವೆ. ಈ ರೀತಿಯ ಮೂರ್ತಿಗಳು ಕೂಡ ಪರಿಸರ ಸ್ನೇಹಿ ಎಂದೇ ಪರಿಗಣಿಸಲ್ಪಟ್ಟಿವೆ. ಆದರೆ ಇವು ಜೇಡಿಮಣ್ಣಿನಿಂದ ತಯಾರಿಸಿದ ಗಣೇಶ ಮೂರ್ತಿಗಳ ಬೇಡಿಕೆ ಮೇಲೆ ವ್ಯತಿರಿಕ್ತ ಪರಿಣಾಮ ಉಂಟುಮಾಡಿವೆ ಎನ್ನಲಾಗುತ್ತಿದೆ.



ಪೇಪರ್ ಪಲ್ಪ್ ಗೌರಿ–ಗಣೇಶ ಮೂರ್ತಿಗಳು ಮಣ್ಣಿನಿಂದ ತಯಾರಿಸುವ ಸ್ಥಳೀಯ ಮೂರ್ತಿಗಳ ಬೇಡಿಕೆ ಕುಸಿಯುವಂತೆ ಮಾಡಿವೆ ಎನ್ನುತ್ತಾರೆ ಕುಶಲಕರ್ಮಿ ಡಿ.ರೇವಣ್ಣ. ಪೇಪರ್ ಪಲ್ಪ್ ಮೂರ್ತಿಗಳನ್ನು ನಮ್ಮ ಕುಂಬಾರಗೇರಿಯವರು ತರಿಸಿದ್ದಲ್ಲ. ಈ ರೀತಿಯ ಮೂರ್ತಿಗಳು ಪರಿಸರಕ್ಕೆ ಪೂರಕವಲ್ಲ. ನನಗೆ ತಿಳಿದ ಮಟ್ಟಿಗೆ ಮೈಸೂರು ಕುಂಬಾರಗೇರಿಯಲ್ಲಿ ಏಳೆಂಟು ಮನೆಯವರಷ್ಟೇ ಕುಲಕಸುಬು ಮುಂದುವರೆಸಿದ್ದಾರೆ. ಅದರಲ್ಲೂ ವರ್ಷಕ್ಕೊಮ್ಮೆ ಗೌರಿ–ಗಣೇಶ ಮೂರ್ತಿ ಮಾಡುವುದೇ ಹೆಚ್ಚು. ಈ ನಡುವೆ ಹೊರಗಡೆಯಿಂದ ಗೌರಿ–ಗಣೇಶ ಮೂರ್ತಿಗಳು ನಗರಕ್ಕೆ ಬರುತ್ತಿರುವುದು ನಮ್ಮ ಇಲ್ಲಿನ ಕುಶಲಕರ್ಮಿಗಳಿಗೆ ಹೊಡೆತ ಬೀಳುವಂತಾಗಿದೆ. ಅದರಲ್ಲಿಯೂ ಪೇಪರ್ ಪಲ್ಪ್ ಗೌರಿ–ಗಣೇಶ ಮೂರ್ತಿಗಳು ಮಣ್ಣಿನಿಂದ ತಯಾರಿಸುವ ಸ್ಥಳೀಯ ಮೂರ್ತಿಗಳ ಬೇಡಿಕೆ ಕುಸಿಯುವಂತೆ ಮಾಡಿವೆ. ನಾವು ಜೇಡಿಮಣ್ಣು ಹಾಗೂ ಪರಿಸರ ಸ್ನೇಹಿ ಬಣ್ಣಗಳನ್ನು ಬಳಸಿ ಮೂರ್ತಿಗಳನ್ನು ಮಾಡುತ್ತಿದ್ದೇವೆ. ಪ್ರತಿ ವರ್ಷ ವಿಶೇಷ ವಿನ್ಯಾಸದಲ್ಲಿ ಗಣೇಶ ಮೂರ್ತಿ ಸಿದ್ಧಪಡಿಸುತ್ತಿದ್ದೆ. ಆದರೆ ಈ ಬಾರಿ ಸಾಧ್ಯವಾಗಲಿಲ್ಲ ಎನ್ನುತ್ತಾರೆ ರೇವಣ್ಣ.

ಇಲ್ಲಿನ ಮಹಿಳೆಯರು ಸಹ ಮೂರ್ತಿ ಸಿದ್ಧಪಡಿಸುವಲ್ಲಿ ಸಿದ್ಧಹಸ್ತರು...

ಮೈಸೂರಿನ ಕುಂಬಾರಗೇರಿಯಲ್ಲಿ ಮಹಿಳಾ ಕುಶಲಕರ್ಮಿಗಳು ಸಹ ಗೌರಿ ಗಣೇಶ ಮೂರ್ತಿ ಸಿದ್ಧಪಡಿಸುವಲ್ಲಿ ಸಿದ್ಧಹಸ್ತರು. ಇಲ್ಲಿನ ಮಹಿಳಾ ಕುಶಲಕರ್ಮಿ ವಿ.ವೆಂಕಟಮ್ಮ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

ನನ್ನ ಪತಿ ಮತ್ತು ಮಾವನವರು ನನಗೆ ಈ ಕಲೆಯನ್ನು ಕಲಿಸಿಕೊಟ್ಟರು. ತಲೆತಲಾಂತರದಿಂದ ಗಣೇಶ ಮೂರ್ತಿ ಕಾಯಕ ಮಾಡುತ್ತಿದ್ದೇವೆ. ಜೇಡಿಮಣ್ಣನ್ನು ಚಾಮುಂಡಿ ಬೆಟ್ಟದಿಂದ ತರಿಸಿಕೊಳ್ಳುತ್ತಿದ್ದೆವು. ಆದರೆ ಈಗ ಅಲ್ಲಿ ಬೇಲಿ ಹಾಕಲಾಗಿದೆ. ಈಗ ಸಾಗರಕಟ್ಟೆಯಿಂದ ಮಣ್ಣು ತರಿಸುತ್ತಿದ್ದೇವೆ. ಕಳೆದ ವರ್ಷ ಇಲ್ಲಿಂದ ತರಿಸಿದ್ದ ಮಣ್ಣು ಚೆನ್ನಾಗಿರಲಿಲ್ಲ. ಈ ಬಾರಿಯೂ ಅಲ್ಲಿಂದಲೇ ಮಣ್ಣು ತರಿಸಿ ಮಾಡುತ್ತಿದ್ದೇವೆ. ನಾವು ಸಿದ್ಧಪಡಿಸುವ ಪರಿಸರ ಸ್ನೇಹಿ ಮೂರ್ತಿಗಳನ್ನು ಗ್ರಾಹಕರು ಕಡಿಮೆ ದರದಲ್ಲಿ ಕೇಳುವುದು ಬೇಸರ ಉಂಟು ಮಾಡುತ್ತದೆ ಎಂದು ವೆಂಕಟಮ್ಮ ನೊಂದು ನುಡಿದರು.

ಮಣ್ಣಿನ ಸಾಮಗ್ರಿಗಳಿಗೆ ಕುಂಬಾರಗೇರಿ ಹೆಸರುವಾಸಿಯಾಗಿತ್ತು. ಆದರೆ ಈಗ ಅಂತಹ ಹೆಸರು ಕ್ಷೀಣಿಸುತ್ತಿದೆ. ಕುಂಬಾರಗೇರಿಯಲ್ಲಿ ಗೃಹೋಪಯೋಗಿ ಸಾಮಗ್ರಿ ಸೇರಿದಂತೆ ರಾಮ, ಲಕ್ಷ್ಮಣ ಮತ್ತು ಸೀತೆ ವಿಗ್ರಹಗಳನ್ನು ತಯಾರು ಮಾಡುತ್ತಿದ್ದೆವು. ದೀಪಾವಳಿ ಹಬ್ಬದ ಸಂದರ್ಭದಲ್ಲಿ ಮಣ್ಣಿನ ದೀಪ ಮಾಡುತ್ತೇವೆ. ನವರಾತ್ರಿಯಲ್ಲಿ ಆನೆಗಳ ಬೊಂಬೆಗಳನ್ನು ಈಗಲೂ ಮಾಡುತ್ತೇವೆ. ಒಂದು ಕಾಲದಲ್ಲಿ ಕುಂಬಾರಗೇರಿಯಲ್ಲಿ ಕುಂಬಾರ ಸಮುದಾಯಕ್ಕೆ ವರ್ಷ ಪೂರ್ತಿ ಕೆಲಸ ಇರುತ್ತಿತ್ತು ಎನ್ನುತ್ತಾರೆ ವೆಂಕಟಮ್ಮ.

ಕದ್ದುಮುಚ್ಚಿ ಪಿಓಪಿ ಗಣೇಶ ಮಾರಾಟ ನಡೆಯುತ್ತಿದೆ. ಅದಕ್ಕೆ ಕಡಿವಾಣ ಹಾಕಬೇಕು. ಪರಿಸರಕ್ಕೆ ಮಾರಕವಾದ ಪಿಓಪಿ ಮೂರ್ತಿಗಳನ್ನು ತಯಾರಿಸುವುದು, ಸಾಗಿಸುವುದು, ಮಾರಾಟ ಮಾಡುವುದು ಹಾಗೂ ವಿಸರ್ಜಿಸುವುದು ಸೇರಿದಂತೆ ಈ ಎಲ್ಲಾ ಹಂತಗಳಲ್ಲೂ ನಿಗಾ ವಹಿಸಬೇಕು ಎನ್ನುತ್ತಾರೆ ವೆಂಕಟಮ್ಮ ಅವರೊಂದಿಗೆ ಮೂರ್ತಿ ತಯಾರಿಸುವ ಕಾಯಕದಲ್ಲಿ ನಿರತರಾಗಿದ್ದ ಚಂದ್ರು.

ನಮ್ಮಂತಹ ಕುಶಲಕರ್ಮಿಗಳಿಗೆ ಸರ್ಕಾರ ನೆರವಾಗಲಿ...

ಕಳೆದ 30 ವರ್ಷಗಳಿಂದ ಕುಂಬಾರಿಕೆ ಕಾಯಕದಲ್ಲಿ ನಿರತರಾಗಿರುವುದಾಗಿ ತಿಳಿಸುವ ಕುಂಬಾರಗೇರಿಯ ಶಂಕರಮ್ಮ, ನಮ್ಮ ಅತ್ತೆ ಮಾವ ಸಹ ಇದೇ ಕಾಯಕ ಮಾಡುತ್ತಿದ್ದರು. ಅದನ್ನು ನಾನು ಮುಂದುವರೆಸಿದ್ದೇನೆ. ಹಿಂದೆ ನನ್ನ ಇಬ್ಬರು ಹೆಣ್ಣು ಮಕ್ಕಳು ಸಹ ನನ್ನೊಂದಿಗೆ ಕೈಜೋಡಿಸುತ್ತಿದ್ದರು. ಆದರೆ ಅವರು ಮದುವೆಯಾಗಿ ಗಂಡಂದಿರ ಮನೆಗೆ ಹೋದ ಬಳಿಕ ನಾನೊಬ್ಬಳೇ ಕುಂಬಾರಿಕೆ ಕಾಯಕ ಮಾಡುತ್ತಿದ್ದೇನೆ. ವಿಶೇಷವಾಗಿ ಗೌರಿ–ಗಣೇಶ ಮೂರ್ತಿಗಳನ್ನು ಸಿದ್ಧಪಡಿಸುತ್ತೇನೆ. ನನ್ನ ಪತಿ ಎರಡು ವರ್ಷಗಳ ಹಿಂದೆ ನಿಧನರಾದರು. ನಮ್ಮ ಜೀವನಕ್ಕೆ ಇದು ಬಿಟ್ಟರೆ ಬೇರೆ ಆಧಾರವಿಲ್ಲ. ಸರ್ಕಾರ ನಮ್ಮಂತಹ ಕಲಾವಿದರಿಗೆ ನೆರವಾಗಬೇಕು ಎಂದು ಕೋರುತ್ತಾರೆ ಅವರು.

32 ವಿಧದಲ್ಲಿ ಗಣಪತಿ ಆರಾಧನೆ... ಇಂದು ಅರಮನೆಯಲ್ಲಿ ದಸರಾ ಗಜಪಡೆಗೆ ವಿಶೇಷ ಪೂಜೆ



ಯಾವುದೇ ಶುಭ ಕಾರ್ಯ ಮಾಡಬೇಕಾದರೂ ಮೊದಲಿಗೆ ಗಣೇಶನ ಪೂಜೆ ಮಾಡುವುದು ಮುಖ್ಯವಾಗುತ್ತದೆ. ಬಾಲಗಣಪತಿ, ಭಕ್ತಿಗಣಪತಿ, ವೀರ ಗಣಪತಿ, ವಿಘ್ನ ಗಣಪತಿ, ವಿಜಯ ಗಣಪತಿ, ವರ ಗಣಪತಿ, ಏಕದಂತ ಗಣಪತಿ, ದುರ್ಗಾ ಗಣಪತಿ, ಸಂಕಷ್ಟಹರ ಗಣಪತಿ ಸೇರಿದಂತೆ 32 ವಿಧದಲ್ಲಿ ಗಣೇಶನ ಪೂಜೆ ಮಾಡಲಾಗುತ್ತದೆ. ಬುಧವಾರ ಬೆಳಗ್ಗೆ 6ರಿಂದ 7.15 ಹಾಗೂ 9.20ರಿಂದ 11.40ರವರೆಗೆ ಗಣೇಶ ಪ್ರತಿಷ್ಠಾಪನೆಗೆ ಕಾಲ ಒಳ್ಳೆಯದಿದೆ ಎನ್ನುತ್ತಾರೆ ಅರ್ಚಕ ಎಸ್.ವಿ.ಪ್ರಹ್ಲಾದ್‌ರಾವ್.

ಅಂದು ಮಧ್ಯಾಹ್ನ 2 ಗಂಟೆ ನಂತರ ರಾತ್ರಿವರೆಗೆ ಯಾವಾಗ ಬೇಕಾದರೂ ಗಣೇಶ ಪ್ರತಿಷ್ಠಾಪಿಸಬಹುದು. ಗೌರಿ–ಗಣೇಶ ಹಬ್ಬ ಇಡೀ ದೇಶದಲ್ಲಿ ವಿಶೇಷ ರೀತಿಯಲ್ಲಿ ಆಚರಿಸಲ್ಪಡುತ್ತದೆ. ಅನ್ಯ ಧರ್ಮೀಯರು ಈ ಹಬ್ಬದಲ್ಲಿ ಭಾಗವಹಿಸುವ ಮೂಲಕ ಸಾಮರಸ್ಯ–ಸೌಹಾರ್ದತೆ ಮೆರೆಯುವುದನ್ನು ಕಾಣಬಹುದು. ದೇಶದಲ್ಲಿ ಮಾತ್ರವಲ್ಲದೆ, ಪ್ರಪಂಚದ ವಿವಿಧೆಡೆಯೂ ಗೌರಿ ಗಣೇಶ ಹಬ್ಬ ಆಚರಣೆ ಮಾಡಲಾಗುತ್ತದೆ. ಬಾಲಗಂಗಾಧರ ತಿಲಕರು ಭಾರತದ ಸ್ವಾತಂತ್ರ್ಯ ಹೋರಾಟದ ಭಾಗವಾಗಿ ಗಣೇಶೋತ್ಸವವನ್ನು ಸಾರ್ವಜನಿಕ ಉತ್ಸವವಾಗಿ ಪುನರುಜ್ಜೀವನಗೊಳಿಸಿದರು. ಈ ಹಿನ್ನೆಲೆಯಲ್ಲಿ ಇಡೀ ದೇಶದಲ್ಲಿ ಇದೊಂದು ವಿಶೇಷ ಹಬ್ಬವಾಗಿ ಆಚರಣೆಯಾಗುತ್ತಾ ಬಂದಿದೆ. ವಿದ್ಯೆಗೆ ಅಧಿಪತಿ ಗಣಪತಿ.

ನಾಳೆ (ಬುಧವಾರ) ಅರಮನೆಗೆ ಆಗಮಿಸಿರುವ ದಸರಾ ಗಜಪಡೆಯ 14 ಆನೆಗಳು ಹಾಗೂ ಅರಮನೆಯ ಎರಡು ಆನೆಗಳು ಸೇರಿದಂತೆ ಒಟ್ಟು 16 ಆನೆಗಳಿಗೆ ವಿಶೇಷ ಪೂಜೆ ನೆರವೇರಿಸಲಾಗುತ್ತದೆ. ಗಣೇಶನಿಗೆ ಪ್ರಿಯವಾದ ತಿಂಡಿಗಳನ್ನು ಈ ಆನೆಗಳಿಗೆ ನೀಡಲಾಗುತ್ತದೆ. ವಿಶೇಷವಾಗಿ ಹೋಳಿಗೆ ಮಾಡಿಸಲಾಗುತ್ತಿದೆ. ಬುಧವಾರ ಬೆಳಗ್ಗೆ 11.30ಕ್ಕೆ ಪೂಜಾ ಕಾರ್ಯಕ್ರಮ ಶುರುವಾಗಲಿದೆ ಎನ್ನುತ್ತಾರೆ ಅವರು.



ಗಣೇಶ ಮೂರ್ತಿ ಪ್ರತಿಷ್ಠಾಪಿಸುವ ಸಲುವಾಗಿ ಬುಕ್ ಮಾಡಲು ಕುಂಬಾರಗೇರಿಗೆ ಬಂದಿದ್ದ ಗಾಂಧಿನಗರದ ಬಾಲಕರ ಪಡೆ.

ಮೈಸೂರು ವಿವಿ ಮೊಹಲ್ಲಾದಲ್ಲಿ ಇಂದಿನಿಂದ ಸೆ.8 ರವರೆಗೆ 64ನೇ ಪಾರಂಪರಿಕ ಸಂಗೀತೋತ್ಸವ

ಮೈಸೂರು ನಗರದ ವಿವಿ ಮೊಹಲ್ಲಾದ 8ನೇ ಕ್ರಾಸ್‌ನ ಎಸ್‌ಪಿಜಿಎಂಸಿ ಟ್ರಸ್ಟ್ ವತಿಯಿಂದ ಆ.27ರಿಂದ ಸೆ.8 ರವರೆಗೆ ಪ್ರತಿವರ್ಷದಂತೆ ಗಣೇಶ ಉತ್ಸವ ದೊಂದಿಗೆ 64ನೇ ಪಾರಂಪರಿಕ ಸಂಗೀತೋತ್ಸವ ಕಾರ್ಯಕ್ರಮದ ರಸದೌತಣ.


ವಿ.ಮೇಲುಕೋಟೆ ನಾಗೇಶ್


ವಿದ್ವಾನ್ ಟಿ.ಎಂ. ಕೃಷ್ಣ


ನೇಮ್ಮಾರ ಬ್ರದರ್ಸ್


ಅಕ್ಕರೈ ಸಹೋದರಿಯರು


ವಿ.ರಾಹುಲ್ ವೆಲ್ಲಾಳ್


ವಿದುಷಿ ಪೃಥ್ವಿ ಭಾಸ್ಕರ್


ವಿ.ವಿಠ್ಠಲರಾಮಮೂರ್ತಿ


ವಿದುಷಿ ಪದ್ಮಾಶಂಕರ್



ಡಾ. ರಂಗನಾಥ ಶರ್ಮ


ವಿ. ಅಭಿಷೇಕ್ ರಘುರಾಮ್


ವಿದ್ವಾನ್ ಶೃತಿ ಸಾಗರ್


ರಮಣ ಬಾಲಚಂದ್ರನ್


ವಿ.ಸುನೀಲ್ ಗಾರ್ಗ್ಯಾನ್


ವಿದ್ವಾನ್ ವಿನಯ್ ಶರ್ಮ

ಆಗಸ್ಟ್ 27

ಸಂಜೆ 6.45ಕ್ಕೆ ನಾದಸ್ವರ ಸಂಗೀತ ಕಾರ್ಯಕ್ರಮ. ನಾದಸ್ವರ–ಮೇಲು ಕೋಟೆ ನಾಗೇಶ್, ವಯೋಲಿನ್–ಕೇಶವ್ ಮೋಹನ್, ಮೃದಂಗ–ಬಿ.ಎಸ್. ಪ್ರಶಾಂತ್, ಘಟಂ–ಶರತ್ ಕೌಶಿಕ್ ಸಾಥ್.

ಆಗಸ್ಟ್ 28

ಸಂಜೆ 6ಕ್ಕೆ ಉದ್ಘಾಟನಾ ಸಮಾರಂಭ. ಬಳಿಕ ಕ್ಯಾಪ್ಟನ್ ಜಿ. ಆರ್. ಗೋಪಿನಾಥ್‌ರಿಂದ ಸಂಗೀತೋತ್ಸವ ಉದ್ಘಾಟನೆ. ಎಸ್‌ಪಿಜಿಎಂಸಿ ಟ್ರಸ್ಟ್ ಅಧ್ಯಕ್ಷ ಎಂ. ಜಗನ್ನಾಥ ಶೆಣೈ ಅಧ್ಯಕ್ಷತೆ. ಸಂಜೆ 6.45ಕ್ಕೆ ಟಿ.ಎಂ.ಕೃಷ್ಣ ಗಾಯನ ಅವರಿಂದ ಗಾಯನ ಕಾರ್ಯಕ್ರಮ.

ಆಗಸ್ಟ್ 29

ಸಂಜೆ 5ರಿಂದ 6.30ರವರೆಗೆ ಚಂದ್ರಶೇಖರ ಆಚಾರ್ ಅವರಿಂದ ರಂಗಗೀತೆಗಳ ಗಾಯನ. ಸಂಜೆ 6.45ಕ್ಕೆ ನಾದಸ್ವರ–ವಯೋಲಿನ್ ಜುಗಲ್ ಬಂದಿ; ನೆಮಾರ ಕಣ್ಣನ್ ಮತ್ತು ವಿದ್ವಾನ್ ಆನಂದ ಬ್ರಹ್ಮ ವಿದುಷಿ ಆರಕ್ಕೈ ಶುಭ ಲಕ್ಷ್ಮೀ, ವಿದುಷಿ ಆರಕ್ಕೈ ಸ್ವರ್ಣಲತಾ.

ಆಗಸ್ಟ್ 30

ಸಂಜೆ 5.30ರಿಂದ 6.30 ರವರೆಗೆ ಚಂದ್ರಶೇಖರ ಆಚಾರ್ ಅವರ ರಂಗಗೀತೆಗಳ ಗಾಯನ. ಸಂಜೆ 6.45ಕ್ಕೆ ಅಕ್ಕರೈ ಸಹೋದರಿಯರು (ಅಕ್ಕರೈ ಶುಭಲಕ್ಷ್ಮಿ, ಅಕ್ಕರೈ ಸ್ವರ್ಣ ಲತಾ) ಅವರಿಂದ ದ್ವಂದ್ವ ಗಾಯನ.

ಆಗಸ್ಟ್ 31

ಬೆಳಿಗ್ಗೆ 10ಕ್ಕೆ ಶ್ರೀ ಸತ್ಯನಾರಾಯಣ ಪೂಜೆ. ಸಂಜೆ 5.30 ರಿಂದ 6.30 ರವರೆಗೆ ಸುನಿತಾ ಚಂದ್ರ ಕುಮಾರ್ ನೇತೃತ್ವದಲ್ಲಿ ಮೈಸೂರು ರಘುಲೀಲಾ ಸಂಗೀತ ಮಂದಿರ ವಿದ್ಯಾರ್ಥಿಗಳಿಂದ ಜಾನಪದ ಗೀತೆಗಳ ಗಾಯನ. ಸಂಜೆ 6.45ಕ್ಕೆ ರಾಹುಲ್ ವೆಲ್ಲಾಳ್ ಅವರಿಂದ ಗಾಯನ.

ಸೆಪ್ಟೆಂಬರ್ 1

ಸಂಜೆ 5.30ರಿಂದ 6.30ರವರೆಗೆ ಗಮಕ ವಾಚನ 'ಹರಿಕಥಾಮೃತ ಸಾರ –ಗಣಪತಿ ಸ್ತೋತ್ರ ಸಂಧಿ'; ಸಂಧ್ಯಾ ರಮೇಶ್ ಅವರಿಂದ ಗಮಕ ವಾಚನ ಮತ್ತು ಎ.ನಿರಂಜನ ಅವರಿಂದ ವ್ಯಾಖ್ಯಾನ. ಸಂಜೆ 6.45ಕ್ಕೆ ಪೃಥ್ವಿ ಭಾಸ್ಕರ್ ಅವರಿಂದ ಗಾಯನ.

ಸೆಪ್ಟೆಂಬರ್ 2

ಸಂಜೆ 5.30ರಿಂದ 6.30ರವರೆಗೆ 'ಕೌಶಿಕ ರಾಮಾಯಣ ಭರತ ಪಾದುಕೆ' ಗಮಕ ವಾಚನ. ಡಾ. ಮಂಜುನಾಥ್ ಅವರಿಂದ ವಾಚನ, ಡಾ.ರಾಮಶೇಷನ್ ಅವರಿಂದ ವ್ಯಾಖ್ಯಾನ. ಸಂಜೆ 6.45ಕ್ಕೆ ವಿಠಲ್ ರಾಮಮೂರ್ತಿ ಮತ್ತು ಪದ್ಮ ಶಂಕರ್ ಅವರಿಂದ ದ್ವಂದ್ವ ಪಿಟೀಲು ವಾದನ.

ಸೆಪ್ಟೆಂಬರ್ 3

ಸಂಜೆ 5.30ರಿಂದ 6.30 ರವರೆಗೆ 'ಜೈಮಿನಿ ಭಾರತ' ಗಮಕ ವಾಚನ ಕಾರ್ಯಕ್ರಮ. ಸತ್ಯಲಕ್ಷ್ಮಿ ಪಡೇ ಅವರಿಂದ ವಾಚನ ಮತ್ತು ಸಿ.ಎಂ.ಸುಬ್ಬಣ್ಣ ಅವರಿಂದ ವ್ಯಾಖ್ಯಾನ. ಸಂಜೆ 6.45ಕ್ಕೆ ಡಾ.ಶೇರ್ ತಲೆರಂಗನಾಥ ಶರ್ಮಾ ಅವರಿಂದ ಗಾಯನ.

ಸೆಪ್ಟೆಂಬರ್ 4

ಸಂಜೆ 5.30 ರಿಂದ 6.30 ರವರೆಗೆ ಮನುಜೋಳ ರಗಳೆ ಗಮಕ ವಾಚನ. ಶುಭ ರಾಘವೇಂದ್ರ ಅವರಿಂದ ವಾಚನ ಮತ್ತು ಪ್ರೊ.ಮೊರಬದ ಮಲ್ಲಿಕಾರ್ಜುನ ಅವರಿಂದ ವ್ಯಾಖ್ಯಾನ. ಸಂಜೆ 6.45ಕ್ಕೆ ಗಾಯನ–ಕೊಳಲು ವಾದನ, ಅಭಿಷೇಕ್ ರಘುರಾಮ್ ಅವರಿಂದ ಗಾಯನ ಮತ್ತು ಶ್ರುತಿ ಸಾಗರ್ ಅವರಿಂದ ಕೊಳಲು ವಾದನ.

ಸೆಪ್ಟೆಂಬರ್ 5

ಸಂಜೆ 5.30 ರಿಂದ 6.30ರವರೆಗೆ 'ಕಾಳಿದಾಸ ಮೇಘಧೂತ'ಗಮಕ ವಾಚನ ಕಾರ್ಯಕ್ರಮ. ಧರಿತ್ರಿ ಆನಂದರಾವ್ ವಾಚನ ಮತ್ತು ಟಿ.ಎನ್.ಪ್ರಭಾಕರ್ ವ್ಯಾಖ್ಯಾನವಿದೆ. ಸಂಜೆ 6.45ಕ್ಕೆ ರಮಣ ಬಾಲಚಂದರ್ ಅವರಿಂದ ವೀಣಾ ವಾದನ.

ಸೆಪ್ಟೆಂಬರ್ 6

ಸಂಜೆ 5.30ರಿಂದ 6.30ರವರೆಗೆ 'ಆದಿಪುರಾಣ ಭರತ ಬಾಹುಬಲಿ ಯುದ್ಧ ಪ್ರಸಂಗ' ಗಮಕ ವಾಚನ ಕಾರ್ಯ ಕ್ರಮ. ತನುಶ್ರೀ ಅವರಿಂದ ವಾಚನ ಮತ್ತು ಡಾ. ಸಂಧ್ಯಾ ಎನ್.ದೀಪಕ್ ಅವರಿಂದ ವ್ಯಾಖ್ಯಾನವಿದೆ. ಸಂಜೆ 6.45ಕ್ಕೆ ಸುನೀಲ್ ಗಾರ್ಗ್ಯಾನ್ ಅವರಿಂದ ಗಾಯನ ಕಾರ್ಯಕ್ರಮವಿದೆ.

ಸೆಪ್ಟೆಂಬರ್ 7

ಸಂಜೆ 5.30ರಿಂದ 6.30ರವರೆಗೆ 'ಕುಮಾರವ್ಯಾಸ ಭಾರತ ಭೀಷ್ಮ ಭಕ್ತಿ ಪ್ರಸಂಗ' ಗಮಕ ವಾಚನ ಕಾರ್ಯ ಕ್ರಮ, ವಿದುಷಿ ಗಂಗಮ್ಮ ಕೇಶವಮೂರ್ತಿ ಅವರಿಂದ ವಾಚನ, ಡಾ.ಜ್ಯೋತಿ ಶಂಕರ್ ಅವರಿಂದ ವ್ಯಾಖ್ಯಾನವಿದೆ. ಸಂಜೆ 6.45ಕ್ಕೆ ಕ್ಯಾಸ್ಕೇಡ್ ಆಫ್ ಮೆಲೋಡಿ ಮತ್ತು ರಿದಂ. ವಿನಯ್ ಶರ್ಮ, ಮನ್ನಾರ್ ಗುಡಿ ವಿ. ಶಂಕರ ರಾಮನ್, ಅಮಿತ್ ನಾಡಿಗ್, ಉದಯಾಳಪುರಂ ಕೆ. ಶಿವರಾಮನ್, ಭಾರದ್ವಾಜ್ ಆರ್., ಸಾತವಲ್ಲಿ ಅರುಣ್ ಕುಮಾರ್ ಉಪಸ್ಥಿತರು.

ಸೆಪ್ಟೆಂಬರ್ 8

ಬೆಳಿಗ್ಗೆ 6ರಿಂದ 8ರವರೆಗೆ ಮೈಸೂರಿನ ರಘುಲಾಲ್ ಸಂಗೀತ ಮಂದಿರದ ವತಿಯಿಂದ ಸುನೀತ ಚಂದ್ರಕುಮಾರ್ ನೇತೃತ್ವದಲ್ಲಿ ನಗರ ಸಂಕೀರ್ತನೆ. ಬೆಳಿಗ್ಗೆ 8ಕ್ಕೆ ಚೆಳ್ಳಕೆರೆ ಸಹೋದರರಿಂದ ನಕ್ಷತ್ರ ಹೋಮ, ಮ. 12.30ಕ್ಕೆ ಪೂರ್ಣಾಹುತಿ, ಮಹಾ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗವಿದೆ

ಪರಿಸರ ಸ್ನೇಹಿ

ನಮ್ಮ ಗಣಪ




ಡಾ॥ ಸುಧಾ ಎಂ.ಎನ್
ಆಯುರ್ವೇದ ಮತ್ತು ಯೋಗ ತಜ್ಞರು
ಮೊ: 9448071933.

ಗಣಪತಿ ಹಬ್ಬ ಬಂತೆಂದರೆ ನಮಗೆಲ್ಲರಿಗೂ ಸಡಗರವೇ ಸಡಗರ! ದೇಶದಾದ್ಯಂತ ಈ ಬಾರಿಯೂ ನಮ್ಮೆಲ್ಲರ ನೆಚ್ಚಿನ ದೈವ ಮನೆಮನಗಳಲ್ಲಿ ಪ್ರತಿಷ್ಠಾಪನೆಗೆ ತಯಾರಾಗಿದ್ದಾನೆ! ಭರ್ಜರಿ ತಯಾರಿಯೂ ಆಗಿದೆ! ಬೃಹತ್ ಮಾರುಕಟ್ಟೆಯೂ ಸೃಷ್ಟಿಯಾಗಿದೆ! ಬಣ್ಣ ಬಣ್ಣದ ವೆರೈಟಿ ವೆರೈಟಿ ಗೌರಿ ಗಣಪತಿ ಕಣ್ಣು ಕುಕ್ಕುವಂತೆ ಎಲ್ಲಾ ಮಾರ್ಕೆಟ್‌ಗಳಲ್ಲಿಯೂ ರಾರಾಜಿಸುತ್ತಿದ್ದು, ಜನಸಾಮಾನ್ಯರೆಲ್ಲರೂ ಮಾರುಹೋಗಿ ಕೇಳಿದಷ್ಟು ಹಣ ನೀಡಿ ಕೊಂಡೊಯ್ಯಲು ಸಿದ್ಧರಾಗಿ ನಿಂತಿದ್ದಾರೆ! ಹೀಗೆ ಭಕ್ತಿ–ಭಾವ ಪ್ರದರ್ಶಿಸುವ ನಾವೆಷ್ಟು ಪರಿಸರದ ಕಾಳಜಿ ವಹಿಸುತ್ತಿದ್ದೇವೆ.

ನಾವು ಕೊಂಡೊಯ್ಯುವ ಬಹುತೇಕ ಎಲ್ಲ ವಿಗ್ರಹಗಳಿಗೂ ರಾಸಾಯನಿಕ ಬಣ್ಣಗಳನ್ನು ಲೇಪಿಸಲಾಗಿರುತ್ತದೆ. ಇವುಗಳಲ್ಲಿ ಸೀಸ, ಕ್ರೋಮಿಯಂ, ಕ್ಯಾಡ್ಮಿಯಂ ನಿಕ್ಕಲ್, ಮ್ಯಾಂಗನೀಸ್ ಅಂಶಗಳಿರುತ್ತವೆ. ಇವು ಮನುಷ್ಯನ ಮತ್ತು ಪ್ರಾಣಿಗಳ ದೇಹಗಳಿಗೆ ಸೇರಿದಾಗ ನರ, ಮೂತ್ರಪಿಂಡ, ಹೃದಯ ಮತ್ತು ಜನನಾಂಗಗಳಿಗೆ ಶಾಶ್ವತ ಹಾನಿಯಾಗುತ್ತದೆ. ಕ್ರೋಮಿಯಂ ರಕ್ತಣ, ಯಕೃತ್ ಮತ್ತು ಮೂತ್ರಪಿಂಡಗಳನ್ನು ಹಾನಿಗೊಳಿಸುತ್ತದೆ. ಚರ್ಮರೋಗ, ಅಲರ್ಜಿಗೆ ದಾರಿ ಮಾಡಿ ಕೊಡುತ್ತದೆ. ಮ್ಯಾಂಗನೀಸ್ ಅಂಶ ನರಕೋಶಗಳನ್ನು ನಾಶ ಮಾಡುತ್ತದೆ. ಪಾರ್ಕಿನ್‌ಸನ್‌ನಂತಹ ಕಾಯಿಲೆಯನ್ನೇ ಹೋಲುವ ಮ್ಯಾಂಗನಿಸಂ ರೋಗವನ್ನುಂಟು ಮಾಡುತ್ತದೆ. ನಿಕ್ಕಲ್‌ಸಲ್ಫೈಡ್, ಕ್ಯಾನ್ಸರ್‌ಕಾರಕ. ಕ್ಯಾಡ್ಮಿಯಂ ಹಾಗೂ ಅದರ ಸಂಯುಕ್ತಗಳು ಅಲ್ಪ ಪ್ರಮಾಣದಲ್ಲಿದ್ದರೂ ವಿಷಕಾರಿಯೇ! ಹಿಂದೆ ಜಪಾನ್ ದೇಶದಲ್ಲಿ ಗಾಳಿ, ನೀರು ಮತ್ತು ಮಣ್ಣಿನಲ್ಲಿ ಕ್ಯಾಡ್ಮಿಯಂ ಅಂಶ ಹೆಚ್ಚಾಗಿದ್ದರಿಂದ ಇಟಾಯಿ ಎಂಬ ರೋಗ ಬಂದಿತಂತೆ!

ನಿಮಗೆ ಗೊತ್ತೇ! ಗಣೇಶನಿಗೆ 21 ಗರಿಕೆಯಿಂದ ಪೂಜೆ ಸಲ್ಲಿಸಲಾಗುತ್ತದೆ. ಹಿಂದೆ ಅನಲಾಸುರ ಎಂಬ ರಾಕ್ಷಸ ಶಿವಭಕ್ತ ಎಲ್ಲ ದೇವತೋತ್ತಮರನ್ನು ಬಹಳ ಕಾಡುತ್ತಿದ್ದನಂತೆ. ಅವನ ಕಣ್ಣಿನಲ್ಲಿ ಅಪಾರವಾದ ಶಕ್ತಿ ಇತ್ತಂತೆ. ಅವನ ಕಣ್ಣಿನಲ್ಲಿ ಬರುವ ಬೆಂಕಿ, ಆ ಬೆಂಕಿಯಿಂದ ತನ್ನೆದುರಿಗೆ ಬರುವ ಎಲ್ಲರನ್ನೂ ಸುಟ್ಟು ಹಾಕುತ್ತಿದ್ದನಂತೆ. ದೇವತೆಗಳ ಮೊರೆಗೆ ಓಗೊಟ್ಟ ನಮ್ಮ ಮಹಾಗಣಪತಿ ಅನಲಾಸುರನೊಂದಿಗೆ ಯುದ್ಧಕ್ಕೆ ನಿಂತಾಗ ಎಂದಿನಂತೆ ಅನಲಾಸುರ ಬೆಂಕಿಯ ಜ್ವಾಲೆ ಗಳನ್ನು ಉಂಡೆಗಳ ರೂಪದಲ್ಲಿ ಗಣಪತಿಯ ಕಡೆಗೆ ಎಸೆದಾಗ, ಕೋಪದಿಂದ ಗಣೇಶನು ಆ ಅಸುರನನ್ನೇ ನುಂಗಿಬಿಡುತ್ತಾನೆ. ಇದರಿಂದಾಗಿ ಗಣೇಶನ ದೇಹ ದಲ್ಲಿ ಉಷ್ಣಾಂಶವು ಹೆಚ್ಚಿ ದೈಹಿಕವಾಗಿ ಕಷ್ಟಪಡು ತ್ತಾನೆ. ಆಗ ಋಷಿಮುನಿಗಳು ಅವನ ದೇಹದ ಉಷ್ಣಾಂಶವನ್ನು ತಗ್ಗಿಸಲು ಗಂಧದಿಂದ ತೋಯಿಸಿದ 21 ಗರಿಕೆಯನ್ನು ಅವನ ತಲೆಯ ಮೇಲಿಡುವುದ ರಿಂದ ದೇಹದ ಉಷ್ಣಾಂಶವು ಸಹಜಸ್ಥಿತಿಗೆ ಮರಳು ತ್ತದೆ. ಹೀಗಾಗಿ ಗರಿಕೆಯಿಂದ ಪೂಜೆ ಮಾಡಿದವರಿಗೆ ವರಪ್ರಸಾದವಾಗುವುದಾಗಿ ವರ ನೀಡುತ್ತಾನೆ. ಈ ಕಾರಣದಿಂದಲೇ ಶ್ರೀ ಗಣಪತಿಗೆ ವಿಶೇಷವಾಗಿ ಗರಿಕೆ ಯಿಂದ ಪೂಜೆ ಮಾಡುವುದು ನೇಮವಾಗಿ ಬಂದಿದೆ!

> “ಪರಿಸರಕ್ಕೆ ಹಾನಿಯುಂಟು ಮಾಡುವ ಯಾವುದೇ ಆಚರಣೆಯೂ ಭಗವಂತನಿಗೆ ಸಮ್ಮತ ಅಲ್ಲವೇ? ಗಣಪತಿಯ ಸ್ವರೂಪಕ್ಕೆ ಅನುಗುಣವಾಗಿ ಮೂರ್ತಿ ತಯಾರಿಸಬೇಕಲ್ಲವೇ? ಪರಿಸರಕ್ಕೆ ಕ್ಷೋಭೆಯಾಗದಂತೆ ವಿಗ್ರಹ ತಯಾರಿಸುವುದು ಧರ್ಮಸಮ್ಮತವಲ್ಲವೇ? ಮಣ್ಣಿನ ವಿಗ್ರಹಗಳನ್ನು ತಯಾರಿಸಬೇಕೆಂಬ ಕೂಗೂ ನ್ಯಾಯಸಮ್ಮತವಲ್ಲವೇ?

ಈ ಕತೆ ಎಷ್ಟೋ ಜನಸಾಮಾನ್ಯರಿಗೆ ಗೊತ್ತೋ ಇಲ್ಲವೋ ನನಗೆ ಗೊತ್ತಿಲ್ಲ! ಹೀಗೆ ಜನರಿಗೆ ತೊಂದರೆ ಕೊಡುತ್ತಿದ್ದ ಅಂತಹ ಅನಲಾಸುರ ರಾಕ್ಷಸನನ್ನೇ ಲೋಕ ಕಲ್ಯಾಣಕ್ಕಾಗಿ ನುಂಗಿದ ಮಹಾಗಣಪತಿಗೆ ನಾವಿಂದು ಎಲ್ಲ ರೀತಿಯ ರಾಸಾಯನಿಕಗಳನ್ನೂ ಲೇಪಿಸಿ ಸಿಂಪಡಿಸಿ ಅವನ ಪಾವಿತ್ರ್ಯತೆಯನ್ನು, ಪರಿಸರದ ನಿರ್ಮಲತೆಯನ್ನು ಹಾಳು ಮಾಡುತ್ತಿದ್ದೇವಲ್ಲವೇ? ಪರಿಸರಕ್ಕೆ ಹಾನಿ ಯುಂಟು ಮಾಡುವ ಯಾವುದೇ ಆಚರಣೆಯೂ ಭಗವಂತ ನಿಗೆ ಸಮ್ಮತ ವಲ್ಲ ಅಲ್ಲವೇ? ಮಹಾಗಣಪತಿಯ ಸ್ವರೂಪಕ್ಕೆ ಅನುಗುಣವಾಗಿ ಮೂರ್ತಿ ತಯಾರಿಸ ಬೇಕಲ್ಲವೇ? ಪರಿಸರಕ್ಕೆ ಕ್ಷೋಭೆ ಉಂಟಾಗದಂತೆ ವಿಗ್ರಹ ತಯಾರಿಸುವುದು ಧರ್ಮಸಮ್ಮತ ವಲ್ಲವೇ? ಹಾಗಾಗಿ ಪರಿಸರ ಪ್ರೇಮಿಗಳ ಸ್ವಾಭಾವಿಕ ಮಣ್ಣಿನ ವಿಗ್ರಹಗಳನ್ನು ತಯಾರಿಸಬೇಕೆಂಬ ಕೂಗೂ ನ್ಯಾಯ ಸಮ್ಮತವಲ್ಲವೇ? ಹಿಟ್ಟುಗಳು, ಜೇಡಿ ಮಣ್ಣು, ಅರಿಶಿನ, ಇದ್ದಿಲು, ಅಳಲೆಕಾಯಿ, ಅರಿಶಿನ–ಕುಂಕುಮ, ಅಶ್ವಗಂಧ, ವಿಭೂತಿ, ಗೋಪಿಚಂದನ ಮುಂತಾದವುಗಳಿಂದಲೂ ಬಣ್ಣ ಲೇಪಿಸಬಹುದೆಂದು ಹಲವಾರು ಅರ್ಚಕರೇ ಹೇಳುತ್ತಾರೆ! ಹಾಗಾಗಿ ನೀರಿನಲ್ಲಿ ಸುಲಭವಾಗಿ ಕರಗುವ ಮಣ್ಣಿನ ಗಣಪತಿ ಪರಿಸರ ಸ್ನೇಹಿಯೂ ಹೌದು! ಪೂಜಿಸಲು ಸೂಕ್ತನೂ ಹೌದು ಅಲ್ಲವೇ?

ಪರಿಸರವಾದಿ ಸಂಘಟನೆಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಆಶ್ರಯದೊಂದಿಗೆ ಸೇರಿ ಪರಿಸರ ಸ್ನೇಹೀ ವಿಗ್ರಹಗಳನ್ನು ಬಳಸಲು ಸಾರ್ವಜನಿಕರಲ್ಲಿ ಪ್ರೇರೇಪಿಸಿ ತರಬೇತಿಯನ್ನು ನೀಡುತ್ತಿದೆ. ಹಾಗಾಗಿ ನಾವೆಲ್ಲರೂ ಈ ಪರಿಸರ ಸೇವೆಯ ಸ್ನೇಹಿತರಂತೆ ಗಣಪತಿ ಸೇವೆ ಪೂಜೆಯ ಹರಿಕಾರ ರಾಗಿ ಅವನ ಅನುಗ್ರಹ ಪಡೆಯೋಣ ಅಲ್ಲವೇ?

ನಿಮಗಿದು ಗೊತ್ತೆ?



ನಮ್ಮ ಕೈನ 50% ಶಕ್ತಿಯು ಕಿರುಬೆರಳಿನಲ್ಲಿ ಇರುತ್ತದೆ. ಅಕಸ್ಮಾತ್ ನಮ್ಮ ಕಿರುಬೆರಳನ್ನು ಕಳೆದುಕೊಂಡರೆ 50% ಶಕ್ತಿಯನ್ನು ಕೈ ಕಳೆದುಕೊಳ್ಳುತ್ತದೆ



ಕೇವಲ ಒಂದು ಗಂಟೆ ಹೆಡ್‌ಫೋನ್ ಬಳಸುವುದರಿಂದ ನಮ್ಮ ಕಿವಿಯಲ್ಲಿ 700 ಪಟ್ಟು ಬ್ಯಾಕ್ಟೀರಿಯಾಗಳು ಹೆಚ್ಚಾಗುತ್ತವೆ



ಅಕ್ಟೋಪಸ್ 3 ಹೃದಯಗಳನ್ನು ಹೊಂದಿವೆ. ಒಂದು ಇಡೀ ವ್ಯವಸ್ಥೆಗಳಿಗೆ ರಕ್ತವನ್ನು ಪಂಪ್ ಮಾಡುತ್ತವೆ. ಮತ್ತೆ ಎರಡು ಕೇವಲ ಕಿವಿರುಗಳಿಗೆ ಸಮರ್ಪಿಸಲಾಗಿದೆ.



ಮರಿಯಾನ ಟ್ರೆಂಚ್ (ಫೆಸಿಫಿಕ್ ಸಾಗರ) ಪ್ರಪಂಚದ ಅತ್ಯಂತ ಆಳವಾದ ಸ್ಥಳವೆಂದು ಗುರುತಿಸಲ್ಪಟ್ಟಿದೆ

ವಿವಿಧ ರಾಷ್ಟ್ರಗಳ ಅತ್ಯುತ್ತಮ ಶಿಕ್ಷಣ ಆಯ್ದು ಬೋಧಿಸಿ ಮಾದರಿ ಶಿಕ್ಷಕರಾದ ಮಧುಸೂದನ್



ಸರ್ಕಾರಿ ಶಾಲಾ ಮಕ್ಕಳಿಗೆ ವಿಶ್ವದ ಅತ್ಯುತ್ತಮ ಶಿಕ್ಷಣ ದೊರಕಬೇಕೆಂಬ ಮಹದಾಸೆಯೊಂದಿಗೆ ಆ ನಿಟ್ಟಿನಲ್ಲಿ ವಿಶಿಷ್ಟ ಪ್ರಯತ್ನದಲ್ಲಿ ತೊಡಗಿರುವ ಮೈಸೂರಿನ ಹಿನಕಲ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿಜ್ಞಾನ ಶಿಕ್ಷಕ ಮಧುಸೂದನ್ ಕೆ.ಎಸ್. ಅವರಿಗೆ 'ರಾಷ್ಟ್ರೀಯ ಉತ್ತಮ ಶಿಕ್ಷಕ' ಪ್ರಶಸ್ತಿ ಸಂದಿದೆ. ಈ ಪ್ರಶಸ್ತಿಗೆ ರಾಜ್ಯದಿಂದ ಆಯ್ಕೆಯಾಗಿರುವ ಏಕೈಕ ಶಿಕ್ಷಕರಾಗಿರುವ ಇವರು ಕಳೆದ ವರ್ಷ 'ರಾಜ್ಯ ಉತ್ತಮ ಶಿಕ್ಷಕ' ಪ್ರಶಸ್ತಿಗೂ ಭಾಜನರಾಗಿದ್ದರು. ತರಗತಿಯ ನಾಲ್ಕು ಗೋಡೆಗಳ ಮಧ್ಯೆ ಪಠ್ಯ ಬೋಧನೆಗಷ್ಟೇ ಸೀಮಿತವಾಗದೆ ನಿರಂತರ ಅಧ್ಯಯನ ಹಾಗೂ ತಮ್ಮದೇ ಆದ ವಿಭಿನ್ನ ಪ್ರಯತ್ನಗಳ ಮೂಲಕ ಮಕ್ಕಳಿಗೆ ವಿಶೇಷ ಶಿಕ್ಷಣ ನೀಡುವಲ್ಲಿ ಇವರು ಮಾದರಿಯಾಗಿದ್ದಾರೆ. ಇದಕ್ಕಾಗಿ ಲಕ್ಷಾಂತರ ರೂ. ಸ್ವಂತ ಹಣದಲ್ಲಿ ವಿಶೇಷ ಕೊಠಡಿಯ ವ್ಯವಸ್ಥೆ ಮಾಡಿಕೊಂಡಿದ್ದಾರೆ. ವಿಶ್ವದ ಅತ್ಯುತ್ತಮ ಶಿಕ್ಷಣ ವ್ಯವಸ್ಥೆ ಹೊಂದಿರುವ ಫಿನ್‌ಲ್ಯಾಂಡ್ ಮಾದರಿಯಲ್ಲಿ ಮಕ್ಕಳಿಗೆ ಅನುಭವಾತ್ಮಕ ಶಿಕ್ಷಣ ನೀಡುವ ಹಾದಿಯಲ್ಲಿ ಮುನ್ನಡೆದಿದ್ದಾರೆ. ತಮ್ಮ ಸೇವೆಗೆ ರಾಷ್ಟ್ರ ಮಟ್ಟದ ಪ್ರಶಸ್ತಿ ಸಂದಿರುವ ಹಿನ್ನೆಲೆಯಲ್ಲಿ 'ಮೈಸೂರು ಮಿತ್ರ'ನೊಂದಿಗೆ ಸಂತಸ ವ್ಯಕ್ತಪಡಿಸಿ, ಬೋಧನೆ ಹಾಗೂ ಕಲಿಕೆ ಸಂಬಂಧಿತ ಹಲವು ಆಸಕ್ತಿದಾಯಕ ವಿಚಾರಗಳನ್ನು ಹಂಚಿಕೊಂಡಿದ್ದಾರೆ.

ಸಂದರ್ಶನ: ಎಸ್.ಬಿ.ದೇವರಾಜ

ಮೈಸೂರು ಮಿತ್ರ: ಕೇಂದ್ರ ಶಿಕ್ಷಣ ಸಚಿವಾಲಯದಿಂದ ಕೊಡಮಾಡುವ 'ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ'ಗೆ ಭಾಜನರಾಗಿದ್ದೀರಿ. ಅದೂ ರಾಜ್ಯದಿಂದ ಆಯ್ಕೆಯಾಗಿರುವ ಏಕೈಕ ಶಿಕ್ಷಕರು ನೀವು. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?

ಮಧುಸೂದನ್: 'ರಾಷ್ಟ್ರೀಯ ಶಿಕ್ಷಕ' ಪ್ರಶಸ್ತಿ ಬಂದಿರುವುದಕ್ಕೆ ತುಂಬಾ ಸಂತೋಷವಾಗಿದೆ. ಪ್ರಶಸ್ತಿಗಳ ಬಗ್ಗೆ ಸಮಾಜದಲ್ಲಿ ಭಿನ್ನಾಭಿಪ್ರಾಯಗಳಿರಬಹುದು. ಆದರೆ ವೈಯಕ್ತಿಕವಾಗಿ ನನ್ನ ಪ್ರಯತ್ನಕ್ಕೆ ಮತ್ತಷ್ಟು ಗಟ್ಟಿತನ ತಂದುಕೊಟ್ಟಿದೆ. ಮತ್ತಷ್ಟು ಉತ್ಸಾಹದಿಂದ ನನ್ನ ಕೆಲಸ ಮುಂದುವರೆಸಲು ಪ್ರೇರಣೆ ಸಿಕ್ಕಿದೆ. ಈ ಸಂದರ್ಭದಲ್ಲಿ ನಮ್ಮ ಶಾಲೆಯ ಶಿಕ್ಷಕ ವರ್ಗ, ಮಕ್ಕಳು ಸೇರಿದಂತೆ ನನ್ನ ವಿಭಿನ್ನ ಪ್ರಯೋಗಾತ್ಮಕ ಕೆಲಸಗಳಿಗೆ ನೆರವಾದ ಎಲ್ಲರಿಗೂ ಧನ್ಯವಾದ ತಿಳಿಸುತ್ತೇನೆ.

ಮಿತ್ರ: ನಿಮ್ಮ ಬಾಲ್ಯ, ಶಿಕ್ಷಣ, ವೃತ್ತಿ ಜೀವನದ ಬಗ್ಗೆ ತಿಳಿಸಿಕೊಡುವಿರಾ?.

ಮಧುಸೂದನ್: ನಾನು ಮೂಲತಃ ಕೆ.ಆರ್.ನಗರ ತಾಲೂಕು, ಸಾಲಿಗ್ರಾಮ ಬಳಿಯ ಕೆಡಗ ಗ್ರಾಮದ ನಿವೃತ್ತ ಶಿಕ್ಷಕ ಸ್ವಾಮಿ ಕೆ.ಟಿ. ಹಾಗೂ ಶಾರದಾ ದಂಪತಿ ಪುತ್ರ. ತಮ್ಮ ತಂದೆ ಕಾರ್ಯ ನಿರ್ವಹಿಸುತ್ತಿದ್ದ ಕೊಡಗಿನ ಸೋಮವಾರಪೇಟೆ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು, 6ನೇ ತರಗತಿಗೆ ಮಡಿಕೇರಿಯ ನವೋದಯ ಶಾಲೆಗೆ ಸೇರಿದೆ. ದ್ವಿತೀಯ ಪಿಯುಸಿ ನಂತರ ಮೈಸೂರಿನ ವಸಂತ ಮಹಲ್ ಡಯಟ್‌ನಲ್ಲಿ ಡಿ.ಇಡಿ ವ್ಯಾಸಂಗ ಮಾಡಿದೆ. ಬಳಿಕ ಮಹಾ ರಾಜ ಕಾಲೇಜಿನಲ್ಲಿ ಪದವಿ(ಹೆಚ್‌ಪಿಇ), ಮುಕ್ತ ವಿವಿಯಲ್ಲಿ ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದೆ. ಇಗ್ನೋನಲ್ಲಿ ಬಿ.ಇಡಿ ಮುಗಿಸಿದ್ದು, ಪ್ರಸ್ತುತ ಇಂಗ್ಲಿಷ್ ವಿಷಯದಲ್ಲಿ ಮತ್ತೊಂದು ಸ್ನಾತಕೋತ್ತರ ಪದವಿ ಅಧ್ಯಯನದಲ್ಲಿದ್ದೇನೆ. 2008ರಲ್ಲಿ ಶಿಕ್ಷಕ ವೃತ್ತಿಗೆ ಸೇರಿ ಕೆ.ಆರ್.ನಗರದ ಎರೆಮನುಗನಹಳ್ಳಿ, ಮುದ್ದನಹಳ್ಳಿ ಶಾಲೆಯಲ್ಲಿ ಕೆಲಸ ಮಾಡಿದೆ. ನಂತರ ಬೇರ್ಯ ಕ್ಲಸ್ಟರ್ ಸಿಆರ್‌ಪಿಯಾಗಿದ್ದೆ. 2019 ಜುಲೈ 20ರಿಂದ ಈ ಹಿನಕಲ್ ಸರ್ಕಾರಿ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕುಟುಂಬದೊಂದಿಗೆ ಮೈಸೂರಿನ ವಿಜಯನಗರ 2ನೇ ಹಂತದಲ್ಲಿ ನೆಲೆಸಿದ್ದೇನೆ.

ಮಿತ್ರ: ನವೋದಯದಲ್ಲಿ ವಿದ್ಯಾಭ್ಯಾಸ ಮಾಡಿದವರಲ್ಲಿ ಬಹುತೇಕರು ಸಹಜವಾಗಿ ಉನ್ನತ ಹುದ್ದೆಗಳ ಬಯಸುತ್ತಾರೆ. ಆದರೆ ನೀವು ಪ್ರಾಥಮಿಕ ಹಂತದ ಶಿಕ್ಷಕರಾಗಲು ಏನಾದರೂ ಕಾರಣವಿದೆಯೇ?.

ಮಧುಸೂದನ್: ನಾನು ನವೋದಯದಲ್ಲಿ ದ್ವಿತೀಯ ಪಿಯುಸಿ ಮುಗಿಸಿ, ಬಿಎಸ್ಸಿ ಪದವಿಗೆ ದಾಖಲಾಗಿದ್ದೆ. ಆದರೆ ನನಗೆ ಕ್ರೀಡೆ ಎಂದರೆ ಅತೀವ ಆಸಕ್ತಿ. ಯೂನಿವರ್ಸಿಟಿ ಹಂತದ ಟೇಬಲ್ ಟೆನ್ನಿಸ್, ಹ್ಯಾಂಡ್ ಬಾಲ್ ಮತ್ತು ಶೆಟಲ್ ಬ್ಯಾಡ್ಮಿಂಟನ್ ಆಟಗಾರ ನಾಗಿದ್ದೆ. ಎರಡು ಬಾರಿ ರಾಜ್ಯ ಮಟ್ಟದ ಕಬ್ಬಡಿಯಲ್ಲೂ ಆಡಿದ್ದೇನೆ. ಕ್ರೀಡೆಗೆ ಹೆಚ್ಚು ಗಮನ ಕೊಡುತ್ತಿದ್ದ ಕಾರಣ ನಮ್ಮ ತಂದೆ ಬಿಎಸ್ಸಿ ಬಿಡಿಸಿ, ಡಿ.ಇಡಿಗೆ ಸೇರಿಸಿದರು. ಶಿಕ್ಷಕ ತರಬೇತಿಗೆ ಸೇರಿಸಿದರೆ ಬೇರೆ ಚಟುವಟಿಕೆಗಳಿಗೆ ಸಮಯ ಸಿಗುವುದಿಲ್ಲ ಎಂಬ ಉದ್ದೇಶದಿಂದ ಹಾಗೆ ಮಾಡಿದರು. ನನಗೂ ಶಿಕ್ಷಕ ವೃತ್ತಿ ಮೇಲೆ ಆಸಕ್ತಿ ಇದ್ದಿದ್ದರಿಂದ ಈ ದಾರಿಯಲ್ಲೇ ಮುಂದುವರೆದೆ. ಪ್ರಾಥಮಿಕ ಶಿಕ್ಷಕರೆಂದರೆ ಹಲವರು ಮೂಗು ಮುರಿಯುತ್ತಾರೆ. ನನ್ನ ಶೈಕ್ಷಣಿಕ ಹಿನ್ನೆಲೆ ತಿಳಿದಿರುವ ಹಲವರು ಉದ್ಯೋಗ ಬದಲಿಸಲು ಸಲಹೆ ನೀಡಿದ್ದರು. ಆದರೆ ಇರುವ ಸ್ಥಳದಲ್ಲೇ ವಿಭಿನ್ನವಾಗಿ ಕೆಲಸ ಮಾಡಬೇಕೆಂಬ ಛಲ ನನ್ನದು. ಆ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮುಂದುವರೆಸಿದ್ದೇನೆ.





ಮಿತ್ರ: 'ಎಂ ಲಾಂಜ್'ನ ವಿಶೇಷತೆಗಳೇನು ಹಾಗೂ ಅದರಿಂದ ಮಕ್ಕಳ ಕಲಿಕೆಯಲ್ಲಾದ ಸುಧಾರಣೆ ಮೌಲ್ಯಮಾಪನ ಮಾಡಲಾಗುತ್ತದೆಯೇ?.

ಮಧುಸೂದನ್: 'ಎಂ ಲಾಂಜ್'ನಲ್ಲಿ ರೊಬೊಟಿಕ್ ಕ್ಲಾಸ್, ಕೃತಕ ಬುದ್ಧಿಮತ್ತೆ(ಎಐ), ಎಲೆಕ್ಟ್ರಾನಿಕ್ ತರಗತಿ, ವರ್ಚುವಲ್ ರಿಯಾಲಿಟಿ ಕ್ಲಾಸ್, ಹೀಗೆ ವಿವಿಧ ಆಯಾಮಗಳಲ್ಲಿ ಶಿಕ್ಷಣ ನೀಡಲಾಗುತ್ತಿದೆ. ಮಕ್ಕಳ ಕಲಿಕಾ ಪ್ರಗತಿ ತಿಳಿಯಲು ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲಾಗಿದೆ. ಐದರಿಂದ ಏಳನೆ ತರಗತಿವರೆಗಿನ ಮಕ್ಕಳಿಗಾಗಿ ವಿಜ್ಞಾನ ಲ್ಯಾಬ್, ಒಂದು ಮತ್ತು ಎರಡನೇ ತರಗತಿ ಮಕ್ಕಳಿಗೆ ಸ್ಮಾರ್ಟ್‌ಕ್ಲಾಸ್, ಕ್ಯೂಆರ್ ಕೋಡ್ ಮತ್ತು ಸ್ಕ್ಯಾನರ್ ಬಳಸಿ ಮಕ್ಕಳ ದಾಖಲಾತಿ ನಮೂದು ಸೇರಿದಂತೆ ಹಲವು ಆಧುನಿಕ ವ್ಯವಸ್ಥೆಗಳಿವೆ. ಒಟ್ಟಾರೆ ಅನುಭವಾತ್ಮಕ ಕಲಿಕೆಗೆ ಹೆಚ್ಚು ಒತ್ತು ನೀಡಲಾಗಿದೆ.

ಮಿತ್ರ: ಇದಕ್ಕೆಲ್ಲಾ ಅಗತ್ಯ ಮಾಹಿತಿ ಸೇರಿದಂತೆ ಪೂರ್ವ ತಯಾರಿ ಹೇಗೆ ಮಾಡಿಕೊಂಡಿರಿ?.

ಮಧುಸೂದನ್: ಪ್ರತಿಭಾನ್ವಿತ ಬಡ ಮಕ್ಕಳಿಗೆ ನವೋದಯ ಕೇಂದ್ರಗಳಿಗೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಅಲ್ಲಿ ಉತ್ತಮ ಶಿಕ್ಷಣ ನೀಡಲಾಗುತ್ತದೆ. ಆದರೆ ಸೀಮಿತ ಸೀಟ್‌ಗಳಿರುವುದರಿಂದ ಎಲ್ಲಾ ಪ್ರತಿಭಾನ್ವಿತರಿಗೂ ಅಲ್ಲಿ ಕಲಿಯುವ ಅವಕಾಶ ಸಿಗುವುದಿಲ್ಲ. ಅಂತಹ ಅದೆಷ್ಟೋ ಮಕ್ಕಳು ಸರ್ಕಾರಿ ಶಾಲೆಗಳಲ್ಲಿರುತ್ತಾರೆ. ಅವರಿಗೆ ವಿಶ್ವದ ಅತ್ಯುತ್ತಮ ಶಿಕ್ಷಣವನ್ನು ನಮ್ಮ ಮಕ್ಕಳಿಗೆ ನೀಡಬೇಕೆಂಬ ಆಶಯದೊಂದಿಗೆ ಯಾವೆಲ್ಲಾ ರಾಷ್ಟ್ರಗಳಲ್ಲಿ ಅತ್ಯುತ್ತಮ ಶಿಕ್ಷಣ ಪದ್ಧತಿ ಅನುಸರಿಸಲಾಗುತ್ತಿದೆ ಎಂಬುದರ ಬಗ್ಗೆ ಮಾಹಿತಿ ಸಂಗ್ರಹಿಸಿದೆ. ವಿದೇಶಗಳಲ್ಲಿರುವ ಸ್ನೇಹಿತರನ್ನೂ ಸಂಪರ್ಕಿಸಿ ಅಲ್ಲಿನ ಪಠ್ಯ, ಬೋಧನೆ, ಚಟುವಟಿಕೆಗಳ ಬಗ್ಗೆ ತಿಳಿದುಕೊಂಡೆ. ಹಾಗೆಯೇ ಪ್ರೋಗ್ರಾಮ್ ಫಾರ್ ಇಂಟರ್‌ನ್ಯಾಷನಲ್ ಸ್ಟುಡೆಂಟ್ ಅಸಿಸ್ಮೆಂಟ್(PISA) ಸಂಸ್ಥೆಯ ಮೌಲ್ಯಮಾಪನಾ ವರದಿಯನ್ನೂ ಅಧ್ಯಯನ ಮಾಡಿ, ಸಮಗ್ರ ಮಾಹಿತಿಯನ್ನು ಸಂಗ್ರಹಿಸಿಕೊಂಡೆನು.



> “
> **ಮೈಸೂರು ಮಿತ್ರ: ನಿಮ್ಮ ಶಾಲೆಯ ಮಕ್ಕಳಿಗೆ ಯಾವ ರೀತಿಯ ವಿಶೇಷ ಶಿಕ್ಷಣ ಕಲ್ಪಿಸಿದ್ದೀರಿ?.**
>
> **ಮಧುಸೂದನ್:** ಹೊಸ ಪ್ರಯೋಗ, ಆವಿಷ್ಕಾರಗಳ ಮೂಲಕ ಮಕ್ಕಳಿಗೆ ಅತ್ಯುತ್ತಮ ಶಿಕ್ಷಣ ಕಲ್ಪಿಸಬೇಕೆಂಬುದು ನನ್ನ ಮೂಲ ಆಶಯ. ಇದಕ್ಕಾಗಿ ಮೀಟ್, ಮೇಕ್, ಮಾರ್ವೆಲ್ ವಿಸ್ತೃತೆಯ ನ್ನೊಳಗೊಂಡ 'ಎಂ ಲಾಂಜ್' ಕೊಠಡಿ ರೂಪಿಸಿದ್ದೇನೆ. ಇದರಲ್ಲಿ ಆಧುನಿಕ ತಂತ್ರಜ್ಞಾನದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಮೊದಲಿಗೆ ಮಕ್ಕಳು ಸೇರುತ್ತಾರೆ, ನಂತರ ಲಭ್ಯವಿರುವ ಸೌಲಭ್ಯಗಳ ಮೂಲಕ ಅವರ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಾರೆ, ಅಂತಿಮವಾಗಿ ಫಲಿತಾಂಶವನ್ನು ಸಂಭ್ರಮಿಸುತ್ತಾರೆ. ಇದೇ 'ಎಂ ಲಾಂಜ್'ನ ಪರಿಕಲ್ಪನೆಯಾಗಿದೆ. ಜೊತೆಗೆ ಈ ಕೊಠಡಿಯಲ್ಲಿ ಮಕ್ಕಳು ಆಟವಾಡುತ್ತಲೇ ಪಠ್ಯವನ್ನೂ ಕಲಿತುಕೊಳ್ಳುತ್ತಾರೆ. ಕಲಿತಿದ್ದನ್ನು ಜೀವನದಲ್ಲಿ ಬಳಸುವ ರೀತಿ ಮಕ್ಕಳನ್ನು ಸಿದ್ಧಗೊಳಿಸುವ ತರಗತಿಗಳನ್ನು ರೂಪಿಸಲಾಗಿದೆ.

ಮಿತ್ರ: ಪಿಸಾ ವರದಿಯನ್ವಯ ಯಾವ ರಾಷ್ಟ್ರದಲ್ಲಿ ಅತ್ಯುತ್ತಮ ಶಿಕ್ಷಣ ಮಾದರಿ ಇದೆ. ಅದನ್ನು ನಮ್ಮ ರಾಜ್ಯದಲ್ಲಿ ಅಳವಡಿಸಿಕೊಳ್ಳುವ ಸಾಧ್ಯತೆ ಇದೆಯೇ?


ಮಧುಸೂದನ್: ಪಿಸಾದ ಮೌಲ್ಯಮಾಪನದನ್ವಯ ಫಿನ್‌ಲ್ಯಾಂಡ್ ಶಿಕ್ಷಣ ವ್ಯವಸ್ಥೆ ಎಲ್ಲದಕ್ಕಿಂತ ವಿಭಿನ್ನವಾಗಿದೆ. ಅಲ್ಲಿ ಅನುಭವಾತ್ಮಕ ಶಿಕ್ಷಣ ನೀಡುತ್ತಿದ್ದಾರೆ. ಕೇವಲ ಅಂಕಗಳಲ್ಲಿ ಎಲ್ಲಾ ಮಕ್ಕಳ ಪ್ರತಿಭೆ-ಜ್ಞಾನಮಟ್ಟ ಅಳೆಯಲು ಸಾಧ್ಯವಿಲ್ಲ. ಹಾಗಾಗಿ ಅಲ್ಲಿ 7ನೇ ತರಗತಿವರೆಗೆ ಪರೀಕ್ಷೆಗೆ ಮಹತ್ವ ನೀಡುವುದಿಲ್ಲ. ಭಾರತದಲ್ಲಿ ಅತ್ಯುನ್ನತ ಐಎಎಸ್ ಹುದ್ದೆಗಿರುವ ಗೌರವ, ಮಾನ್ಯತೆಯನ್ನು ಅಲ್ಲಿ ಪ್ರಾಥಮಿಕ ಶಿಕ್ಷಕರಿಗೆ ನೀಡಲಾಗಿದೆ. ನೇಮಕಾತಿ ವಿಧಾನ ಹಾಗೂ ವೇತನ ಪ್ರಮಾಣವೂ ಉನ್ನತ ಹುದ್ದೆ ಮಾದರಿಯಲ್ಲಿಯೇ ಇದೆ. ದೇಶದ ಬೆಳವಣಿಗೆಗೆ ಪ್ರಾಥಮಿಕ ಶಿಕ್ಷಣ ಬಹಳ ಮುಖ್ಯ ಎಂದು ನಂಬಿದ್ದಾರೆ. ಸದ್ಯ ನಮ್ಮಲ್ಲಿ ಅಂತಹ ವ್ಯವಸ್ಥೆ ಇಲ್ಲ. ಮುಂದೆ ಬರಬಹುದು ಎಂಬ ಆಶಯವಿದೆ. ಹೀಗೆ ಅತ್ಯುತ್ತಮ ಶಿಕ್ಷಣ ವ್ಯವಸ್ಥೆಗಳ ಬಗ್ಗೆ ತಿಳಿದುಕೊಂಡ ನಂತರ ನಾನೂ ಈ ವಿಭಿನ್ನ ಪ್ರಯತ್ನಕ್ಕೆ ಮುಂದಾದೆ. ಯಾರು ಏನೆಂದುಕೊಂಡರೂ ಸರಿ ಅನುಭವಾತ್ಮಕ ಶಿಕ್ಷಣ ನೀಡಬೇಕೆಂದು ನಿರ್ಧರಿಸಿದೆ.


ಮಿತ್ರ: ನಿಮ್ಮ ಈ ವಿಭಿನ್ನ ಪ್ರಯತ್ನ ಆರಂಭವಾಗಿದ್ದು ಯಾವಾಗ, ಇದರ ವೆಚ್ಚಕ್ಕೆ ಸಿಎಸ್‌ಆರ್ ನಿಧಿಯಿಂದ ಏನಾದರೂ ನೆರವು ಸಿಗುತ್ತಿದೆಯೇ?.

ಮಧುಸೂದನ್: ಈ ಪರಿಕಲ್ಪನೆ ಅನುಷ್ಠಾನವನ್ನು 2019ರಲ್ಲಿ ಆರಂಭಿಸಿದೆ. ಆದರೆ ಇಲಾಖೆಯು ನನ್ನನ್ನು ಸಂಪನ್ಮೂಲ ವ್ಯಕ್ತಿ ಜವಾಬ್ದಾರಿ ನೀಡಿದ್ದರಿಂದ ಓಡಾಟ ಹೆಚ್ಚಾಗಿತ್ತು. ಆದರೆ ಕಳೆದೆರಡು ವರ್ಷಗಳಿಂದ ಹೆಚ್ಚು ಒತ್ತು ನೀಡಿದ್ದೇನೆ. ನಿರ್ಮಾಣ ಕಾರ್ಯಗಳಿಗಾದರೆ ಸಿಎಸ್‌ಆರ್ ಫಂಡ್ ಸಿಗುತ್ತದೆ. ಆದರೆ ಇಂತಹ ಪ್ರಯೋಗಾತ್ಮಕ ಚಟುವಟಿಕೆಗಳಿಗೆ ನೆರವು ನೀಡುವುದು ಕಷ್ಟ, ಅಲ್ಲದೆ ಇದು ಹೊಸ ಪರಿಕಲ್ಪನೆ ಆಗಿರುವುದರಿಂದ ಮಕ್ಕಳೊಂದಿಗೆ ನಾನೂ ಕಲಿಯಬೇಕಿದೆ. ಆದ್ದರಿಂದ ವೈಯಕ್ತಿಕವಾಗಿ ನಾಲ್ಕೈದು ಲಕ್ಷ ಹಣವನ್ನು ವಿನಿಯೋಗಿಸಿದ್ದೇನೆ. ಕಳೆದ ವರ್ಷ ನನ್ನ ಸ್ನೇಹಿತರೊಬ್ಬರು ಸಹಾಯ ಮಾಡಿದ್ದರು. ಕಲಿಕೆ ನಿರಂತರವಾಗಿದ್ದು, ಅದಕ್ಕೆ ಪೂರಕವಾದ ಸೌಲಭ್ಯಗಳ ವ್ಯವಸ್ಥೆಯನ್ನೂ ಮಾಡಿಕೊಳ್ಳಬೇಕಾಗುತ್ತದೆ. ಸರ್ಕಾರದಿಂದ ಬೆಂಬಲ ದೊರೆತರೆ ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದಲ್ಲಿ ಮಾಡಬಹುದು.


ನಾಡಿನ ಜನತೆಗೆ
ಗೌರಿ-ಗಣೇಶ
ಹಬ್ಬದ ಶುಭಾಶಯಗಳು
ಅಭಿನಂದನೆಗಳು
ರಾಜ್ಯ ವಿಧಾನ ಪರಿಷತ್ತಿಗೆ ನಾಮ ನಿರ್ದೇಶನಗೊಂಡಿರುವ
ಕೆಪಿಸಿಸಿ ಸಂವಹನ ಮತ್ತು ಮಾಧ್ಯಮ ವಿಭಾಗದ ಅಧ್ಯಕ್ಷ ಶ್ರೀ ರಮೇಶ್ ಬಾಬು,
ಅನಿವಾಸಿ ಭಾರತೀಯ ಸಮಿತಿಯ ಉಪಾಧ್ಯಕ್ಷೆ ಡಾ.ಆರತಿ ಕೃಷ್ಣ,
ಹಿರಿಯ ಪತ್ರಕರ್ತ ಶ್ರೀ ಕೆ.ಶಿವಕುಮಾರ್ ಮತ್ತು
ದಲಿತ ಮುಖಂಡ ಶ್ರೀ ಎಫ್.ಎಚ್.ಜಕ್ಕಪ್ಪನವರ್ ಅವರುಗಳಿಗೆ
ಅಭಿನಂದನೆಗಳು
ನಿಮ್ಮ ಸೇವಾಕಾಂಕ್ಷಿ
ಕೆ.ವಿ. ಮಲ್ಲೇಶ್
ಮಾಜಿ ಸದಸ್ಯರು, ಮೈಸೂರು ಮಹಾ ನಗರ ಪಾಲಿಕೆ
ಅಧ್ಯಕ್ಷರು, ಅನಿಕೇತನ ಸೇವಾ ಟ್ರಸ್ಟ್
9845218453 9449841018
kvmallesh39@gmail.com /kvmallesh


ಕರುನಾಡಿನ ಸಮಸ್ತ ಜನತೆಗೆ
ಗೌರಿ-ಗಣೇಶ ಹಬ್ಬದ
ಶುಭಾಶಯಗಳು
ಸುರೇಶ
ಅಪೂರ್ವ ಪ್ರಾಪರ್ಟೀಸ್, &
ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು
ಬೋಗಾದಿ 2ನೇ ಹಂತ
ಸವಿತಾ ಸುರೇಶ್
ಮಾಜಿ ನಗರ ಪಾಲಿಕೆ ಸದಸ್ಯರು ಹಾಗೂ
ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರು
ಮೈಸೂರು ಮಹಾನಗರ ಪಾಲಿಕೆ.


ಸಮಸ್ತ ನಾಡಿನ ಜನತೆಗೆ ಗೌರಿ ಗಣೇಶ ಹಬ್ಬದ ಶುಭಾಷಯಗಳು
ಶ್ರೀ ಪಿ. ಪ್ರಶಾಂತ್ ಗೌಡ
ಮಾಜಿ ಸದಸ್ಯರು ಮೈಸೂರು ಮಹಾನಗರ ಪಾಲಿಕೆ
ಶುಭ ಕೋರುವವರು : ಪಿ.ಪ್ರಶಾಂತ್ ಗೌಡ ಸ್ನೇಹ ಬಳಗ ಮೈಸೂರು


"ನಾಡಿನ ಸಮಸ್ತ ಜನತೆಗೆ"
ಗೌರಿ-ಗಣೇಶ ಹಬ್ಬದ
ಶುಭಾಶಯಗಳು
ಶುಭಕೋರುವವರು
ಮ.ವಿ. ರಾಮಪ್ರಸಾದ್
ಮಾಜಿ ಸದಸ್ಯರು, ಮೈಸೂರು ಮಹಾನಗರ ಪಾಲಿಕೆ
"ಜನರಿಂದ
ಜನರಿಗಾಗಿ"



ಮೊಬೈಲಿಲ್ದೇ ನಾವು ಬದುಕೋಕಾಗೊಲ್ಲ...



ಚೋಟುದ್ದ ಮೊಬೈಲೊಳು ಬ್ರಹ್ಮಾಂಡವನ್ನೇ ಕಂಡವರಂತೆ ನಾವು... ಕೈಯ್ಯಲ್ಲೇ ಕೈಲಾಸವಂತೆ, ಅಂಗೈಲಿ ಅರಗಿನ ಅರಮನೆಯಂತೆ..!! ಮೊಬೈಲಲ್ಲೇ ಗೇಮ್ ಅಂತೆ.. ಮರಕೋತಿ ಆಟವಿಂದು ಜಂಗಲ್ ಮೇಜ್.. ಮಂಕಿ ರನ್.. ಅಂದು ದೇಗುಲದ ಸುತ್ತ ಓಡುತ್ತಿದ್ದ ಓಟವೆ ಇಂದು ಟೆಂಪಲ್ ರನ್..! ಎಷ್ಟು ಬೇಗ ಬದಲಾಯ್ತು ಅಲ್ಲವೇ ಕಾಲಚಕ್ರ..!! ಹ್ಞೈ..ಹಳೆಯ ಕಾಲವೇ ಗಮ್ಮತ್ತು.. ಸವಿ ಸವಿ ನೆನಪು ಸಾವಿರ ನೆನಪು..! ಓಲ್ಡನ್ ಲೈಫ್ ಇಸ್ ಗೋಲ್ಡನ್ ಲೈಫ್

ವಿಡಿಯೋ ಕಾಲ್ ಅಂತೆ.. ಆನ್‌ಲೈನ್ ಶಾಪಿಂಗ್ ಅಂತೆ. ಅದೇನೋ ಚಾಟಿಂಗ್ ಅಂತೆ. ಡೇಟಿಂಗ್ ಅಂತೆ! ಬೆಟ್ಟಿಂಗ್ ಅಂತೆ..! ಇನ್‌ಸ್ಟಾಗ್ರಾಂ 2ಮಿಲಿಯನ್ ಫಾಲೋವರ್ಸ್ ಅಂತೆ..! ಜ್ವರ ಬಂದು ಬಿದ್ದರೆ ಯಾರೂ ಮೂಸುವವರಿಲ್ಲ..! ಮೊಬೈಲಲ್ಲಿ ಫ್ರೆಂಡ್ಸ್ ಮೆಸೇಜ್ ಏನೇನೋ ಅಂತೆ. ಎದುರಿಗೆ ಸಿಕ್ಕಿದ್ರೆ ಎಲ್ಲ ಬಲ್ಲಪ್ಪ ಕೇಳಿದ್ರೆ ಕಲ್ಲಪ್ಪ..! ಮೂಕ ಪ್ರೇಕ್ಷಕರೆಲ್ಲರು. ದೂರವಿದ್ದೂ ಹತ್ತಿರದ ಹಾಗೆ ಭಾಸವಾದರೂ, ಹತ್ತಿರವಿದ್ದವರೂ ದೂರವಾದರು... ವಿಚಿತ್ರ ಜನರು.. ಜನ ಮರುಳೋ ಜಾತ್ರೆ ಮರುಳೋ ಇಲ್ಲಾ ನಾನೇ ಮರುಳೋ!! ಗೊತ್ತಿಲ್ಲ.

ಮನೆಯಲ್ಲಿ ಮಾತಿಲ್ಲ-ಕಥೆಯಿಲ್ಲ..! ಮಗನೆಲ್ಲೋ ಮನೆಯೆಲ್ಲೋ..! ಮುಸುಡಿ ಕಂಡರೂ ಮುದ್ದಾಡಲಾದೀತೇ..! ಬುತ್ತಿ ಕಂಡರೂ ತುತ್ತು ತಿನ್ನಲಾದೀತೇ.... ಇಷ್ಟೇ ಸಾರ್..! ಗಾಳಿಯ ಗೋಪುರವೆಲ್ಲವು..!! ಮಸಣದ ಮೇಲಿನ ಮಂದಿರದಂತೆ..! ಭ್ರಮೆಯ ಬ್ರಹ್ಮಾಂಡ..! ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ ಅಷ್ಟೇ..!! ಭ್ರಮೆಯ ಭ್ರಮಣದ ಸುತ್ತ ಓಡಿದೆವೆಲ್ಲ ಕುರಿಯ ಮಂದೆಯ ಹಾಗೆ.. ಹಗಲು ಕನಸು ಕಾಣುವ ಕುರುಡರಂತೆ?! ರಾಯರ ಕುದುರೆ ದಾರಿ ಸಾಗುತ್ತಾ ಕತ್ತೆಯಾಯ್ತಂತೆ..! ಕರಿ ಕಾಗೆ ಬಿಳಿಯಾದ ಮೇಲೆ ಕಲ್ಲು ನಗಾರಿಯೂ ಸದ್ದು ಮಾಡಿತು!!ಅಷ್ಟೇ ಜನಕ್ಕೆ ತಕ್ಕಂತೆ ಕಾಲ. ಕಾಲಕ್ಕೆ ತಕ್ಕ ಜನ..! ತಾಳಕ್ಕೆ ತಕ್ಕಂತೆ ಭಜನೆ ಭಜನೆಗೆ ತಕ್ಕ ತಾಳ?! ಜಟ್ಟಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬಂತೆ ಹೊಟ್ಟೆಗೆ ಹಿಟ್ಟಿಲ್ಲದಿದ್ರೂ ಜುಟ್ಟಿಗೆ ಮಲ್ಲಿಗೆ ಆಸೆ, ಪ್ರತಿಷ್ಠೆಗೆ ಕಟ್ಟು ಬಿದ್ದು ವಾಟ್ಸಾಪ್ ಸ್ಟೇಟಸ್-ಸ್ಟೋರಿ 'ಇನ್ನೂ ಏನೇನೋ' ತೋರಿಕೆಯ ಖುಷಿ ನವರಂಗಿ ನಾಟಕದ ಜೀವನ..ಹೇಗೆ ಬದುಕ್ತಾರೋ... ಅವರಿಗೇ ಗೊತ್ತು! ಫೇಸ್ಬುಕ್ ಜೀವನವೇ ನಿಜವಾಗಿ ಹೋಯ್ತು ಅಯ್ಯೋ ಬಡಪಾಯಿಯೇ !!

ಫೇಸ್ಬುಕ್ ಪರಿಚಯ..ಆನ್ ಪರಿಣಯ..!ಐ ಟ್ರಸ್ಟ್ ಹಿಮ್!2 ತಿಂಗಳಕ್ಕೆ ಡೈವೋರ್ಸಿಗೆ ಅಪ್ಲೆ! ಮೂರ್ನಾಲ್ಕು ಮದುವೆ ಸೋ ಆನ್..!! ವೆಡ್ಡಿಂಗ್ ಇಸ್ ಜಸ್ಟ್ ಡಿಮ್ಯಾಂಡ್ ಆಂಡ್ ಸಪ್ಲೈ..! ಪ್ರೀತಿ ಪ್ರೇಮ ಎಲ್ಲಾ ಬರೀ ಬದನೆಕಾಯಿ..!ಅಲ್ವೇ.. ಲೈಫು ಇಸ್ ಜಸ್ಟ್ ಬಿಸಿನೆಸ್..ಎಷ್ಟು ಬೇಗ ಬದಲಾದೆವು ಜನರೆಲ್ಲ..! ನೀ ಮಾಯೆಯೊಳಗೊ ಇಲ್ಲಾ ನಿನ್ನೊಳು ಮಾಯೆಯೋ!! ಗೊತ್ತಿಲ್ಲ..

ಕನ್ನಡಿಯ ಗಂಟೆಗೆ ಮುಗಿಬಿದ್ದು ಕೈಯೊಳಗಿನ ದಂಟು ಕೂಡ ದಕ್ಕದೇ ಹೋಯ್ತು..! ವಜ್ರದ ಹುಡುಕಾಟದ ರಭಸಕೆ ರಜತದ ಬೆಲೆಯು ಕಾಣದಾಯ್ತು..! ಕಸ್ತೂರಿ ಮೃಗವದು ತನ್ನೊಳಗಿನ ಸುಗಂಧವನರಿಯದೆ ಜಗವೆಲ್ಲವ ಅರಸಿತು! ಅದಕೇನು ಗೊತ್ತಿತ್ತು ತಾನೇ ಪರಿಮಳಕೆ ಅರಸನೆಂದು !.. ನಾವೂ ಅಷ್ಟೇ ಗುಂಗಿನಲ್ಲಿ ಮೈಮರೆತೆವು ನಾ ಮನುಜನೆಂಬುದನು!! ವಿನಾಶಕಾಲೇನ ವಿಪರೀತ ಬುದ್ಧಿ! ಅತಿರೇಕವಾದರೆ ಅಮೃತವೂ ವಿಷವೇ ಅಲ್ವೇ.!! ಅತಿ ಸರ್ವತ್ರ ವರ್ಜಯೇತ್..!

ತನ್ನೊಳಗೆ ತಾ ನಗುತಿದ್ದ ಹುಚ್ಚನ ನೋಡಿ ನಕ್ಕು ನಾ ಯೋಚಿಸಿ ಹುಚ್ಚನು ಲೋಕವೆಲ್ಲವ ಮರೆತು ತಾ ತೃಪ್ತನಾಗಿದ್ದನಾ ತುಷ್ಟಿಯನರಸಿ ಲೋಕವೆಲ್ಲಾ ಅಲೆದಾಡಿದೆ.. ತಡಕಾಡಿದೆ. ಕಾಣದ ಕಡಲಿಗೆ ಹುಡುಕಾಡಿದೆ..! ಸಂಶಯವೆನಗೆ ನಾ ಹುಚ್ಚನೇ? ಇಲ್ಲಾ ಅವನೇ? ಎಂದು ಸೋಜಿಗವೆಂದರೆ ಇಬ್ಬರಲ್ಲಿ ವ್ಯತ್ಯಾಸವೇನಿಲ್ಲ?! ಅವನು ನನ್ನನ್ನೇ ಹುಚ್ಚನೆಂದು ಬಗೆದು ನಕ್ಕಿದ್ದನೇ..


ಸಮುದ್ರವಾಗುವೆನೆಂದು ಹೊರಟ ನದಿಯು! ಕಾಣದಂತೆ ಮಾಯವಾಯ್ತಂತೆ..ಕಡಲೊಳು ಲೀನವಾಯ್ತಂತೆ ನಮ್ಮ ಮನಸೂ ಅಷ್ಟೇ! ಖುಷಿ ಒಳಗಿದ್ದರೂ ಜಗವೆಲ್ಲಾ ಅಲೆದಾಟ. ಏನ್ ಸೃಷ್ಟಿ ಅಲ್ವಾ ಭಗವಂತನದು ವಾಹ್..!ಮೂರು ದಿನದ ಬದುಕಿನ ಪಾಡು..! ಮೂರಾಬಟ್ಟೆ ಹಣೆಬರಹದ ಹಾಡು..!! ಜಾರಿಬಿದ್ದ ಜಾಣರು ನಾವು..ಅತೀ ಬುದ್ಧಿಜೀವಿಗಳು!! ನಿದ್ದೆಗೆ ಜಾರಿದ ಗಾವಿಲರು.!! ಲೈಫು ಇಷ್ಟೇನೆ?! ಅಂಗೈಲಿ ಬೆಣ್ಣೆ ಇದ್ರೂ ತುಪ್ಪಕ್ಕೆ ಅಲೆದಾಟ..! ಮರುಭೂಮಿ ಮೃಗಜಲಕೆ ಮಿತಿ ಮೀರಿ ಕಿತ್ತಾಟ..! ನಿಜದ ಸಂತೋಷದ ನದಿಯು ಬತ್ತಿ ಹೋದೀತು ಜೋಕೆ..! ಇನ್ನೇನು ಶಂಕೆ..! ಖುಷಿಯು ನಿನ್ನೊಳು. ನಿಸರ್ಗದೊಳುಂಟು ಮಂಕೆ..!!

ಇರುವುದೆಲ್ಲವ ಬಿಟ್ಟು ಇಲ್ಲದಿರುವುದರ ತುಡಿತ ಬದುಕೆಂಬ ಬುಗುರಿಯ ಸುತ್ತು..! ಇರುವ ಭಾಗ್ಯವ ನೆನೆದು ಬಾರೆನೆಂಬುದನು ಬಿಡು ಹರುಷಕಿದ್ದೇ ದಾರಿ! ಮಂಕು ದಿಣ್ಣೆಯೇ!!.. ನಾವೆಲ್ಲ ಒಂದೇ ರೀತಿ ಅಲ್ವಾ, ಮೊಬೈಲಾಯ ತಸ್ಮೈ ನಮಃ

ಕಾಲಾಯ ತಸ್ಮೈ ನಮಃ

ನವೀನ ಹೆಚ್ ಎ, ಹನುಮನಹಳ್ಳಿ ಕೆ.ಆರ್.ನಗರ


THE RAILWAY CO-OPERATIVE BANK LTD. MYSORE
ದಿ ರೈಲ್ವೆ ಕೋ-ಆಪರೇಟಿವ್ ಬ್ಯಾಂಕ್ ನಿ.,
THE RAILWAY CO-OPERATIVE BANK LTD
ಕೇಂದ್ರ ಕಛೇರಿ : ಶೇಷಾದ್ರಿ ಐಯ್ಯರ್ ರಸ್ತೆ, ಮೈಸೂರು - 570001
ಶಾಖೆಗಳು : ಬೆಂಗಳೂರು, ಅರಸೀಕೆರೆ, ಯಲಹಂಕ ಮತ್ತು ಮೈಸೂರು ರೈಲ್ವೆ ಕಾರ್ಯಾಗಾರ
ನಾಡಿನ ಸಮಸ್ತ ಜನತೆಗೆ ಮತ್ತು ರೈಲ್ವೆ ಕಾರ್ಮಿಕ ಬಂಧುಗಳಿಗೆ ಗೌರವಾನ್ವಿತ ರೈಲ್ವೆ ಬ್ಯಾಂಕಿನ
ಎಲ್ಲಾ ಸದಸ್ಯರುಗಳಿಗೆ ಹಾಗೂ ಠೇವಣಿದಾರರಿಗೆ ಮತ್ತು ಕುಟುಂಬದವರಿಗೆ
ಗೌರಿ ಗಣೇಶ ಹಬ್ಬದ ಶುಭಾಶಯಗಳು
105 ನೇ ವರ್ಷದ
ಶತಪಯಣದ ಸಂಭ್ರಮೋತ್ಸವ
ದಿನಾಂಕ : 06-09-2025ರಂದು
ಸ್ಥಳ : ಅಮೃತಮಹೋತ್ಸವ ಭವನ ಜೆ.ಕೆ ಗ್ರೌಂಡ್, ಮೈಸೂರು
ಡಾ. ಮಂಜೇಗೌಡ ಎಂ.ಬಿ.
ಅಧ್ಯಕ್ಷರು
ಡಾ. ಆನಂದ ಎಸ್.
ಉಪಾಧ್ಯಕ್ಷರು
Gold Loan
ಚಿನ್ನಾಭರಣ ಸಾಲ Gold Loan
ಬ್ಯಾಂಕಿನ ಸದಸ್ಯರುಗಳಿಗೆ ಮೈಸೂರಿನ ಕೇಂದ್ರ ಕಛೇರಿಯಲ್ಲಿ ಶೇ 9% ರ ಬಡ್ಡಿದರದಲ್ಲಿ
ಗರಿಷ್ಠ 25 ಲಕ್ಷದವರೆಗೆ ಚಿನ್ನಾಭರಣಗಳ ಮೇಲೆ ಸಾಲವನ್ನು ನೀಡಲಾಗುವುದು
ಹನುಮಂತ ನಿರ್ದೇಶಕರು
ಯೋಗಾನಂದ ಎಂ.ಬಿ. ನಿರ್ದೇಶಕರು
ಮುತ್ತುಕುಮಾರ್ ಎಸ್. ನಿರ್ದೇಶಕರು
ಚಂದ್ರಶೇಖರ ಆರ್. ನಿರ್ದೇಶಕರು
ಯತಿರಾಜು ಎಂ. ನಿರ್ದೇಶಕರು
ರಾಮನಾದನ್ ಸಿ. ನಿರ್ದೇಶಕರು
ಮಂಜುನಾಥ ಸಿ.ಹೆಚ್. ನಿರ್ದೇಶಕರು
ಶಿವಶಂಕರ್ ಸಿ. ನಿರ್ದೇಶಕರು
ಉತ್ತೇಜ್ ಎಸ್. ನಿರ್ದೇಶಕರು
ಶ್ವೇತಾ ಎಸ್. ನಿರ್ದೇಶಕರು
ನಿರ್ಮಲ ಸಿ. ನಿರ್ದೇಶಕರು
ಚಂದ್ರಶೇಖರ್ ಪಿ. ನಿರ್ದೇಶಕರು
ನಂದಕುಮಾರ್ ಎನ್. ಎಸ್. ನಿರ್ದೇಶಕರು
ಅವಧಿ ಠೇವಣಿಗೆ (Fixed Deposit)
ಕ್ರ. ಸಂ. | ವಿವರಗಳು | ಸಾಮಾನ್ಯ ನಾಗರೀಕರಿಗೆ/ ಅಂಗವಿಕಲರಿಗೆ/ ಟ್ರಸ್ಟ್‌ಗಳಿಗೆ ಮತ್ತು ಸಂಘ ಸಂಸ್ಥೆಗಳಿಗೆ | ಹಿರಿಯ ನಾಗರಿಕರಿಗೆ
1 | 31 ದಿನಗಳಿಂದ 90 ದಿನಗಳವರೆಗೆ | 4.25% | 4.75%
2 | 91 ದಿನಗಳಿಂದ 180 ದಿನಗಳವರೆಗೆ | 4.75% | 5.25%
3 | 181 ದಿನಗಳಿಂದ 364 ದಿನಗಳವರೆಗೆ | 5.75% | 6.25%
4 | 1 ವರ್ಷ ದಿಂದ 2 ವರ್ಷದವರೆಗೆ | 8.00% | 8.50%
5 | 2 ವರ್ಷ 1 ತಿಂಗಳ ಮೇಲ್ಪಟ್ಟು 5 ವರ್ಷದವರೆಗೆ | 8.25% | 8.75%


ಕರುನಾಡಿನ ಸಮಸ್ತ ಜನತೆಗೆ
ಗೌರಿ-ಗಣೇಶ ಹಬ್ಬದ
ಶುಭಾಶಯಗಳು


ಗೌರಿ–ಗಣೇಶ ಹಬ್ಬದ ಶುಭಾಶಯಗಳು
"ವಿಘ್ನ ವಿನಾಯಕ ಎಲ್ಲರ ಬಾಳಲ್ಲಿ ವಿಘ್ನಗಳ ನಿವಾರಿಸಿ ಸೌಖ್ಯ ತರಲಿ"
ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನಪರಿಷತ್ ಸದಸ್ಯರು
ಶ್ರೀ ಕೆ.ವಿವೇಕಾನಂದ
ಶ್ರೀ ಕೆ.ವಿವೇಕಾನಂದ ರವರ ಸ್ನೇಹ ಬಳಗ


ನಾಡಿನ ಜನತೆಗೆ ಗೌರಿ–ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು.
ಧರ್ಮ ವಿಘ್ನವನ್ನು ನಿವಾರಿಸಿ ಧರ್ಮ ವಿಜಯದ ಸಂದೇಶ ತಂದಿರುವ ವಿನಾಯಕನನ್ನು ಭಕ್ತಿಯಿಂದ ಪೂಜಿಸೋಣ, ಸಂಸ್ಕೃತಿಯ ನಾಡು, ಪರಂಪರೆಯ ರಾಷ್ಟ್ರವನ್ನು ಬೆಳಗುವಂತೆ ಪ್ರಾರ್ಥಿಸೋಣ.
ಆರ್ ರಘು
ಅಧ್ಯಕ್ಷರು
ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ
ಬಿಜೆಪಿ–ಕರ್ನಾಟಕ